




# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 7 ಸೋಮವಾರ 2023


ಸಂಪುಟ: 44 | ಸಂಚಿಕೆ: 113 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4







## ರಾಜ್ಯದ 13 ಸೇರಿ ದೇಶದ 508 ರೈಲು ನಿಲ್ದಾಣಗಳ
# ನವೀಕರಣಕ್ಕೆ ಶಂಕುಸ್ಥಾಪನೆ
### ಪ್ರಧಾನಿ ಮೋದಿ ಅವರಿಂದ ವರ್ಚುವಲ್ ಮೂಲಕ ಅಡಿಗಲ್ಲು





ದೇಶದಾದ್ಯಂತ 508 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಅಮೃತ ಭಾರತ ಸ್ಟೇಷನ್ ಯೋಜನೆಯಡಿ ಪ್ರಧಾನ ಮಂತ್ರಿ ಮೋದಿ ಅವರು ಭಾನುವಾರ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

**ನವದೆಹಲಿ,ಆ.6–ಅಮೃತ ಭಾರತ ಸ್ಟೇಷನ್ ಯೋಜನೆಯಡಿಯಲ್ಲಿ ದೇಶದಾದ್ಯಂತ 508 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಪ್ರಧಾನಿ ಮೋದಿ ಭಾನುವಾರ ವರ್ಚ್ಯುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು. ಈ ಮೂಲಕ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 508 ರೈಲು ನಿಲ್ದಾಣಗಳು ಮೇಲ್ದರ್ಜೆಗೇರಲಿವೆ.**

ಇಂದು ರೈಲ್ವೆ ವಲಯಕ್ಕೆ ಒಂದು ಹೆಗ್ಗುರುತು ದಿನ. ಐತಿಹಾಸಿಕ ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಭಾರತದಾದ್ಯಂತ 508 ರೈಲು ನಿಲ್ದಾಣಗಳನ್ನು ಪುನರಾಭಿವೃದ್ಧಿ ಮಾಡಲು ಅಡಿಪಾಯ ಹಾಕಲಾಗುತ್ತದೆ. ಸುಮಾರು 25,000 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವ ಯೋಜನೆ ಇದಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ವರ್ಚುವಲ್ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಅಭಿವೃದ್ಧಿಯ ಗುರಿಯ ಕಡೆಗೆ ಚಲಿಸುತ್ತಿರುವ ಭಾರತ ಈಗ ಸುವರ್ಣಯುಗದ ಆರಂಭದಲ್ಲಿದೆ. ಭಾರತೀಯರಲ್ಲಿ ಹೊಸ ಶಕ್ತಿ, ಹೊಸ ಉತ್ಸಾಹ, ಸ್ಫೂರ್ತಿ ಮತ್ತು ಹೊಸ ನಿರ್ಣಯ ಕಂಡು ಬರುತ್ತಿದೆ. ಈ ನಿಟ್ಟಿನಲ್ಲಿ, ಭಾರತೀಯ ರೈಲ್ವೆ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿದೆ. ಪ್ರತಿ ಅಮೃತ ನಿಲ್ದಾಣಗಳು ನಗರದ ಆಧುನಿಕ ಸ್ಫೂರ್ತಿ ಮತ್ತು ಪುರಾತನ ಸಂಪ್ರದಾಯಗಳನ್ನು ಬಿಂಬಿಸುತ್ತದೆ. ಭಾರತೀಯ ರೈಲ್ವೆಯನ್ನು ಆಧುನೀಕರಣಗೊಳಿಸಿ ಪರಿಸರ ಸ್ನೇಹಿಯನ್ನಾಗಿ ಮಾಡುವುದಕ್ಕೆ ನಾವು ಒತ್ತು ನೀಡುತ್ತೇವೆ ಎಂದರು.

**ಏನಿದು ಅಮೃತ ಭಾರತ ಸ್ಟೇಷನ್ ಯೋಜನೆ:** ಈ ಯೋಜನೆಯಡಿಯಲ್ಲಿ, ದೇಶಾದ್ಯಂತ ಒಟ್ಟು 1309 ರೈಲು ನಿಲ್ದಾಣಗಳನ್ನು ಪುನರಾಭಿವೃದ್ಧಿ ಮಾಡಲಾಗುತ್ತದೆ. ಒಟ್ಟು ವೆಚ್ಚ 24,470 ಕೋಟಿ ರೂ. ವೆಚ್ಚದಲ್ಲಿ ಪುನರಾಭಿವೃದ್ಧಿ ಕೈಗೊಳ್ಳಲಾಗುತ್ತದೆ. ಈ ನಿಲ್ದಾಣಗಳನ್ನು ನಗರದ ಎರಡೂ ಬದಿಗಳನ್ನು ಸರಿಯಾಗಿ ಸಂಯೋಜಿಸಿ ಸಿಟಿ ಸೆಂಟರ್‌ಗಳಾಗಿ ಅಭಿವೃದ್ಧಿಪಡಿಸಲು ಮಾಸ್ಟರ್ ಪ್ಲಾನ್ ಸಿದ್ಧಪಡಿಸಲಾಗುತ್ತಿದೆ. ದೇಶಾದ್ಯಂತ ಮೊದಲ ಹಂತದಲ್ಲಿ ಕೈಗೊಳ್ಳಲಾಗುವ 508 ನಿಲ್ದಾಣಗಳ ಮೇಲ್ದರ್ಜೆಗೇರಿಸುವ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ತಲಾ 55, ಬಿಹಾರದಲ್ಲಿ 49, ಮಹಾರಾಷ್ಟ್ರದಲ್ಲಿ 44, ಪಶ್ಚಿಮ ಬಂಗಾಳದಲ್ಲಿ 37, ▶ 8ನೇ ಪುಟಕ್ಕೆ

### ನವೀಕರಣ ಹೇಗೆ?

ಆಧುನಿಕ ಪ್ರಯಾಣಿಕರ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಈ ರೈಲು ನಿಲ್ದಾಣಗಳನ್ನು ಸಿದ್ಧಪಡಿಸಲಾಗುತ್ತದೆ. ಉತ್ತಮವಾಗಿ ವಿನ್ಯಾಸಗೊಳಿಸಲಾದ ಸಂಚಾರ ಸೌಲಭ್ಯದೊಂದಿಗೆ ನಿಲ್ದಾಣದ ಕಟ್ಟಡಗಳ ವಿನ್ಯಾಸವು ಸ್ಥಳೀಯ ಸಂಸ್ಕೃತಿ, ಪರಂಪರೆ ಮತ್ತು ವಾಸ್ತುಶಿಲ್ಪದಿಂದ ಪ್ರೇರಿತವಾಗಿರುತ್ತದೆ. ಈ ರೈಲು ನಿಲ್ದಾಣವು ಆ ನಗರ ಅಥವಾ ಸ್ಥಳದ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ.

> "ನಾವು ಅಮೃತ ಕಾಲಘಟ್ಟದ ಹೊಸ್ತಿಲಿನಲ್ಲಿದ್ದೇವೆ. ಅಭಿವೃದ್ಧಿಯೇ ನಮ್ಮ ಗುರಿ. ಭಾರತೀಯ ರೈಲ್ವೆ ಇತಿಹಾಸದಲ್ಲಿ ಹೊಸ ಶಕ್ತಿ ಸ್ಫೂರ್ತಿಯ ಹೊಸ ಅಧ್ಯಾಯ ಶುರುವಾಗಿದೆ. –ನರೇಂದ್ರ ಮೋದಿ, ಪ್ರಧಾನಿ

### ಕರ್ನಾಟಕದಲ್ಲಿ 13 ನಿಲ್ದಾಣ ನವೀಕರಣ

ಕರ್ನಾಟಕದಲ್ಲಿ ಮೊದಲ ಹಂತದಲ್ಲಿ 13 ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ. ನೈರುತ್ಯ ರೈಲ್ವೆಯು 172.7 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ ವಿಭಾಗದಲ್ಲಿ 6 ಮತ್ತು ಮೈಸೂರು ವಿಭಾಗದಲ್ಲಿ 2 ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಿದೆ. ಕೇಂದ್ರ ರೈಲ್ವೆಯಿಂದ 3 ದಕ್ಷಿಣ ಕೇಂದ್ರ ರೈಲ್ವೆ ಹಾಗೂ ದಕ್ಷಿಣ ರೈಲ್ವೆಯಿಂದ ತಲಾ ಒಂದೊಂದು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

### ಮೇಲ್ದರ್ಜೆಗೇರುತ್ತಿರುವ ನಿಲ್ದಾಣಗಳು

● ಘಟಪ್ರಭ ● ಗೋಕಾಕ್ ರಸ್ತೆ ● ಅಳ್ನಾವರ ● ಬಳ್ಳಾರಿ ● ಕೊಪ್ಪಳ ● ಗದಗ ● ಹರಿಹರ ● ಅರಸೀಕೆರೆ ● ಕಲಬುರಗಿ ● ಷಹಾಬಾದ್ ● ವಾಡಿ ● ಬೀದರ್ ● ಮಂಗಳೂರು ಜಂಕ್ಷನ್

## ಇಂದಿನಿಂದ ಇಂದ್ರ ಧನುಷ್ ಮಿಷನ್ ಲಸಿಕೆ ಪ್ರಾರಂಭ

ಬೆಂಗಳೂರು,ಆ.6–ರಾಷ್ಟ್ರೀಯ ಪ್ರತಿರಕ್ಷಣಾ ವೇಳಾಪಟ್ಟಿಯಲ್ಲಿ ಗುರುತಿಸಲಾದ ಎಲ್ಲಾ ಲಸಿಕೆಗಳ ಪ್ರತಿರಕ್ಷಣೆ ವ್ಯಾಪ್ತಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಇಂದ್ರಧನುಷ್ ಮಿಷನ್ 5.0 ನಾಳೆ (ಸೋಮವಾರ)ಯಿಂದ ಕರ್ನಾಟಕದಲ್ಲಿ ಪ್ರಾರಂಭವಾಗಲಿದೆ. ಈ ಅಭಿಯಾನದಲ್ಲಿ ಗರ್ಭಿಣಿಯರು ಮತ್ತು ಲಸಿಕೆಯಿಂದ ವಂಚಿತರಾದ ಮಕ್ಕಳಿಗೆ ವಿಶೇಷ ಪ್ರಯೋಜನವನ್ನು ನೀಡಲಾಗುವುದು.



ಮಿಷನ್ ಇಂದ್ರಧನುಷ್ 5.0 ಅನ್ನು 3 ಹಂತಗಳಲ್ಲಿ ಆಯೋಜಿಸಲಾಗುವುದು. ಇದರಲ್ಲಿ ಮೊದಲ ಹಂತವು ಆ.7ರಿಂದ 12ರವರೆಗೆ, 2ನೇ ಹಂತವು ಸೆ.11ರಿಂದ 16ರವರೆಗೆ ಮತ್ತು 3ನೇ ಹಂತವು ಅ.9 ರಿಂದ 14ರವರೆಗೆ ನಡೆಯಲಿದೆ. ಪ್ರತಿ ಹಂತವು 6–6 ದಿನಗಳವರೆಗೆ ಇರುತ್ತದೆ. ಒಟ್ಟಾರೆಯಾಗಿ, ಕರ್ನಾಟಕದಲ್ಲಿ 16,516 ಅಪಾಯಕಾರಿ ಪ್ರದೇಶಗಳಿಂದ 1,65, 000 ಮಕ್ಕಳು (0–5 ವಯಸ್ಸಿನವರು) ಮತ್ತು 32, 917 ಗರ್ಭಿಣಿಯರಿಗೆ ಲಸಿಕೆ ಹಾಕಲು ಗುರುತಿಸಲಾಗಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-5ರ ಪ್ರಕಾರ, ಕರ್ನಾಟಕವು ಶೇ.84.1ರಷ್ಟು ಪ್ರತಿರಕ್ಷಣೆ ವ್ಯಾಪ್ತಿ ಹೊಂದಿದೆ. ಶೇ.91ರಷ್ಟು ದಡಾರ/ ರುಬೆಲ್ಲಾ–1 ವ್ಯಾಪ್ತಿ ಹೊಂದಿದೆ.

## ರೈಲು ಪ್ರಯಾಣ ದರ ಏರಿಕೆ ಇಲ್ಲ





ನವದೆಹಲಿ, ಆ.6– ನಿಲ್ದಾಣಗಳ ಪುನರಾಭಿವೃದ್ಧಿ ಯೋಜನೆ ಹೆಸರಿನಲ್ಲಿ ರೈಲುಗಳ ಪ್ರಯಾಣ ದರವನ್ನು ಏರಿಕೆ ಮಾಡುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ದೇಶಾದ್ಯಂತ 508 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಶಂಕುಸ್ಥಾಪನೆ ಬಳಿಕ ಮಾತನಾಡಿದ ಅವರು, ರೈಲು ನಿಲ್ದಾಣಗಳ ಪುನರಾಭಿವೃದ್ಧಿ ಯೋಜನೆಗೆ ಅಗತ್ಯವಿರುವ 25 ಸಾವಿರ ಕೋಟಿಯನ್ನು ಪ್ರಸ್ತುತ ಬಜೆಟ್ ಮೂಲಕ ಹಂಚಿಕೆ ಮಾಡಲಾಗುವುದು.ಈ ಯೋಜನೆಯು ಸಮಾಜದ ಎಲ್ಲಾ ಸ್ತರಗಳಲ್ಲಿನ ಪ್ರಯಾಣಿಕರಿಗೆ ತಡೆರಹಿತ ಪ್ರಯಾಣವನ್ನು ಸುಲಭಗೊಳಿಸುವ ಗುರಿಯನ್ನು ಹೊಂದಿದೆ ಎಂದು ಹೇಳಿದರು. ಸಮಾಜದ ಎಲ್ಲ ಸ್ತರಗಳ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಗುರಿಯನ್ನು ಯೋಜನೆ ಹೊಂದಿದೆ. ಸಾಮಾನ್ಯ ಜನರ ಬದುಕನ್ನು ಉನ್ನತ ಮಟ್ಟಕ್ಕೇರಿಸಲು ಮೋದಿ ಅವರು ಕಾರ್ಯ ಪ್ರವೃತ್ತರಾಗಿದ್ದಾರೆ. ರೈಲು ನಿಲ್ದಾಣಗಳನ್ನು ನವೀಕರಿಸುವ ಯೋಜನೆಯು ಇದರ ಭಾಗವಾಗಿದೆ ಎಂದು ಹೇಳಿದ್ದಾರೆ.

ಪ್ರಧಾನಿ ಮೋದಿ ಸಾಮಾನ್ಯ ಜನರ ಜೀವನವನ್ನು ಉನ್ನತೀಕರಿಸಲು ಕೆಲಸ ಮಾಡುತ್ತಿದ್ದಾರೆ. ನಿಲ್ದಾಣದ ಪುನರಾಭಿವೃದ್ಧಿಯ ಉದ್ದೇಶವೂ ಅದೇ ಆಗಿದೆ. ಅವರು ಯಾವುದೇ ಹೊರೆಯಿಲ್ಲದೆ ವಿಶ್ವದರ್ಜೆಯ ನಿಲ್ದಾಣಗಳನ್ನು ಹೊಂದಬೇಕೆಂದು ನಾವು ಬಯಸುತ್ತೇವೆ. ನಿಲ್ದಾಣದ ಪುನರಾಭಿವೃದ್ಧಿ ಹೆಸರಿನಲ್ಲಿ ನಾವು ಪ್ರಯಾಣ ದರವನ್ನು ಹೆಚ್ಚಿಸಿಲ್ಲ ಅಥವಾ ಶುಲ್ಕವನ್ನು ನಿಗದಿಪಡಿಸಿಲ್ಲ. ದೇಶದಲ್ಲಿ ಸುಮಾರು ▶ 8ನೇ ಪುಟಕ್ಕೆ

## ಅಯೋಧ್ಯೆಯ ರಾಮಮಂದಿರಕ್ಕೆ 400 ಕೆಜಿ ತೂಕದ ಬೀಗ ತಯಾರಿ



ಅಲಿಗಢ,ಆ.6–ಕೈಯಿಂದ ಮಾಡಿದ ಬೀಗಗಳಿಗೆ ಹೆಸರುವಾಸಿಯಾಗಿರುವ ಅಲಿಗಢದ ಹಿರಿಯ ಕುಶಲಕರ್ಮಿಯೊಬ್ಬರು ಅಯೋಧ್ಯೆಯ ರಾಮ ಮಂದಿರಕ್ಕೆ 400 ಕೆಜಿ ತೂಕದ ಬೀಗ ತಯಾರಿಸಿದ್ದಾರೆ. ಅಯೋಧ್ಯೆಯ ರಾಮಮಂದಿರ ಮುಂದಿನ ವರ್ಷ ಜನವರಿಯಲ್ಲಿ ಭಕ್ತರ ದರ್ಶನಕ್ಕೆ ಮುಕ್ತಗೊಳಿಸುವ ಸಾಧ್ಯತೆ ಇದೆ. ಭಗವಾನ್ ರಾಮನ ಕಟ್ಟಾ ಭಕ್ತರಾದ ಕುಶಲಕರ್ಮಿ ಸತ್ಯ ಪ್ರಕಾಶ್ ಶರ್ಮಾ, ಈ ವರ್ಷದ ಕೊನೆಯಲ್ಲಿ ರಾಮ ಮಂದಿರಕ್ಕೆ ಉಡುಗೊರೆಯಾಗಿ ನೀಡಲು ವಿಶ್ವದ ಅತಿದೊಡ್ಡ ▶ 8ನೇ ಪುಟಕ್ಕೆ


**SITE FOR SALE**
Last few **SITES** available in following **LAYOUTS**
PRAKRUTHI ENCLAVE
DRISTI ELEGANCE
MRIGASHIRA
Located near Mysore Airpot
For more details contact:
+91 96866 66771

**DGF JEWELLERS**
NO Wastage ₹ 5350 Making Charges
916 Hall Mark
ಚಿನ್ನದ ಒಡವೆಗಳನ್ನು ಖರೀದಿಸಿಕೊಳ್ಳಿ
8884171888

**SDJ GOLD**
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 6600
8884304444

**ಬೇಕಾಗಿದ್ದಾರೆ**
ಮೈಸೂರಿನ ಖಾಸಗಿ ಕಂಪನಿಗೆ, ಮಹಿಳೆ ಮತ್ತು ಪುರುಷರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
ಸಮಯ: 6-2 ಮತ್ತು 2-10 ರವರೆಗೆ ಶಿಫ್ಟ್‌ನಲ್ಲಿ ಕೆಲಸ.
ಸಂಬಳ:15,000-16,000
9743000798



## ಬಿಜೆಪಿ ಶಾಸಕ ಚಂದ್ರಪ್ಪ ಹೆಸರು ಬರೆದಿಟ್ಟು ಗ್ರಾಪಂ ನೌಕರ ಆತ್ಮಹತ್ಯೆ

ಚಿತ್ರದುರ್ಗ, ಆ.6– ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಉಪ್ಪರಿಗೇನಹಳ್ಳಿ ಗ್ರಾಮ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕ(ಎಸ್‌ಡಿಎ) ತಿಪ್ಪೇಸ್ವಾಮಿ ಅವರು ಹೊಳಲ್ಕೆರೆ ಬಿಜೆಪಿ ಶಾಸಕ ಎಂ. ಚಂದ್ರಪ್ಪ ಅವರ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಭಾನುವಾರ ನಡೆದಿದೆ.



ತಿಪ್ಪೇಸ್ವಾಮಿ

ತಿಪ್ಪೇಸ್ವಾಮಿ ಅವರು ನಿನ್ನೆ ಹೊಸದುರ್ಗ ತಾಲೂಕಿನ ಜಾನಕಲ್ ಬಳಿ ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶಾಸಕ ಎಂ.ಚಂದ್ರಪ್ಪ ಅವರ ಅಮಾನತು ಬೆದರಿಕೆ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ತಿಪ್ಪೇಸ್ವಾಮಿ ಅವರು ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದಾರೆ. ಈ ಸಂಬಂಧ ಮೃತ ತಿಪ್ಪೇಸ್ವಾಮಿ ಅವರ ಪುತ್ರ ರಾಜಶೇಖರಪ್ಪ ಎನ್ನುವರು ಹೊಸದುರ್ಗ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆದರೆ ದೂರಿನಲ್ಲಿ ಶಾಸಕ ಎಂ.ಚಂದ್ರಪ್ಪ ತಾಲೂಕು ಪಂಚಾಯಿತಿ ಇಓ ರವಿ ಹೆಸರು ಉಲ್ಲೇಖವಿಲ್ಲ. ಸ್ವತಃ ತಿಪ್ಪೇಸ್ವಾಮಿಯೇ ನಿರ್ದಿಷ್ಟವಾಗಿ ಶಾಸಕರ ಹೆಸರು ಬರೆದಿಟ್ಟ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೂ ಇದೀಗ ದೂರಿನಲ್ಲಿ ಅವರ ಹೆಸರು ಇಲ್ಲದಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದೆ.





ಚಂದ್ರಪ್ಪ

**ಪತ್ರದ ಸಾರಾಂಶ:** ಈ ಮೂಲಕ ಎಲ್ಲರಿಗೂ ಕೊನೆಯ ಶುಭಾಶಯಗಳು. ಪತ್ರ ಬರೆದ ಉದ್ದೇಶವೇನೆಂದರೆ ನಾನು ಉಪ್ಪರಿಗೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದೆ. ನಾನು ಸಾಯಲು ಕಾರಣವೇನೆಂದರೆ ಪಂಚಾಯಿತಿಯಲ್ಲಿ ಬಹಳ ಕಿರುಕುಳ ▶ 8ನೇ ಪುಟಕ್ಕೆ

### ಮಾನಹಾನಿ ಪ್ರಕರಣದಲ್ಲಿ ಶಿಕ್ಷೆಗೆ ಸುಪ್ರೀಂಕೋರ್ಟ್ ತಡೆ
## ರಾಹುಲ್ ಗಾಂಧಿ ಸಂಸದ ಸ್ಥಾನ ಅನರ್ಹತೆ ತೆರವು ಬಗ್ಗೆ ಇಂದು ಸ್ಪೀಕರ್ ನಿರ್ಧಾರ ಸಾಧ್ಯತೆ



ನವದೆಹಲಿ, ಆ.6– ಮಾನಹಾನಿ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ವಿಧಿಸಿರುವ ಎರಡು ವರ್ಷ ಜೈಲು ಶಿಕ್ಷೆಗೆ ಸುಪ್ರೀಂಕೋರ್ಟ್ ತಡೆ ನೀಡಿರುವ ಹಿನ್ನೆಲೆಯಲ್ಲಿ ಅವರ ಸಂಸದ ಸ್ಥಾನ ಅನರ್ಹತೆಯನ್ನು ತೆರವು ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದ್ದು, ನಾಳೆ (ಸೋಮವಾರ) ಸ್ಪೀಕರ್ ಕೈಗೊಳ್ಳುವ ನಿರ್ಣಯದ ಮೇಲೆ ಎಲ್ಲರ ಚಿತ್ತ ನೆಟ್ಟಿದೆ.

ಮಾನಹಾನಿ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ವಿಧಿಸಿರುವ ಎರಡು ವರ್ಷ ಜೈಲು ಶಿಕ್ಷೆಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆ ನೀಡಿದೆ. ಇದರಿಂದ ಅವರು ಸಂಸದ ಸ್ಥಾನವನ್ನು ಮರಳಿ ಪಡೆಯಬಹುದು ಎನ್ನಲಾಗಿದ್ದು, ರಾಹುಲ್ ಗಾಂಧಿಗೆ ಸಂಸದ ಸ್ಥಾನ ಮರಳಿಸುವ ಕುರಿತು ಸ್ಪೀಕರ್ ಓಂ ಬಿರ್ಲಾ ಅವರು ನಾಳೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ. ಮಾತ್ರವಲ್ಲದೇ ರಾಹುಲ್ ಗಾಂಧಿ ಅವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಇದ್ದ ತಡೆಯ ಆತಂಕ ಕೂಡ ನಿವಾರಣೆಯಾಗಿದೆ.

'ಮೋದಿ ಸರ್‌ನೇಮ್' ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸೂರತ್ ನ್ಯಾಯಾಲಯವು ವಿಧಿಸಿರುವ ಶಿಕ್ಷೆಗೆ ಸುಪ್ರೀಂಕೋರ್ಟ್ ಶುಕ್ರವಾರ ತಡೆ ನೀಡಿತ್ತು. ಇದರಿಂದ ರಾಹುಲ್ ಗಾಂಧಿ ಅವರು ಸಂಸದ ಸ್ಥಾನವನ್ನು ಮರಳಿ ಪಡೆಯಲಿದ್ದಾರೆ. ಮಾನಹಾನಿ ಪ್ರಕರಣದಲ್ಲಿ ಕೆಳ ನ್ಯಾಯಾಲಯ ನೀಡಿದ್ದ ಎರಡು ವರ್ಷಗಳ ಶಿಕ್ಷೆಯನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಈಗ ಆ ಶಿಕ್ಷೆಗೆ ತಡೆ ಬಂದಿರುವುದರಿಂದ ರಾಹುಲ್ ಗಾಂಧಿ ಅವರು ಕಳೆದುಕೊಂಡಿದ್ದ ಸಂಸತ್ ಸದಸ್ಯತ್ವ ವಾಪಸ್ ಸಿಕ್ಕಂತಾಗಿದೆ. ಸೂರತ್ ನ್ಯಾಯಾಲಯವು ರಾಹುಲ್ ಗಾಂಧಿಗೆ 2 ವರ್ಷಗಳ ಗರಿಷ್ಠ ಶಿಕ್ಷೆ ವಿಧಿಸಿತ್ತು. ಈ ಶಿಕ್ಷೆಯು ಒಂದೇ ಒಂದು ದಿನ ಕಡಿಮೆಯಾಗಿದ್ದರೂ, ಅವರು ಲೋಕಸಭಾ ಸದಸ್ಯತ್ವದ ಅನರ್ಹತೆಗೆ ಒಳಗಾಗುತ್ತಿರಲಿಲ್ಲ ಎಂಬುದನ್ನು ಸುಪ್ರೀಂಕೋರ್ಟ್ ಗಮನಿಸಿತ್ತು.

**ಕಾಗದ ಪತ್ರಗಳ ಸಿದ್ಧತೆ:** ಕಾಂಗ್ರೆಸ್ಸಿನ ರಾಹುಲ್ ಗಾಂಧಿಯವರ ಸಂಸದ ಸ್ಥಾನದ ಮರುಸ್ಥಾಪನೆಯ ಕಾಗದ ಪತ್ರಗಳು ಸಿದ್ಧವಾಗಿವೆ ▶ 8ನೇ ಪುಟಕ್ಕೆ

## ಆ.31, ಸೆ.1ರಂದು ಮುಂಬೈನಲ್ಲಿ 26 ವಿರೋಧ ಪಕ್ಷಗಳ ಒಕ್ಕೂಟದ 3ನೇ ಸಭೆ

ಬೆಂಗಳೂರು, ಆ.6– 26 ವಿರೋಧ ಪಕ್ಷಗಳ ಒಕ್ಕೂಟದ ಮೂರನೇ ಸಭೆಯು ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ಮುಂಬೈನಲ್ಲಿ ನಡೆಯಲಿದೆ. ಮೈತ್ರಿ ಕೂಟದ ಪ್ರಮುಖ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಶರದ್ ಪವಾರ್, ಉದ್ಧವ್ ಠಾಕ್ರೆ ಮತ್ತು ಐದು ರಾಜ್ಯಗಳ ಮುಖ್ಯಮಂತ್ರಿಗಳು ಶಿವಸೇನೆ ಆಯೋಜಿಸುವ ಎರಡು ದಿನಗಳ ಸಭೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಶರದ್ ಪವಾರ್ ಅವರು ಭಾರತ ಒಕ್ಕೂಟದ ಮೂರನೇ ಸಭೆಯ ಸಿದ್ಧತೆಗಳ ಕುರಿತು ಚರ್ಚಿಸಲು ನಿನ್ನೆ ಮಧ್ಯಾಹ್ನ ಮುಂಬೈಯ ನೆಹರು ಕೇಂದ್ರದಲ್ಲಿ ಮಹಾರಾಷ್ಟ್ರ ವಿಕಾಸ್ ಅಘಾಡಿ ಘಟಕಗಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆ.31ರಂದು 26 ವಿರೋಧ ಪಕ್ಷಗಳ ಎಲ್ಲಾ ಪ್ರಮುಖ ನಾಯಕರಿಗೆ ಔತಣಕೂಟದ ನಂತರ, ಸೆ.1ರಂದು ಸಭೆಗಳು ನಡೆಯಲಿದೆ. ರಾಹುಲ್ ಗಾಂಧಿ, ಉದ್ಧವ್ ಠಾಕ್ರೆ ಮತ್ತು ಶರದ್ ಪವಾರ್ ಅವರಲ್ಲದೆ, ನಿತೀಶ್‌ಕುಮಾರ್ (ಬಿಹಾರ), ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ), ಎಂಕೆ ಸ್ಟಾಲಿನ್ (ತಮಿಳುನಾಡು), ಅರವಿಂದ್ ಕೇಜ್ರಿವಾಲ್ (ದೆಹಲಿ), ಭಗವಂತ್ ಮಾನ್(ಪಂಜಾಬ್) ಸೇರಿದಂತೆ 5 ರಾಜ್ಯಗಳ ಸಿಎಂಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಒಕ್ಕೂಟದ ಮೊದಲ ಸಭೆ ಜೂನ್ ತಿಂಗಳಲ್ಲಿ ಪಾಟ್ನಾದಲ್ಲಿ ಮತ್ತು 2ನೇ ಸಭೆ ಜುಲೈನಲ್ಲಿ ಬೆಂಗಳೂರಲ್ಲಿ ನಡೆಸಲಾಗಿತ್ತು.

### ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ದರ ಪಾವತಿ ತಪ್ಪಿಸಿಕೊಳ್ಳಲು ಟೋಲ್ ಬಿಟ್ಟು
# ಸರ್ವೀಸ್ ರಸ್ತೆಯಿಂದಲೇ ಎಕ್ಸ್‌ಪ್ರೆಸ್ ವೇಗೆ ನುಗ್ಗುವ ವಾಹನಗಳು

● ದುಬಾರಿ ಟೋಲ್ ದರ ಮೂಲ ಕಾರಣ ● ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೂ ನಷ್ಟ ● ಹಣ ಉಳಿತಾಯಕ್ಕೆ ಚಾಲಕರ ಪ್ಲಾನ್






■ ಬಾಪುಲಿಂಗರಾಜ್ ಅರಸ್

ಮೈಸೂರು,ಆ.6–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇನಲ್ಲಿ ಟೋಲ್ ಹಣ ಪಾವತಿಸದೆ ಕೆಲ ಚಾಲಕರು ಕಳ್ಳ ಮಾರ್ಗ ಕಂಡುಕೊಂಡಿದ್ದಾರೆ. ಎಕ್ಸ್‌ಪ್ರೆಸ್ ವೇನಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರು ಟೋಲ್ ಹಣದಿಂದ ತಪ್ಪಿಸಿಕೊಳ್ಳದಂತೆ ಹಲವು ಕ್ರಮ ಕೈಗೊಂಡಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಚಾಪೆ ಕೆಳಗೆ ನುಗ್ಗಿದರೆ, ಚಾಲಕರು ರಂಗೋಲಿ ಕೆಳಗೆ ನುಸುಳಿ ಟೋಲ್ ಹಣ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ಪ್ಲಾಜಾದಲ್ಲಿ ನಿಗದಿ ಮಾಡಿರುವ ಹಣ ದುಬಾರಿ ಎಂಬ ಆರೋಪವಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕೇವಲ ಮೂರು ತಿಂಗಳ ಅವಧಿಯಲ್ಲಿ ಎರಡು ಬಾರಿ ಟೋಲ್ ದರ ಪರಿಷ್ಕರಣೆ ಮಾಡಿದ್ದಾರೆ. ಒಂದೊಂದು ಬಾರಿ ಟೋಲ್ ದರ ಹೆಚ್ಚಳ ಮಾಡುವಾಗಲೂ ಹಲವು ಸಂಘಟನೆಗಳು ತೀವ್ರ ರೀತಿಯ ಪ್ರತಿಭಟನೆಗಳನ್ನು ನಡೆಸಿದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೇರ್ ಮಾಡಿಲ್ಲ.

ಮೈಸೂರಿನಿಂದ ಬೆಂಗಳೂರಿಗೆ ನೇರವಾಗಿ ಬೇಗ ಹೋಗಲು ಇದೊಂದೇ ಸುಲಭ ಮಾರ್ಗವಾಗಿದೆ. ಈ ಕಾರಣ ಟೋಲ್ ದರ ಎಷ್ಟೇ ಹೆಚ್ಚಳ ಮಾಡಿದರೂ ಅನಿವಾರ್ಯವಾಗಿ ಪಾವತಿ ಮಾಡುತ್ತಾರೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸರ್ವಾಧಿಕಾರ ಧೋರಣೆ ತಳೆದಿದೆ. ಇದರಿಂದ ಒಂದು ದಿನದ ಅವಧಿಯಲ್ಲಿ ಮೈಸೂರಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಸಂಚರಿಸಿದರೆ 485 ರೂ. ಟೋಲ್ ಹಣ ಪಾವತಿಸಬೇಕಾಗುತ್ತದೆ. 24 ಗಂಟೆ ಬಿಟ್ಟು ಬಂದರೆ 630 ರೂಪಾಯಿ ಪಾವತಿ ಮಾಡಬೇಕಿದೆ. ಇದು ಜನಸಾಮಾನ್ಯರಿಗೆ ಹೊರೆಯಾಗಿದೆ ಎಂದ ಆರೋಪವಿದೆ.

ಈ ಕಾರಣದಿಂದ ಬುದ್ಧಿವಂತ ವಾಹನ ಚಾಲಕರು ಟೋಲ್ ಪಾವತಿಯಿಂದ ತಪ್ಪಿಸಿಕೊಳ್ಳಲು ಕಳ್ಳ ದಾರಿ ಹುಡುಕಿಕೊಂಡಿದ್ದಾರೆ. ಮೈಸೂರಿಂದ ಬೆಂಗಳೂರಿಗೆ ಹೋಗುವ ಕೆಲವರು ಎಕ್ಸ್‌ಪ್ರೆಸ್ ಹೈವೇ ಬಿಟ್ಟು ಸರ್ವೀಸ್ ರೋಡ್‌ನಲ್ಲಿ ಸಾಗುತ್ತಾರೆ. ಆದರೆ ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಬಿಟ್ಟು ತೂಬಿನಕೆರೆ ಮುಂದೆ ಸರ್ವೀಸ್ ರೋಡ್‌ನಿಂದ ಎಕ್ಸ್‌ಪ್ರೆಸ್ ವೇಗೆ ಸೇರಲು ಬಲಕ್ಕೆ ಇರುವ ಹಾದಿ ಹಿಡಿಯುತ್ತಾರೆ. ಅಲ್ಲಿಂದ ಸುಲಭವಾಗಿ ಎಕ್ಸ್‌ಪ್ರೆಸ್ ಹೈವೇನಲ್ಲಿ ಸಾಗುವ ವಾಹನ ಸವಾರರು ಕಣ್ಮಿಣಿಕೆ ಟೋಲ್ ಪ್ಲಾಜಾ ಹಿಂದೆ ಸತ್ವ ಅಪಾರ್ಟ್‌ಮೆಂಟ್ ಬಳಿ ಎಡಕ್ಕೆ ತಿರುಗಿ ಸರ್ವೀಸ್ ರೋಡ್‌ನಲ್ಲಿ ಸಾಗುತ್ತಾರೆ. ಸುಮಾರು 10 ಕಿಲೋಮೀಟರ್ ಸರ್ವೀಸ್ ರಸ್ತೆಯಲ್ಲೇ ಸಾಗುವ ವಾಹನ ಸವಾರರು ನೈಸ್ ರೋಡ್ ಹಿಂದೆ ಬೆಂಗಳೂರಿನ ಮುಖ್ಯ ರಸ್ತೆಗೆ ಸೇರಿಕೊಳ್ಳುತ್ತಾರೆ. ಇದರಿಂದ ವಾಹನ ಸವಾರರು ಗಣಂಗೂರು ಹಾಗೂ ಕಣ್ಮಿಣಿಕೆ ಟೋಲ್‌ನಲ್ಲಿ ಹಣ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರದ ಮಧ್ಯೆ ಸರ್ವೀಸ್ ರಸ್ತೆ ಹಾಗೂ ಎಕ್ಸ್‌ಪ್ರೆಸ್ ವೇ ಕೂಡಲು ಹಲವು ಹಾದಿಗಳಿವೆ. ಇದರಿಂದ ಬಹಳಷ್ಟು ವಾಹನ ಸವಾರರು ಇದನ್ನು ಸದುಪಯೋಗಪಡಿಸಿಕೊಂಡು ಟೋಲ್ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಆದರೆ ಹಣವುಳ್ಳ ಶ್ರೀಮಂತರು ಹಣ ಉಳಿಸಲು ಇಷ್ಟೆಲ್ಲಾ ರಿಸ್ಕ್ ತೆಗೆದು ಕೊಳ್ಳದೆ ಟೋಲ್‌ನಲ್ಲೇ ಸಾಗುತ್ತಾರೆ. ಇನ್ನು ಬೆಂಗಳೂರಿನಿಂದ ಮೈಸೂರಿಗೆ ಬರುವಾಗಲೂ ಕೂಡ ಹಲವರು ಕಳ್ಳಮಾರ್ಗ ಕಂಡುಕೊಂಡಿದ್ದಾರೆ. ಬೆಂಗಳೂರಿನಿಂದ ಹೊರಡುವ ವಾಹನ ಸವಾರರು ಎಕ್ಸ್‌ಪ್ರೆಸ್ ವೇ ಬಿಟ್ಟು ಸರ್ವೀಸ್ ರಸ್ತೆಯಲ್ಲೇ ಸಾಗುತ್ತಾರೆ. ಆದರೆ ಬಿಡದಿ ಬಳಿ ▶ 8ನೇ ಪುಟಕ್ಕೆ

ಮೈಸೂರಿಂದ ತೂಬಿನಕೆರೆವರೆಗೆ ಹಾಗೂ ಕಣ್ಮಿಣಿಕೆಯಿಂದ ನೈಸ್ ರೋಡ್ ಜಂಕ್ಷನ್ ತನಕ ಸರ್ವೀಸ್ ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿದೆ. ಎಡಿಜಿಪಿ ಅಲೋಕ್‌ಕುಮಾರ್ ಅವರು ಹೇಳುವಂತೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಹಲವು ಅಪಘಾತ ವಲಯಗಳಿವೆ. ಜೊತೆಗೆ ಕೆಲವು ಅಧ್ವಾನಗಳು ಕೂಡ ಇದೆ. ಒಟ್ಟಾರೆ ಸಾವಿರಾರು ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಈ ಯೋಜನೆಯಲ್ಲಿ ಹತ್ತು ಹಲವು ಲೋಪದೋಷಗಳಿವೆ. ದುಬಾರಿ ಟೋಲ್ ದರ ನಿಗದಿ ಮಾಡಿರುವ ಕಾರಣ ವಾಹನ ಸವಾರರು ಕಳ್ಳದಾರಿ ಕಂಡುಕೊಂಡಿದ್ದಾರೆ. ಇದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನಷ್ಟ ಕೂಡ ಆಗುತ್ತಿದೆ. ಟೋಲ್ ಪ್ಲಾಜಾಗಳಲ್ಲಿ ಕಡಿಮೆ ದರ ನಿಗದಿ ಮಾಡಿದರೆ ಯಾರೂ ಕೂಡ ಕಳ್ಳ ದಾರಿ ಹಿಡಿಯದೆ ಟೋಲ್ ದರ ಪಾವತಿಸಿ ಪ್ರಯಾಣಿಸುತ್ತಾರೆ. ಆದರೆ ಈ ವಾಸ್ತವತೆ ದೆಹಲಿಯಲ್ಲಿ ಕುಳಿತಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳಿಗೆ ಯಾವಾಗ ತಿಳಿಯುತ್ತದೆಯೋ ಕಾದು ನೋಡಬೇಕಿದೆ.




# ಹಿಂದುಳಿದ ವರ್ಗಗಳಿಗೆ ಯೋಜನೆ ರೂಪಿಸಲು ಜಾತಿ ಜನಗಣತಿ ವರದಿ ಬಿಡುಗಡೆ ಅವಶ್ಯ

## ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ

ಮೈಸೂರು,ಆ.6(ಬಿಎಲ್‌ಯು)– ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸರ್ಕಾರದ ಯೋಜನೆಗಳನ್ನು ರೂಪಿಸಲು ಜಾತಿ ಜನಗಣತಿ ವರದಿ ಬಿಡುಗಡೆ ಅತ್ಯವಶ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ವಿಶ್ವಕರ್ಮ ಹಾಸ್ಟೆಲ್ ಆವರಣದಲ್ಲಿ ಶ್ರೀ ವಿಶ್ವಕರ್ಮ ವಿದ್ಯಾವರ್ಧಕ ಸಂಘ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಜಾತಿ ಜನಗಣತಿ ವರದಿ ಬಂದ ಮೇಲೆ ಆಯಾ ಸಮುದಾಯಕ್ಕೆ ತಕ್ಕಂತೆ ಅನುದಾನ ಮೀಸಲಿಡಲು ಸಹಕಾರಿಯಾಗುತ್ತದೆ ಎಂದರು.

ಶೋಷಿತ ಸಮುದಾಯಗಳು ಸಂವಿಧಾನದಲ್ಲಿ ಸಿಗುವ ಅವಕಾಶಗಳನ್ನು ಬಳಸಿಕೊಂಡು ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಮುಂದೆ ಬರಬೇಕು. ಹೀಗೆ ರಾಜಕೀಯವಾಗಿ ಅಧಿಕಾರಕ್ಕೆ ಬಂದವರು ಪಕ್ಷಭೇದ ಮರೆತು ಒಂದಾಗಬೇಕು. ಒಟ್ಟಾರೆ ಅಧಿಕಾರದ ಕೀ ಶೋಷಿತ ಸಮುದಾಯಗಳ ಕೈಯಲ್ಲಿ ಇರಬೇಕು. ಈ ಮೂಲಕ ಸೂಕ್ಷ್ಮಾತಿ ಸೂಕ್ಷ್ಮ ಸಮಾಜಕ್ಕೆ ಇತರೆ ಸಮುದಾಯಗಳಿಂದ ಗೌರವ ಸಿಗಬೇಕು. ಜೊತೆಗೆ ರಕ್ಷಣೆ ಕೂಡ ಸಿಗಬೇಕು ಎಂದು ಡಾ.ಮಹದೇವಪ್ಪ ಹೇಳಿದರು.

ವಿಶ್ವಕರ್ಮ ಸಮುದಾಯದ ಹಾಸ್ಟೆಲ್ ನಿರ್ಮಾಣವಾದರೆ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅನುಕೂಲವಾಗುತ್ತದೆ. ಈ ಹಿನ್ನೆಲೆ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಿಂದ 2 ಕೋಟಿ ರೂ. ಅನುದಾನ ದೊರಕಿಸಲು ಪ್ರಯತ್ನ ಮಾಡುತ್ತೇನೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸುತ್ತೇನೆ ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ಇದೇ ವೇಳೆ ವಿಶ್ವಕರ್ಮ ಸಮುದಾಯದ ಮುಖಂಡರು ಡಾ.ಮಹದೇವಪ್ಪ ಅವರಿಗೆ ಮೈಸೂರು ಪೇಟ ತೊಡಿಸಿ, ಸನ್ಮಾನಿಸಿದರು. ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ, ನಗರಪಾಲಿಕೆ ಸದಸ್ಯರಾದ ಜೆ.ಗೋಪಿ, ರಮೇಶ್, ವೇದಾವತಿ, ಸಂಘದ ಅಧ್ಯಕ್ಷ ಎ.ಎನ್.ಸ್ವಾಮಿ, ಕಾರ್ಯದರ್ಶಿ ಬಿ.ನರಸಿಂಹಮೂರ್ತಿ, ಗೌರವಾಧ್ಯಕ್ಷ ಟಿ.ನಾಗರಾಜ್, ನಿರ್ದೇಶಕರಾದ ನಾಗಚಾರಿ, ಕುಮಾರ್, ಮಾಜಿ ಅಧ್ಯಕ್ಷ ಹುಚ್ಚಪ್ಪಚಾರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಗಂಗೋತ್ರಿ ಬಡಾವಣೆಯಲ್ಲಿರುವ ವಿಶ್ವಕರ್ಮ ಹಾಸ್ಟೆಲ್ ಆವರಣದಲ್ಲಿ ಶ್ರೀ ವಿಶ್ವಕರ್ಮ ವಿದ್ಯಾವರ್ಧಕ ಸಂಘದ ವತಿಯಿಂದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಅಭಿನಂದಿಸಲಾಯಿತು.

### ನನ್ನ ಮಗ ಎಂಪಿ ಟಿಕೆಟ್ ಆಕಾಂಕ್ಷಿಯಾದರೆ ತಪ್ಪೇನು?

ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ನನ್ನ ಮಗ ಸುನೀಲ್ ಬೋಸ್ ಕೂಡ ಆಕಾಂಕ್ಷಿ. ಈಗಾಗಲೇ ಮೂರು ಚುನಾವಣೆಗಳಲ್ಲಿ ಅವನಿಗೆ ಟಿಕೆಟ್ ಕೈ ತಪ್ಪಿದೆ. ಈ ಮೂಲಕ ಅವನಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಆದರೂ ಅಸಮಾಧಾನವಿಲ್ಲದೆ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡುತ್ತಿದ್ದಾನೆ. ಹೀಗಿರುವಾಗ ಸುನೀಲ್ ಬೋಸ್ ಆಕಾಂಕ್ಷಿಯಾದರೆ ತಪ್ಪೇನು ಎಂದು ಪ್ರಶ್ನಿಸಿದ ಡಾ.ಮಹದೇವಪ್ಪ, ಏನೇ ಆದರೂ ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಲು ಕಾಂಗ್ರೆಸ್ ಪಕ್ಷದ ತಂತ್ರಗಾರಿಕೆ, ಲೆಕ್ಕಾಚಾರ ಏನು ಅಂತ ಮಾಧ್ಯಮಗಳ ಮುಂದೆ ಹೇಳಲು ಸಾಧ್ಯವೆ ಎಂದು ಪ್ರಶ್ನಿದರು. ಚುನಾವಣೆ ಹತ್ತಿರ ಬಂದಾಗ ಈ ಬಗ್ಗೆ ಸರಿಯಾದ ತೀರ್ಮಾನ ಮಾಡುತ್ತೇವೆ ಎಂದರು.

# ಮಲಗಿದ್ದವರು ಎದ್ದು ಬಂದು ಬೊಬ್ಬೆ ಹೊಡೆದರೆ ಉತ್ತರ ಕೊಡಲು ಆಗಲ್ಲ

## ಮಾಜಿ ಸಿಎಂಗಳಿಗೆ ಡಾ.ಮಹದೇವಪ್ಪ ತಿರುಗೇಟು

ಮೈಸೂರು, ಆ.6(ಬಿಎಲ್‌ಯು)– ಮಲಗಿದ್ದವರು ಎದ್ದು ಬಂದು ಬೊಬ್ಬೆ ಹೊಡೆದರೆ ಅವರಿಗೆಲ್ಲಾ ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಬಿಜೆಪಿ ಹಾಗೂ ಜೆಡಿಎಸ್ ನಾಯಕರಿಗೆ ತಿರುಗೇಟು ನೀಡಿದ್ದಾರೆ.

ಮೈಸೂರಿನಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿರುವ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲು ಸರ್ಕಾರದಲ್ಲಿ ಅವಕಾಶವೇ ಇಲ್ಲ. ಇದರಂತೆ ರಾಜ್ಯ ಕಾಂಗ್ರೆಸ್ ಸರ್ಕಾರ ಕೂಡ ಎಸ್‌ಸಿ–ಎಸ್‌ಟಿ ವರ್ಗಕ್ಕೆ ಮೀಸಲಿಟ್ಟಿರುವ ಹಣವನ್ನು ಮುಟ್ಟಿಲ್ಲ ಎಂದು ಸ್ಪಷ್ಟಪಡಿಸಿದರು.


ಈ ವಿಚಾರವಾಗಿ ಮಲಗಿದ್ದವರು ಎದ್ದು ಬಂದು ಬೊಬ್ಬೆ ಹೊಡೆದರೆ ಅವರಿಗೆಲ್ಲಾ ಉತ್ತರ ಕೊಡಲು ಸಾಧ್ಯವಿಲ್ಲ ಎಂದು ಡಾ.ಮಹದೇವಪ್ಪ ಅವರು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಹೇಳಿಕೆಗೆ ಟಾಂಗ್ ಕೊಟ್ಟರು. ಈ ಹಿಂದಿನ ಸಿದ್ದರಾಮಯ್ಯ ಸರ್ಕಾರ ಜನಸಂಖ್ಯೆಗೆ ಅನುಗುಣವಾಗಿ ಶೇ.24ರಷ್ಟು ಅನುದಾನ ನೀಡಿತ್ತು. ಆದರೆ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಇದನ್ನು ಮುಂದುವರೆಸದೆ ಬೇರೆ ಕಾಮಗಾರಿಗಳಿಗೆ ಆ ಹಣ ಬಳಸಿಕೊಂಡಿತ್ತು. ಈಗ ಇವರು ತಮ್ಮ ತಪ್ಪು ಮುಚ್ಚಿಟ್ಟುಕೊಂಡು ನಮ್ಮ ಸರ್ಕಾರದ ವಿರುದ್ಧ ಆಧಾರರಹಿತ ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರ ಪಿಟಿಸಿಎಲ್ ಕಾಯ್ದೆ ರದ್ದು ಮಾಡಿತ್ತು. ಈಗ ಅದನ್ನು ನಮ್ಮ ಸರ್ಕಾರ ಮರು ಸ್ಥಾಪನೆ ಮಾಡುತ್ತಿದೆ. ಯಾವುದೇ ಕಾರಣಕ್ಕೂ ಎಸ್‌ಸಿ–ಎಸ್‌ಟಿ ಸಮುದಾಯಕ್ಕೆ ಅನ್ಯಾಯವಾಗಲು ನಮ್ಮ ಸರ್ಕಾರ ಬಿಡುವುದಿಲ್ಲ ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಮೂರು ಗ್ಯಾರಂಟಿ ಸ್ಕೀಂಗಳನ್ನು ಜಾರಿಗೊಳಿಸಿದೆ. ಅಧಿಕಾರಕ್ಕೆ ಬಂದ ಕೂಡಲೇ ಕೊಟ್ಟ ಮಾತು ಈಡೇರಿಸಿದ ಏಕೈಕ ಸರ್ಕಾರವೆಂದರೆ ಅದು ಕಾಂಗ್ರೆಸ್ ಸರ್ಕಾರ ಎಂದು ಸಚಿವ ಡಾ.ಮಹದೇವಪ್ಪ ಹೇಳಿದರು.

# ಯುವಕರ ಮನಸ್ಸನ್ನು ಸಾಧನೆಯತ್ತ ಕೊಂಡೊಯ್ಯಲು ಭಗವದ್ಗೀತೆ ಸಹಕಾರಿ

## ಸಂಸ್ಕೃತಿ ಚಿಂತಕಿ ಡಾ.ಜ್ಯೋತಿ ಶಂಕರ್ ಅಭಿಮತ



ನರ್ತನ ದೀಪ್ತಿ ಕಾರ್ಯಕ್ರಮದಲ್ಲಿ ಮನಿಷ, ತನಿಷ ವಿಜಯ್‌ಕುಮಾರ್, ಜನ್ಮಿತ, ನೇಹಾ ರೆಡ್ಡಿ, ಸುಪ್ರಿತ, ಮನಸ್ವಿ ಅಮೋಘವಾಗಿ ನೃತ್ಯ ಪ್ರದರ್ಶಿಸಿದರು.

ಮೈಸೂರು,ಆ.6(ಎಸ್‌ಪಿಎನ್)–ಸದಾ ಚಂಚಲತೆಯಿಂದ ಕೂಡಿರುವ ಯುವಕರು ಮನಸ್ಸನ್ನು ಸಾಧನೆ ಮತ್ತು ನಮ್ಮ ಪರಂಪರೆಯತ್ತ ಕರೆತರಲು 'ಭಗವದ್ಗೀತೆ' ಸಂದೇಶಗಳು ಉಪಯುಕ್ತವಾಗಿವೆ ಎಂದು ಸಂಸ್ಕೃತಿ ಚಿಂತಕಿ ಹಾಗೂ ಪ್ರಾಧ್ಯಾಪಕಿ ಡಾ.ಜ್ಯೋತಿ ಶಂಕರ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಕಿರುಮಂದಿರದಲ್ಲಿ ಮೈಸೂರು ನೃತ್ಯವಿದ್ಯಾಪೀಠ, ಅಕಾಡೆಮಿ ಆಫ್ ಕ್ಲಾಸಿಕಲ್ ಡ್ಯಾನ್ಸ್ ಅಂಡ್ ಇಂಡಿಯನ್ ಆರ್ಟ್ಸ್ ಹಾಗೂ ಬೆಂಗಳೂರು ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ವಿದುಷಿ ಸಿ.ಎನ್.ಅನಿತಾ ಅವರ ನೇತೃತ್ವದಲ್ಲಿ ನಡೆದ 'ನರ್ತನ ದೀಪ್ತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಭಾಗವಹಿಸಿ ಮಾತನಾಡಿದರು.

ಶ್ರೀ ಕೃಷ್ಣ ಪರಮಾತ್ಮ ಉಪದೇಶಿಸಿದ ಭಗವದ್ಗೀತೆಯ ಸಂದೇಶದಂತೆ ನಡೆದುಕೊಳ್ಳುವುದೇ ನಿಜವಾದ ಧರ್ಮಪಾಲನೆ ಹಾಗೂ ಪ್ರತಿಯೊಬ್ಬರು ಭಗವದ್ಗೀತೆಯನ್ನು ಕಲಿತು, ಅದರ ತತ್ವಾದರ್ಶನಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಉತ್ತಮ ಸಾಧನೆ ಮಾಡಬಹುದು. ಜಗತ್ತಿನಲ್ಲಿ ಭಾರತೀಯ ಪರಂಪರೆ ವಿಶಿಷ್ಟವಾದುದು ಮತ್ತು ಉತ್ತಮವಾದುದು. ಪ್ರಸ್ತುತ ಆಧ್ಯಾತ್ಮದಿಂದ ಭೌತಿಕ ಜೀವನದತ್ತ ಸಾಗಬೇಕಾದರೆ ಭಗವದ್ಗೀತೆ ಅಧ್ಯಯನ ಪ್ರಸ್ತುತ ಉಪಯುಕ್ತ ಎಂದು ತಿಳಿಸಿದರು.

ಪ್ರತಿಯೊಬ್ಬರು ಸತ್ಯ, ಅಹಿಂಸೆ, ಶ್ರೀ ಕೃಷ್ಣ ಬೋಧಿಸಿದ ಧರ್ಮಮಾರ್ಗದಲ್ಲಿ ನಡೆದರೆ ಮುಂದಿನ ಜೀವನ ನೆಮ್ಮದಿಯಾಗಿ ರೂಢಿಸಿಕೊಳ್ಳಬಹುದು ಎಂದ ಅವರು, ಶ್ರೀ ಕೃಷ್ಣ ಬೋಧನೆಯ ಭಗವದ್ಗೀತೆಯಲ್ಲಿ ಉತ್ತಮ ಸಂದೇಶ ನೀಡಿದ್ದಾರೆ. ಗೀತೆಯ ಪ್ರತಿ ಶ್ಲೋಕವು ಜೀವನದ ಒಂದೊಂದು ಮಜಲುಗಳನ್ನು ಬೋಧಿಸುತ್ತದೆ ಹಾಗೂ ಜಗತ್ತಿನ ಜೀವಿಗೂ ಸಂದೇಶ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ವೇದಿಕೆಯಲ್ಲಿ ಮೈಸೂರು ಸೌಮ್ಯ ನೃತ್ಯಶಾಲಾ ನಿರ್ದೇಶಕಿ ಎಸ್.ಸೌಮ್ಯರಾಣಿ, ಶ್ರೀಹರಿಪ್ರಿಯಾ, ಎಂ.ಕೆ.ಶೋಭಾ, ವೈಷ್ಣವಿ ಎಲ್ ಅರಸ್, ಎಸ್.ರಕ್ಷಿತಾ, ಉಪಸ್ಥಿತರಿದ್ದರು. ನರ್ತನ ದೀಪ್ತಿಯಡಿ ಬಿ.ಜೆ.ಮನಿಷ, ತನಿಷ ವಿಜಯ್‌ಕುಮಾರ್, ಎಚ್.ಜನ್ಮಿತ, ನೇಹಾ ಡಿ.ಎಸ್.ರೆಡ್ಡಿ, ಆರ್.ಸುಪ್ರಿತ, ಎನ್. ಮನಸ್ವಿ ನೃತ್ಯಪ್ರದರ್ಶನ ನೀಡಿದರಲ್ಲದೆ, ಪಕ್ಕವಾದ್ಯದಲ್ಲಿ ನಟುವಾಂಗ ಎಸ್.ಅನಘ, ಹಾಡುಗಾರಿಕೆ ನಯನ ನಾಗರಾಜ್, ಮೃದಂಗ–ವಿದ್ವಾನ್ ಜಿ.ಟಿ.ಸ್ವಾಮಿ, ವಿದ್ವಾನ ತಾಂಡವ ಮೂರ್ತಿ ಪಿಟೀಲು ನುಡಿಸಿ ಸಾಥ್ ನೀಡಿದರು. ಅಲ್ಲದೆ, ತಾಳಲಹರಿಯಲ್ಲಿ ಸಂಹಿತ ಜಿ.ಕಿರಣ್, ಕೆ.ವೈ.ಕುಷಿ, ಭೂಮಿಕಾ ಪಾಂಡು, ಪರಿಣಿತ ಆನಂದ್, ಲಕ್ಷ್ಮಣ ದಿನೇಶ್, ಎಂ.ಎಸ್.ನಾಗಶ್ರೀ, ಎಸ್. ಸಂಚಿತಾ, ಅನನ್ಯ ಸಜ್ಜನರ್, ಸುಮಾ ಕಿರಣ್ ಅಮೋಘ ಪ್ರದರ್ಶನ ನೀಡಿದರು.

# ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.6–2023–24ನೇ ಸಾಲಿನ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಲು ಇಲಾಖೆಯಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ವೃತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಮತ್ತು ವಿದ್ಯುತ್ ಚಾಲಿತ ಮರಗೆಲಸ ಹಾಗೂ ದೋಬಿ ಉಪಕರಣಗಳನ್ನು ಪಡೆಯಲು, ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಶಲಕರ್ಮಿಗಳಿಗೆ ಬಂಡವಾಳ ಹೂಡಿಕೆ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯಲು ಮತ್ತು ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಸಹಾಯಧನವನ್ನು ನೀಡುವ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು https://mysore.nic.in ಮೂಲಕ ಸೆ.4ರೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ತಾಲೂಕಿನ ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ ಕೈಗಾರಿಕಾ ವಿಸ್ತರಣಾಧಿಕಾರಿಗಳು ಅಥವಾ ಉಪನಿರ್ದೇಶಕರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.



ಭೂಮಿಗಿರಿ ನಾರಾಯಣಪ್ಪ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಸಂಸ್ಥಾಪಕ ಅಧ್ಯಕ್ಷ ಎನ್.ಬೆಟ್ಟೇಗೌಡರ ಹುಟ್ಟುಹಬ್ಬದ ಪ್ರಯುಕ್ತ ಪಡುವಾರಹಳ್ಳಿಯ ಶ್ರೀ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಉದ್ಘಾಟಿಸಿದರು. ಈ ವೇಳೆ ವೈ.ಡಿ.ರಾಜಣ್ಣ ಮತ್ತಿತರರು ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.6–ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳ ಪ್ರವೇಶ ಬಯಸುವ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಬುದ್ಧ, ಕ್ರಿಶ್ಚಿಯನ್, ಪಾರ್ಸಿ, ಸಿಖ್) ಹಾಗೂ ಹಿಂದುಳಿದ ವರ್ಗಗಳ ಪ.ಜಾ, ಪ.ಪಂ ವಿದ್ಯಾರ್ಥಿಗಳಿಗೆ ಶೇ.25 ಮೀಸಲಾತಿ ಇದ್ದು, 2023–24ನೇ ಸಾಲಿಗೆ http://shp.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.16 ಕೊನೇ ದಿನ. ಹೆಚ್ಚಿನ ಮಾಹಿತಿಗಾಗಿ http://shp.karnataka.gov.in ಅಥವಾ ದೂ.ಸಂ: 9844342339, 7019652782 ಸಂಪರ್ಕಿಸಬಹುದು.

# ರಕ್ತನಾಳಗಳ ದಿನ: ಜಾಗೃತಿ ವಾಕಥಾನ್



ಮೈಸೂರು, ಆ.6 (ಎಂಟಿವೈ)– ರಾಷ್ಟ್ರೀಯ ರಕ್ತನಾಳಗಳ ದಿನದ ಅಂಗವಾಗಿ ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ 'ನಾಳೆಯ ಆರೋಗ್ಯ ಜಾಗೃತಿ ಹಾಗೂ ಅಂಗಚ್ಛೇದನ ಮುಕ್ತ ಭಾರತ' ವಾಕಥಾನ್‌ನಲ್ಲಿ ಹಲವು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ 'ವಾಕ್ ಎ ಮೈಲ್ ಟು ಲೀವ್ ವಿಥ್ ಎ ಸ್ಮೈಲ್' ಸಂದೇಶದೊಂದಿಗೆ ವ್ಯಾಸ್ಕುಲರ್ ಸೊಸೈಟಿ ಆಫ್ ಇಂಡಿಯಾ ಮೈಸೂರು ಘಟಕ ಆಯೋಜಿಸಿದ್ದ ಜಾಗೃತಿ ಜಾಥಾದಲ್ಲಿ ಹಲವು ಮಂದಿ ಪಾಲ್ಗೊಂಡು ಜನರಲ್ಲಿ ಜಾಗೃತಿ ಮೂಡಿಸಿದರು. ಜಾಗೃತಿ ಜಾಥಾಗೆ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಡೀನ್ ಪ್ರೊ.ಹೆಚ್.ಬಸವನಗೌಡಪ್ಪ, ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಚಾಲನೆ ನೀಡಿದರು. ಬಳಿಕ ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ ಮೂಲಕ ಜೆ.ಕೆ.ಮೈದಾನಕ್ಕೆ ತಲುಪಿದ ಜಾಗೃತಿ ಜಾಥಾ ರಕ್ತನಾಳಗಳ ಮಹತ್ವದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿತು.

ರಕ್ತನಾಳಗಳ ಸಮಸ್ಯೆಯುಳ್ಳ ರೋಗಿಗಳ ಆರೋಗ್ಯ ಕಾಪಾಡಲು ಜನರಲ್ಲಿ ಜಾಗೃತಿ ಮೂಡಿಸುವುದರೊಂದಿಗೆ ರಕ್ತನಾಳಗಳ ರೋಗ ಲಕ್ಷಣಗಳ ಬಗ್ಗೆ ಮಾಹಿತಿ ನೀಡಲಾಯಿತು. ಕಾಲು ಊದಿಕೊಳ್ಳುವುದು, ದಿಢೀರನೆ ನೋವು ಕಾಣಿಸಿಕೊಳ್ಳುವುದು, ಪಾದಗಳ ಬಣ್ಣ ಬದಲಾಗುವುದು ಈ ರೋಗದ ಲಕ್ಷಣಗಳಾಗಿವೆ. ಇದರಿಂದ ಗುಣವಾಗದ ಗಾಯಗಳು ಉಂಟಾಗುತ್ತದೆ. ಗ್ಯಾಂಗ್ರೀನ್, ರಕ್ತನಾಳಗಳು ಊದಿಕೊಳ್ಳುವುದು ಕಂಡು ಬಂದರೆ ವಾಸ್ಕ್ಯುಲರ್ ತಜ್ಞರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆದುಕೊಳ್ಳುವಂತೆ ಜಾಥಾದಲ್ಲಿ ಜಾಗೃತಿ ಮೂಡಿಸಲಾಯಿತು.

# ಎಐಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮನಸ್ಸಿನ ಶಕ್ತಿ ಕುರಿತು ಪ್ರೇರಕ ಭಾಷಣ



ಮೈಸೂರು,ಆ.6–ಮೈಸೂರು–ಬನ್ನೂರು ರಸ್ತೆಯಲ್ಲಿರುವ ಎಐಎಂಇ ಇಂಜಿನಿಯರಿಂಗ್ ಕಾಲೇಜಿನ ಮಹಿಳಾ ಘಟಕವು ಕಾಲೇಜಿನ ಆಂತರಿಕ ದೂರು ಸ್ವೀಕಾರ ಸಮಿತಿಯ ಸಹಯೋಗದೊಂದಿಗೆ 'ಮನಸ್ಸಿನ ಶಕ್ತಿ' ಕುರಿತು ಪ್ರೇರಕ ಭಾಷಣವನ್ನು ಆಯೋಜಿಸಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಇನ್ಫೋಸಿಸ್ (ಸ್ಥಾಪಕರು, ಕರ್ಮಯೋಗ ಸೊಸೈಟಿ) ಪ್ರಾಡಕ್ಟ್ ಲೈನ್ ಮ್ಯಾನೇಜರ್ ವಿಟ್ಟಲ್ ಶೆಟ್ಟಿ ಭಾಗವಹಿಸಿದ್ದರು.

ಬಳಿಕ ಮಾತನಾಡಿದ ಅವರು, ಮನಸ್ಸಿನ ಶಕ್ತಿಯು ನಮ್ಮ ಆಲೋಚನೆಗಳ ಮೇಲೆ ಹೆಚ್ಚಾಗಿ ಅವಲಂಬಿತವಾಗಿದೆ. ನಾವು ಏನನ್ನು ಯೋಚಿಸುತ್ತೇವೆ, ನಾವು ಏನಾಗುತ್ತೇವೆ. ನಾವು ಆರಿಸಿಕೊಳ್ಳುವ ಆಯ್ಕೆಗಳು, ಆಲೋಚನೆಗಳು ಜೀವನದಲ್ಲಿ ನಮಗೆ ಏನಾಗುತ್ತದೆ ಎಂಬುದರ ಮೇಲೆ ಪ್ರಭಾವ ಬೀರುತ್ತದೆ. ನಮ್ಮ ನಂಬಿಕೆಗಳು, ನಮ್ಮ ಮನಸ್ಥಿತಿಗಳು ಮತ್ತು ವರ್ತನೆಗಳು ನಮ್ಮ ಜೀವನದ ಮೇಲೆ ಪ್ರಭಾವ ಬೀರುತ್ತವೆ. ನಾವು ಹೇಗೆ ವರ್ತಿಸುತ್ತೇವೆ ಮತ್ತು ನಿರ್ದಿಷ್ಟವಾಗಿ ನಾವು ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ನಮ್ಮ ಮನಸ್ಥಿತಿಯು ನಿರ್ಧರಿಸುತ್ತದೆ ಎಂದರು.

ಪ್ರಾಂಶುಪಾಲ ಡಾ.ಎ.ಕೆ.ಮೂರ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಐಕ್ಯೂಎಸಿ ನಿರ್ದೇಶಕ ಡಾ.ಎಲ್. ಬಸವರಾಜ್, ಆಡಳಿತಾಧಿಕಾರಿ ಡಾ.ಸಚ್ಚಿದಾನಂದಮೂರ್ತಿ ಕಾರ್ಯಕ್ರಮದ ಸಂಚಾಲಕಿ ಡಾ.ಎಸ್.ಆರ್.ಭಾಗ್ಯಶ್ರೀ, ಡಾ.ಎಂ.ಎಸ್. ಗೋವಿಂದೇಗೌಡ, ಕಾರ್ಯಕ್ರಮದ ಸಂಯೋಜಕರಾದ ಸಿ.ಚಂದ್ರ ಶೇಖರ್, ಭಾನುಪ್ರಿಯಾ, ಸಿ.ರವಿ, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಮೂಳೆ–ಕೀಲು ದಿನದ ಅಂಗವಾಗಿ ಮೈಸೂರಲ್ಲಿ ಜಾಗೃತಿ ಜಾಥಾ


ಮೈಸೂರು, ಆ.6(ಎಂಟಿವೈ)– ಮಕ್ಕಳಾದಿಯಾಗಿ ಎಲ್ಲಾ ವಯೋಮಾನದವರಿಗೆ ಕಾಡುತ್ತಿರುವ ಮೂಳೆ ಕೀಲು ನೋವಿನ ಕುರಿತು ಅರಿವು ಮೂಡಿಸಲು ಭಾನುವಾರ ಮೈಸೂರಲ್ಲಿ ಮೂಳೆ ತಜ್ಞರು ವಾಕಥಾನ್ ನಡೆಸಿ ಜನರಲ್ಲಿ ಜಾಗೃತಿ ಮೂಡಿಸಿದರು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ವಾಕಥಾನ್‌ನಲ್ಲಿ ಮೈಸೂರು ಸರ್ಕಾರಿ ಮೆಡಿಕಲ್ ಕಾಲೇಜು, ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಮೂಳೆ ಮತ್ತು ಕೀಲು ವಿಭಾಗದ ವೈದ್ಯರು, ವಿವಿಧ ಖಾಸಗಿ ಆಸ್ಪತ್ರೆಗಳ ಮೂಳೆ ತಜ್ಞರು ಪಾಲ್ಗೊಂಡು 'ಮೂಳೆ ಹಾಗೂ ಕೀಲು' ದಿನವನ್ನು ಆಚರಿಸಿದರು. ಜಾಗೃತಿ ವಾಕಥಾನ್‌ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಅಲ್ಲಿಂದ ಆರಂಭವಾದ ವಾಕಥಾನ್, ಕುಕ್ಕರಹಳ್ಳಿ ರಸ್ತೆ, ಸರಸ್ವತಿಪುರಂ ಸೇರಿದಂತೆ ವಿವಿಧೆಡೆ ಸಂಚರಿಸಿತು. ಮಾರ್ಗದುದ್ದಕ್ಕೂ ಮೂಳೆ ಹಾಗೂ ಕೀಲು ನೋವಿನ ಸಮಸ್ಯೆ ಬಗ್ಗೆ ಅರಿವು ಮೂಡಿಸಲಾಯಿತು. ಇತ್ತೀಚಿನ ದಿನಗಳಲ್ಲಿ ಮಕ್ಕಳಾದಿಯಾಗಿ ಮಂಡಿ ಮತ್ತು ಕೀಲು ನೋವಿನ ಸಮಸ್ಯೆಗೆ ತುತ್ತಾಗುತ್ತಿದ್ದಾರೆ. ಆಧುನಿಕ ಜೀವನ ಶೈಲಿ, ವ್ಯಾಯಾಮ ರಹಿತ ಜೀವನ, ಹೊರಗಿನ ಆಹಾರ, ಜಂಕ್ ಫುಡ್, ಮರೆಯಾಗುತ್ತಿರುವ ಸ್ಥಳೀಯ ಆಹಾರ ಪದ್ಧತಿಯಿಂದಾಗಿ ಮಕ್ಕಳಿಗೂ ಮಂಡಿ ಹಾಗೂ ಕೀಲು ನೋವು ಕಾಣಿಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಆರ್ಥೋಪೆಡಿಕ್ ಅಸೋಸಿಯೇಷನ್ ಆ.4ರಿಂದ 6ರವರೆಗೆ ವಿವಿಧ ಕಾರ್ಯಕ್ರಮ ನಡೆಸುವ ಮೂಲಕ ಜಾಗೃತಿ ಮೂಡಿಸಿದೆ. 'ಟ್ರೈನ್ (ಟ್ರೈನಿಂಗ್) ವನ್–ಸೇವ್ ವನ್' ಘೋಷಣೆಯೊಂದಿಗೆ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಎಲ್ಲಾ ಆರ್ಥೋಪೆಡಿಕ್ ಸರ್ಜನ್‌ಗಳು ಮಂಡಿ ಮತ್ತು ಕೀಲು ನೋವಿನ ಸಮಸ್ಯೆಗೆ ತುತ್ತಾಗಿರುವವರಿಗೆ ಚಿಕಿತ್ಸೆ ನೀಡುವುದರೊಂದಿಗೆ ನೆರವು ನೀಡಲು ಉದ್ದೇಶಿಸಲಾಗಿದೆ. ಆ ನಿಟ್ಟಿನಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಆರೋಗ್ಯ ಅರಿವು ಕಾರ್ಯಕ್ರಮ ನಡೆಸಲಾಗಿದೆ.

ಇಂದು ನಡೆದ ವಾಕಥಾನ್‌ನಲ್ಲಿ ಹಿರಿಯ ಮೂಳೆ ತಜ್ಞರಾದ ಡಾ.ಜೆ.ಎಸ್.ಹೆಗಡೆ, ಡಾ.ನಾಗಭೂಷಣ್, ಡಾ.ರವಿಶಂಕರ್, ಡಾ.ನಿತ್ಯಾನಂದರಾವ್, ಡಾ.ರವೀಂದ್ರನಾಥ್, ಡಾ.ಮೃತ್ಯುಂಜಯಪ್ಪ, ಡಾ.ರಘುನಂದನ್, ಡಾ.ಶ್ರೇಯಸ್ ಆಳ್ವಾ, ಡಾ.ರವೀಂದ್ರ, ಡಾ. ಪಿ.ಮಾಲೇಗೌಡ, ಡಾ.ಪಾಟೀಲ್, ಡಾ.ಅಜಯ್ ಹೆಗಡೆ, ಡಾ.ಅಬ್ದುಲ್ ರವೂಫ್ ಸೇರಿದಂತೆ 150ಕ್ಕೂ ಹೆಚ್ಚು ಮಂದಿ ಮೂಳೆ ತಜ್ಞರು ಪಾಲ್ಗೊಂಡಿದ್ದರು.



## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**7.8.2023 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ**

- **ಮೈಸೂರು ವಿಶ್ವವಿದ್ಯಾನಿಲಯ ಪರಿಸರ ಅಧ್ಯಯನ ವಿಭಾಗ, ಎಂ.ಟೆಕ್ ಇನ್ ಮೆಟೀರಿಯಲ್ಸ್ ಸೈನ್ಸ್, ವಿಜ್ಞಾನ ಭವನ, ಮಾನಸ ಗಂಗೋತ್ರಿ:** ಅಭಿನಂದನಾ ಸಮಾರಂಭ, ಅಭಿನಂದನೆ: ಎಂಟರ್ ಇನ್ ಮೆಟೀರಿಯಲ್ಸ್ ಸೈನ್ಸ್ ಸಂಯೋಜಕ ಮತ್ತು ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಎಸ್.ಎನ್.ಹೆಗ್ಡೆ, ಪ್ರೊ.ರಾಮೇಗೌಡ, ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಎಸ್.ಆರ್.ನಿರಂಜನ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4 ಗಂಟೆಗೆ.
- **ಸುಶೀರ (ಶ್ರೀ ವಿ.ದೇಶಿಕಚಾರ್, ಅಕಾಡೆಮಿ ಆಫ್ ಮ್ಯೂಸಿಕ್):** 21ನೇ ವರ್ಷದ ಸಂಗೀತ ಮಹೋತ್ಸವ, ಗಾಯನ: ವಿದ್ವಾನ್ ವಿನಯ್ ಶರ್ವ, ವೈಯಲಿನ್ ವಿದ್ವಾನ್ ಜನಾರ್ಧನ್ ಶ್ರೀನಾಥ್, ಮೃದಂಗ: ವಿದ್ವಾನ್ ಅನೂರ್ ಅನಂತಕೃಷ್ಣ ಶರ್ಮ, ಖಂಜೀರಾ: ವಿದ್ವಾನ್ ಸುನಾದ್ ಅನೂರ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಸಂಗೀತ ಕಲಾನಿಧಿ, ಮೈಸೂರು ಕೆ.ವಾಸುದೇವಚಾರ್ಯ ಭವನ, ಸಂಜೆ 6 ಗಂಟೆಗೆ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಮಾಧವಚಾರ್ಯ ಅವರಿಂದ ಕಿಷ್ಕಿಂದಾಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠದ ಆವರಣ, ಸಂಜೆ 6ರಿಂದ 7ರವರೆಗೆ.
- **ಹಿರಿಯ ನಾಗರಿಕರ ಪರಿಷತ್ತು:** ಹಿರಿಯ ನಾಗರಿಕರಿಗೆ ತೆರಿಗೆ ನಿಬಂಧನೆಗಳು ಕುರಿತು ಚಾರ್ಟೆಡ್ ಅಕೌಂಟೆಂಟ್ ತೇಜಶ್ವಿನಿ ಅವರಿಂದ ಮಾಹಿತಿ, ಸ್ಥಳ: ಹಿರಿಯ ನಾಗರಿಕರ ಪರಿಷತ್ತಿನ ಸಮುದಾಯ ಭವನ, ಜಯಲಕ್ಷ್ಮಿಪುರಂ, ಸಂಜೆ 5 ಗಂಟೆಗೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಡಿಸಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಚಿಲ್ಡ್ರನ್ಸ್ ಲೈಬರಿ ಕ್ಲಬ್, ಮೈಸೂರು:** 'ನೋವಾ ಮತ್ತು ಸೂಪರ್‌ನೋವಾ' ಕುರಿತು ಡಾ.ಆರ್. ಪೂರ್ಣಿಮಾ ಅವರಿಂದ ಮಾಹಿತಿ, ಸ್ಥಳ: ಶ್ರೀಸತ್ಯಸಾಯಿಬಾಬಾ ಎಜುಕೇಷನ್ ಇನ್ಸ್‌ಟ್ಯೂಷನ್, ಜಯಲಕ್ಷ್ಮಿಪುರಂ, ಸಂಜೆ 5.45ಕ್ಕೆ.


### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 7.15 ಕರುನಾಡ ಕಲ್ಪವೃಕ್ಷ: ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಖ್ಯಾತ ಸಂಗೀತ ವಿದ್ವಾಂಸರಾದ ಡಾ.ಬಿ.ದೇವೇಂದ್ರಪ್ಪ ಅವರೊಂದಿಗೆ ವಿದ್ವಾನ್ ಆರ್.ಗುರುರಾಜುಲು ನಾಯ್ಡು ಅವರು ನಡೆಸಿದ್ದ ಸಂವಾದ ಸಂಕಲನ–ಎಸ್.ಲಕ್ಷ್ಮೀನಾರಾಯಣ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರ ನಾಮ–ಸುಧಾ ಮಂಜುನಾಥ್, 12.45 ನಮ್ಮ ಆರೋಗ್ಯ "ಮಕ್ಕಳನ್ನು ಕಾಡುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು ಮತ್ತು ಚಿಕಿತ್ಸೆ" ಕುರಿತು ಡಾ.ನಾಗೇಂದ್ರ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಎಂ.ಟಿ. ಶೆಲ್ವ ನಾರಾಯಣ, 3.00 ಪಿ.ಸುರಭಿ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ: ವಿಷಯ–ಸಾಮಾನ್ಯ ದಂತ ಪರೀಕ್ಷೆಗಳು, ಭಾಗವಹಿಸುವವರು ಡಾ.ರಜನೀ ಲೋಕೇಶ್, 4.45 ಹಿಂದಿ ಪಾಠ: ಈಶ್ವರ್ ಭಟ್, 6.50 ಕೃಷಿರಂಗ: ಕಿಸಾನ್ ವಾಣಿ–ರೈತ ಉತ್ಪಾದಕ ಸಂಸ್ಥೆಗಳ ಅಭಿವೃದ್ಧಿಗೆ ನಬಾರ್ಡ್ ನೆರವು ಕುರಿತು ಸಂವದಲ್ಲಿ ಭಾಗವಹಿಸುವವರು ಬಿ.ವಿ. ಹರ್ಷಿತಾ, ಮಹೇಶ್ ಚಂದ್ರಗುರು ಮತ್ತು ಎನ್. ಕೇಶವಮೂರ್ತಿ. **ರಾತ್ರಿ:** 7.45 ಕೈಮಗ್ಗದ ಉದ್ಯಮಿ ಜಿ. ಶ್ರೀಧರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 8.00 ಸಂಸದ್ ಸಮೀಕ್ಷಾ, 9.30 ಹಳ್ಳಿ ಹಾಡು: ಪ್ರಸ್ತುತಿ–ಅಬ್ದುಲ್ ರಶೀದ್, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ.

# ‘ಲೈಫ್ ಅಂಡ್ ಟೈಮ್ಸ್’ ಪುಸ್ತಕ ಮಾನವ ಸಂಕುಲ, ಚಟುವಟಿಕೆಯ 360 ಡಿಗ್ರಿ ವ್ಯಾಪ್ತಿ ಒಳಗೊಂಡಿದೆ

## ಕೆಬಿಜಿಯವರ ಪುಸ್ತಕ ಕುರಿತು ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮೆಚ್ಚುಗೆ






ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ‘ಸ್ಟಾರ್ ಆಫ್ ಮೈಸೂರ್’ ಮತ್ತು ‘ಮೈಸೂರು ಮಿತ್ರ’ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅವರ ‘ಲೈಫ್ ಅಂಡ್ ಟೈಮ್ಸ್’ ಪುಸ್ತಕವನ್ನು ಅರುಣಾಚಲ ಪ್ರದೇಶ ಇಟಾನಗರದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ (ಎಡದಿಂದ 5ನೇಯವರು) ಬಿಡುಗಡೆ ಮಾಡಿದರು. ಎಡದಿಂದ ಬಲಕ್ಕೆ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ, ಕೆ.ಬಿ.ಗಣಪತಿ (ಕೆಬಿಜಿ), ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಮೈಸೂರು ವಿವಿ ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರೊ.ಸಿ.ನಾಗಣ್ಣ, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು. ಮತ್ತೊಂದು ಚಿತ್ರದಲ್ಲಿ ‘ಲೈಫ್ ಅಂಡ್ ಟೈಮ್ಸ್’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದವರನ್ನು ಕಾಣಬಹುದು.

ಮೈಸೂರು,ಆ.6(ಪಿಎಂ)– ಹಿರಿಯ ಪತ್ರಕರ್ತರಾದ ಕೆ.ಬಿ.ಗಣಪತಿ (ಕೆಬಿಜಿ) ಅವರ ಪುಸ್ತಕ ‘ಲೈಫ್ ಅಂಡ್ ಟೈಮ್ಸ್’ ಮಾನವ ಸಂಕುಲ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ 360 ಡಿಗ್ರಿ ವ್ಯಾಪ್ತಿಯ ವಿಮರ್ಶಾ ವ್ಯಾಪ್ತಿ ಒಳಗೊಂಡಿದೆ ಎಂದು ಅರುಣಾಚಲ ಪ್ರದೇಶ ಇಟಾನಗರದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸಂವಹನ ಪ್ರಕಾಶನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ‘ಸ್ಟಾರ್ ಆಫ್ ಮೈಸೂರ್’ ಮತ್ತು ‘ಮೈಸೂರು ಮಿತ್ರ’ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅವರ ‘ಲೈಫ್ ಅಂಡ್ ಟೈಮ್ಸ್’ ಪುಸ್ತಕ (ಅಂಕಣಗಳ ಸಂಗ್ರಹ) ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕೆಬಿಜಿ ಅವರು ಮಾನವತಾವಾದಿ, ವಸ್ತುನಿಷ್ಠ ಮತ್ತು ವಿಮರ್ಶಾತ್ಮಕ ಬರವಣಿಗೆಯ ಗುಣ ಹೊಂದಿದ್ದಾರೆ. ಅವರ ಈ ಪುಸ್ತಕ ಮಾನವ ಸಂಕುಲ ಮತ್ತು ಅದಕ್ಕೆ ಸಂಬಂಧಿಸಿದ 360 ಡಿಗ್ರಿಯ ವಿಮರ್ಶೆ ಒಳಗೊಂಡಿದ್ದು, ಒಂದು ಸಮಗ್ರ ನೋಟವನ್ನು ಹೊಂದಿದೆ. ಕೆಬಿಜಿ ಸೂರ್ಯನ ಕೆಳಗಿರುವ ಎಲ್ಲದರ ಬಗ್ಗೆ ನಿರರ್ಗಳವಾಗಿ ತಮ್ಮ ಬರವಣಿಗೆಯಲ್ಲಿ ಕೌಶಲ್ಯ ಮೆರೆದಿದ್ದಾರೆ. ಅದು ಕಾಮ, ಪ್ರೇಮ, ಪ್ರಸಿದ್ಧ ವ್ಯಕ್ತಿತ್ವಗಳು, ಆಧ್ಯಾತ್ಮ ಚಿಂತಕರೂ ಸೇರಿದಂತೆ ಇನ್ನಾವುದೇ ಇರಬಹುದು ಎಂದರು.

ಅವರ ವಿಷಯ ವ್ಯಾಪ್ತಿಯಲ್ಲಿ ನಿಜವಾಗಿಯೂ ಆಳವಾದ ಅಧ್ಯಯನದೊಂದಿಗೆ ಸಮಗ್ರತೆ ಕಾಣಬಹುದು. ಸಂಜೆ ಪತ್ರಿಕೆಯ ಅಂಕಣವು ಓದುಗರ ಆಸಕ್ತಿ, ಗಮನ ಸೆಳೆಯುವ ಜೊತೆಗೆ ಕುತೂಹಲ ಮೂಡಿಸುವಂತಿರಬೇಕು. ಇದರಲ್ಲಿ ಕೆಬಿಜಿ ಯಶಸ್ವಿಯಾಗಿದ್ದಾರೆ. ಅವರು ತಮ್ಮ ಬರವಣಿಗೆಯಲ್ಲಿ ಪದಗಳ ಮಿತಿ ಬಗ್ಗೆ ಯಾವಾಗಲೂ ಎಚ್ಚರದಿಂದ ಇರುತ್ತಾರೆ. 45 ವರ್ಷಗಳ ಕಾಲ ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಪತ್ರಕರ್ತರಾಗಿ ಅವರ ಯಶಸ್ಸಿನ ರಹಸ್ಯವೆಂದರೆ ಅದು ಅವರಲ್ಲಿರುವ ಅಧ್ಯಯನ ಶೀಲತೆ ಮತ್ತು ಸೂಕ್ಷ್ಮ ಸಂವೇದನಶೀಲತೆ ಗುಣವಾಗಿದೆ ಎಂದು ಹೇಳಿದರು.

ಇಂದು ಬಿಡುಗಡೆಗೊಂಡ ಅವರ ಕೃತಿಯಲ್ಲಿ ಪುಸ್ತಕ ವಿಮರ್ಶೆ, ಖ್ಯಾತನಾಮರ ಕುರಿತ ನುಡಿಚಿತ್ರ ಬರಹ, ಪ್ರಸ್ತುತದ ವಿದ್ಯಮಾನ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಕಾಣಬಹುದು. ಯಾವುದೇ ಆದರೂ ನೇರ ಮತ್ತು ಪ್ರಾಮಾಣಿಕವಾಗಿ ಮಾತನಾಡುವ ವ್ಯಕ್ತಿತ್ವ ಅವರದು. ಅದನ್ನು ಬರವಣಿಗೆಯಲ್ಲಿಯೂ ವ್ಯಕ್ತಪಡಿಸುತ್ತಾರೆ. ವೈಶಿಷ್ಟ್ಯಪೂರ್ಣ ಮತ್ತು ಗಟ್ಟಿಯಾದ ಬರವಣಿಗೆ ಅವರ ವಿಶಿಷ್ಟತೆ ಎಂದು ತಿಳಿಸಿದರು.

ಕೆಬಿಜಿ ಧರ್ಮ ಮತ್ತು ತತ್ವಶಾಸ್ತ್ರದ ಆಕರ್ಷಣೆಗೆ ಒಳಗಾದವರು. ಅವರು ನಿರಂತರ ಪ್ರಶ್ನೆಗಳ ಮೂಲಕ ಪರಿಶೋಧಿಸುವ ಗುಣ ಹೊಂದಿದ್ದಾರೆ. ರಜನೀಶ್, ಸ್ವಾಮಿ ಚಿನ್ಮಯಾನಂದ, ಸಿದ್ದೇಶ್ವರ ಸ್ವಾಮೀಜಿ ಮತ್ತು ಆದಿ ಶಂಕರಾಚಾರ್ಯ ಅವರಂತಹ ಮಹನೀಯರ ಪ್ರಭಾವಕ್ಕೆ ಕೆಬಿಜಿ ಒಳಗಾಗಿದ್ದಾರೆ. ಮನುಷ್ಯನ ಮನಸ್ಸನ್ನು ಕಾಡುವ ಮೂಲಭೂತ ಪ್ರಶ್ನೆಗಳಿಗೆ ಸ್ಪಷ್ಟ ಮತ್ತು ನೇರವಾದ ಉತ್ತರಗಳನ್ನು ನೀಡುವ ಪುಸ್ತಕವನ್ನು ನಾನು ಇನ್ನೂ ಓದಿಲ್ಲ. ಕೆಬಿಜಿ ಯಾವಾಗಲೂ ತನ್ನ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಅನ್ವೇಷಿಸುತ್ತಾರೆ. ಈ ಪುಸ್ತಕದಲ್ಲಿ ಜೀವನದ ಬಗೆಗಿನ ಆಸಕ್ತಿದಾಯಕ ಪ್ರತಿಬಿಂಬಗಳನ್ನು ಕಾಣಬಹುದು. ಇಲ್ಲಿನ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸದಿದ್ದರೂ ಸೂಚ್ಯವಾದ ಉತ್ತರ ನೀಡಿದ್ದು, ಇದು ಸಕಾರಾತ್ಮಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಕೆಬಿಜಿ ಅವರ ‘ಅಬ್ರಕಡಬ್ರಾ (ಸ್ಟಾರ್ ಆಫ್ ಮೈಸೂರ್)ನ ಅಂಕಣ, ‘ಮೈಸೂರು ಮಿತ್ರ’ನಲ್ಲಿ (ಛೂಮಂತ್ರ)’ ಅಂಕಣದ ಲೇಖನಗಳು ಯಾವಾಗಲೂ ಆಸಕ್ತಿದಾಯಕ. ಇಲ್ಲಿನ ತಮ್ಮ ಲೇಖನಗಳಲ್ಲಿ ಪೆಪ್ಸಿಕೊ ಖ್ಯಾತಿಯ ಇಂದ್ರಾನೂಯಿ ಅವರ ಕುರಿತ ಬರಹ ಸೇರಿದಂತೆ ಅಸಾಮಾನ್ಯರ ಯಶೋಗಾಥೆಯ ಮೇಲೆ ಬೆಳಕು ಚೆಲ್ಲಿದ್ದಾರೆ. ಪ್ರಸ್ತುತದ ಬ್ರಿಟಿಷ್ ಪ್ರಧಾನಿ ರಿಷಿ ಸುನಕ್, ಫಾಲಿ ನಾರಿಮನ್, ಕೆಡೆಟ್ ಅಮಿತ್ ರಾಜ್, ನಮ್ಮವರೇ ಆದ ಅನೂಪ್ ಮಾಚಯ್ಯ ಸೇರಿದಂತೆ ಅನೇಕ ಖ್ಯಾತನಾಮರ ಕುರಿತು ಬರೆದಿದ್ದಾರೆ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಶಿಕ್ಷೆ ಅನುಭವಿಸಿದ್ದ ವೀರ್ ಸಾವರ್ಕರ್ ಅವರ ನೆನೆಪಿಗೆ ಅವರಿದ್ದ ಜೈಲಿನ ಕೊಠಡಿಯಲ್ಲಿ ಹಾಕಿದ್ದ ಫಲಕವನ್ನು ತೆರವು ಮಾಡಿದ್ದನ್ನು ಕೆಬಿಜಿ ತಮ್ಮ ಈ ಕೃತಿಯಲ್ಲಿ ತೀವ್ರತರವಾಗಿ ಟೀಕಿಸಿದ್ದಾರೆ. ಈ ಫಲಕ ತೆಗೆಸಿದ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ಅವರ ವಿರುದ್ಧ ಕುಟುಟೀಕೆ ಮಾಡಿದ್ದಾರೆ. ನರೇಂದ್ರ ಮೋದಿಯವರ ಆಡಳಿತ ಬಂದ ಬಳಿಕ ಸದರಿ ಫಲಕವನ್ನು ಮರು ಸ್ಥಾಪಿಸಲಾಗಿದೆ. ವೀರ್ ಸಾವರ್ಕರ್ ಅವರನ್ನು ಕೆಬಿಜಿ ಬಹಳವಾಗಿ ಮೆಚ್ಚಿದ್ದಾರೆ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿಯವರ ಬಗ್ಗೆ ಅಪಾರ ಅಭಿಮಾನ ಹೊಂದಿದ್ದಾರೆ. ಹಾಗೆಯೇ ಕಾಂಗ್ರೆಸ್ ಪಕ್ಷದ ವಂಶಾಡಳಿತದ ಬಗ್ಗೆ ಟೀಕಿಸುತ್ತಾರೆ ಎಂದು ಹೇಳಿದರು.

> ಪುಸ್ತಕ ಓದುವವರ ಸಂಖ್ಯೆ ಇಳಿಮುಖವಾದ ಹಿನ್ನೆಲೆಯಲ್ಲಿ ಪುಸ್ತಕ ಸಂಸ್ಥೆಗಳಿಗೆ ಗ್ರಹಣ ಹಿಡಿದಂತಾಗಿದೆ. ಕೃತಿಕಾರ ರಚಿಸಿದ ಪುಸ್ತಕವನ್ನು ಪ್ರಕಾಶಕ ಎಷ್ಟೇ ಚೆನ್ನಾಗಿ ಮುದ್ರಿಸಿದರೂ ಅದು ಕೊಂಡು ಓದುವವರು
>
> 
>
> ಇಲ್ಲವಾದರೆ ಅದು ವ್ಯರ್ಥವಾಗುತ್ತದೆ. ಸಂವಹನ ಪ್ರಕಾಶನವು ಸುಮಾರು 45 ವರ್ಷಗಳಿಂದ ಪುಸ್ತಕ ಪ್ರಕಾಶನದಲ್ಲಿ ನಿರತವಾಗಿದೆ. ಇದನ್ನು ಒಂದು ಸಾಮಾಜಿಕ ಜವಾಬ್ದಾರಿ ಎಂದು ನಮ್ಮ ಪ್ರಕಾಶನ ಭಾವಿಸಿದೆ. ಕೆಬಿಜಿ ಅವರ ಈ ಪುಸ್ತಕವನ್ನು ಅತ್ಯಂತ ಸಂತೋಷದಿಂದ ಪ್ರಕಟ ಮಾಡಿದ್ದೇನೆ.
>
> -ಡಿ.ಎನ್.ಲೋಕಪ್ಪ,
> ಪ್ರಕಾಶಕರು, ಸಂವಹನ ಪ್ರಕಾಶನ.

ಪುಸ್ತಕವು ಖ್ಯಾತ ಕಲಾವಿದ ಗಂಜೀಫ ರಘುಪತಿ ಭಟ್ ಅವರ ಅದ್ಭುತ ರೇಖಾಚಿತ್ರಗಳನ್ನು ಒಳಗೊಂಡಿದೆ. ಆ ಮೂಲಕ ಪುಸ್ತಕ ಹೆಚ್ಚಿನ ಆಕರ್ಷಣೆ ಹೊಂದಿದೆ. ಇದಕ್ಕಾಗಿ ಗಂಜೀಫ ರಘುಪತಿ ಭಟ್ ಅವರಿಗೆ ಧನ್ಯವಾದ ಹೇಳಲೇಬೇಕು. ಎಲ್ಲಾ 52 ಲೇಖನಗಳಿಗೆ ರೇಖಾಚಿತ್ರಗಳು ಪೂರಕವಾಗಿ ಮೂಡಿಬಂದಿವೆ ಎಂದರಲ್ಲದೆ, ಕೆಬಿಜಿ ಅವರಿಗೆ ಉತ್ತಮ ಆರೋಗ್ಯದೊಂದಿಗೆ ದೀರ್ಘಾಯುಷ್ಯ ದೊರೆತು, ಅವರ ಲೇಖನಿಗೆ ಮತ್ತಷ್ಟು ಶಕ್ತಿ ಲಭಿಸಲಿ ಎಂದು ಪ್ರೊ.ಬೆಳ್ಳಿಯಪ್ಪ ಹಾರೈಸಿದರು.

ಮೈಸೂರು ವಿವಿ ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರೊ.ಸಿ.ನಾಗಣ್ಣ ಪುಸ್ತಕ ಕುರಿತು ಮಾತನಾಡಿದರು. ಇದೇ ವೇಳೆ ಕೆಬಿಜಿ ಅವರನ್ನು ಸಂವಹನ ಪ್ರಕಾಶನದ ವತಿಯಿಂದ ಸನ್ಮಾನಿಸಲಾಯಿತು. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ ವೇದಿಕೆಯಲ್ಲಿದ್ದರು.

ಕೆಬಿಜಿ ಅವರ ಪತ್ನಿ ರ್‍ಯಾಲಿ ಗಣಪತಿ, ಅಕಾಡೆಮಿ ನ್ಯೂಸ್ ಪೇಪರ್ ಪ್ರೈವೇಟ್ ಲಿಮಿಟೆಡ್‌ನ (ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್) ವ್ಯವಸ್ಥಾಪಕ ನಿರ್ದೇಶಕ ವಿಕ್ರಂ ಮುತ್ತಣ್ಣ, ಕಾರ್ಯನಿರ್ವಾಹಕ ನಿರ್ದೇಶಕ ಮಿಕ್ಕಿ ಬೋಪಣ್ಣ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

## ಪಾಶ್ಚಿಮಾತ್ಯ ದೇಶದಲ್ಲಿ ಇದ್ದಾಗ ಆನ್‌ಲೈನ್‌ನಲ್ಲಿ ‘ಸ್ಟಾರ್ ಆಫ್ ಮೈಸೂರ್’ ಓದುತ್ತಿದ್ದೆ

**ಪ್ರೊ.ಕೆ.ಎಸ್.ರಂಗಪ್ಪ**



ಮೈಸೂರು,ಆ.6(ಪಿಎಂ)– ನಾನು 10 ವರ್ಷಗಳ ಕಾಲ ಪಾಶ್ಚಿಮಾತ್ಯ ದೇಶದಲ್ಲಿ ಇದ್ದಾಗ ಸಂಜೆ ಆಗುತ್ತಿದ್ದಂತೆ ಕಂಪ್ಯೂಟರ್‌ನಲ್ಲಿ ‘ಸ್ಟಾರ್ ಆಫ್ ಮೈಸೂರ್’ ಅನ್ನು ಆನ್‌ಲೈನ್‌ನಲ್ಲಿ ಓದುತ್ತಿದ್ದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಕೆಬಿಜಿ ಅವರು ಸುದೀರ್ಘ ಕಾಲ ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ನಡೆಸಿಕೊಂಡು ಬಂದಿರುವುದು ಸಾಮಾನ್ಯ ಸಂಗತಿಯಲ್ಲ. ಇದಕ್ಕಾಗಿ ಅವರು ಅಭಿನಂದನಾರ್ಹರು. ನಾನು ಕೂಡ ‘ಲೈಫ್ ಅಂಡ್ ಟೈಮ್ಸ್’ ಪುಸ್ತಕದಲ್ಲಿನ ನಾಲ್ಕೈದು ಲೇಖನಗಳನ್ನು ಓದಿದೆ. ಕೆಬಿಜಿ ಅವರು ಸಾಹಿತ್ಯಕವಾಗಿ ಅದ್ಭುತ ಬರವಣಿಗೆ ಮಾಡಿದ್ದಾರೆ. ಓದಲು ಬಹಳ ಸರಳವಾದ ಭಾಷೆ ಬಳಸಿದ್ದಾರೆ. ಕೆಬಿಜಿ ಅವರಿಗೆ ಮೈಸೂರಿನ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಆನ್‌ಲೈನ್ ಪ್ರಭಾವದಿಂದ ಇಂದು ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇಂದಿನ ಪೀಳಿಗೆ ಆನ್‌ಲೈನ್‌ಗೆ ಸೀಮಿತವಾಗದೇ ಪುಸ್ತಕಗಳನ್ನು ಕೊಂಡು ಓದಬೇಕು. ಆಗಲೇ ಅದು ಮನಸ್ಸಿಗೆ ಮುಟ್ಟಲು ಸಾಧ್ಯ ಎಂದು ತಿಳಿಸಿದರು.

## ಕೃತಿಗೆ ವಿಮರ್ಶಕರು ಇದ್ದರೆ ಅದು ಓದುಗರನ್ನು ಸಮರ್ಥವಾಗಿ ಮುಟ್ಟುತ್ತದೆ

### ಇಂಗ್ಲಿಷ್ ಸಾಹಿತ್ಯದ ವಿಮರ್ಶಕ ಪ್ರೊ.ಸಿ.ಡಿ.ನರಸಿಂಹಯ್ಯ ಹೇಳಿಕೆ ಉಲ್ಲೇಖಿಸಿದ ಕೆಬಿಜಿ



ಮೈಸೂರು,ಆ.6(ಪಿಎಂ)– ‘ವಿಮರ್ಶಕರು ಒಂದು ಕೃತಿಗೆ ಇದ್ದರೆ ಅದು ಓದುಗರನ್ನು ಸಮರ್ಥವಾಗಿ ಮುಟ್ಟುತ್ತದೆ’ ಎಂಬ ಅರ್ಥಪೂರ್ಣ ಮಾತನ್ನು ಇಂಗ್ಲಿಷ್ ಸಾಹಿತ್ಯದ ವಿಮರ್ಶಕ ಪ್ರೊ.ಸಿ.ಡಿ.ನರಸಿಂಹಯ್ಯ ಹೇಳಿದ್ದಾರೆ ಎಂದು ಹಿರಿಯ ಪತ್ರಕರ್ತರಾದ ಕೆ.ಬಿ.ಗಣಪತಿ (ಕೆಬಿಜಿ) ಹೇಳಿದರು.

ಪ್ರೊ.ಸಿ.ಡಿ.ನರಸಿಂಹಯ್ಯ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಅವರು ಪದ್ಮಭೂಷಣ ಪುರಸ್ಕೃತರು. ಇಂಗ್ಲಿಷ್ ಸಾಹಿತ್ಯದ ವಿಮರ್ಶಕರು. ಅವರು ಮೈಸೂರಿನ ಅಪ್ರತಿಮ ಶಿಕ್ಷಕರು. ಅವರು ‘ಎನ್ ಫಾರ್ ನೋ ಬಡಿ’ ಎಂದು ಆತ್ಮಚರಿತ್ರೆ ಬರೆದಿದ್ದಾರೆ. ಕೃತಿಯೊಂದು ರೂಪುಗೊಳ್ಳಲು ಲೇಖಕರು, ಪ್ರಕಾಶಕರು ಮುಖ್ಯ. ಇದರ ಜೊತೆಗೆ ವಿಮರ್ಶಕರು ಒಂದು ಕೃತಿಯ ಯಶಸ್ಸಿಗೆ ಅಷ್ಟೇ ಮುಖ್ಯವೆಂದು ಅವರು ಹೇಳಿರುವುದು ಅರ್ಥಪೂರ್ಣ. ನನ್ನ ಪುಸ್ತಕ ಪ್ರಕಟಿಸಿದ ಪ್ರಕಾಶಕರಿಗೆ ಧನ್ಯವಾದ ಹೇಳ ಬಯಸುತ್ತೇನೆ. ಈ ಪುಸ್ತಕವನ್ನು ಈಗಾಗಲೇ ‘ಮೈಸೂರು ಬುಕ್ ಕ್ಲಬ್’ ಕೂಡ ತನ್ನ ಸಾಹಿತ್ಯೋತ್ಸವದಲ್ಲಿ ಇತ್ತೀಚೆಗೆ ಬಿಡುಗಡೆ ಮಾಡಿದೆ ಎಂದು ಹೇಳಿದರು.

‘ನಾನು ಯುದ್ಧವನ್ನು ಬೇಕಾದರೆ ಕಳೆದುಕೊಳ್ಳುತ್ತೇನೆ. ಆದರೆ ಸಮಯ ಕಳೆದುಕೊಳ್ಳುವುದಿಲ್ಲ’ ಎಂದು ನೆಪೋಲಿಯನ್ ಬೋನಪಾರ್ಟೆ ಹೇಳಿದ್ದು, ಇದು ಸಮಯದ ಮಹತ್ವವನ್ನು ಸೂಚಿಸುತ್ತದೆ. ಹಾಗಾಗಿಯೇ ಸಮಯ ಕಳೆದು ಹೋದರೆ ಹಣ ಕಳೆದುಕೊಂಡಂತೆ. ಈ ಪುಸ್ತಕದ ಲೇಖನಗಳ ಬರವಣಿಗೆಗಾಗಿ ಹಲವು ಪುಸ್ತಕಗಳನ್ನು ಅಧ್ಯಯನ ಮಾಡಬೇಕಾಯಿತು. ಕೋವಿಡ್ ಸಂದರ್ಭದಲ್ಲಿ ಹೆಚ್ಚಿನ ಪುಸ್ತಕಗಳನ್ನು ಓದಲು ಸಾಧ್ಯವಾಯಿತು. ಇದರಿಂದಲೇ ಪುಸ್ತಕಗಳ ಕುರಿತು ಈ ಕೃತಿಯಲ್ಲಿ ವಿಮರ್ಶೆ ಹೊರಹೊಮ್ಮಿದವು ಎಂದರು. ಇದಕ್ಕೂ ಮುನ್ನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಕಾರ್ಯಕ್ರಮಕ್ಕೆ ಶುಭ ಹಾರೈಸಿ, ಪುಸ್ತಕದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಕಳುಹಿಸಿರುವ ಪತ್ರವನ್ನು ಕೆಬಿಜಿ ವಾಚಿಸಿದರು.

## ರಾಜ್ಯದ ಪತ್ರಿಕೋದ್ಯಮದ ಪ್ರಗತಿಗೆ ‘ಮೈಸೂರು ಮಿತ್ರ’, ‘ಸ್ಟಾರ್ ಆಫ್ ಮೈಸೂರ್’ ಕೊಡುಗೆ ಅಪಾರ

**ಡಾ.ಎಂ.ಆರ್.ರವಿ ಅಭಿಮತ**



ಮೈಸೂರು,ಆ.6(ಪಿಎಂ)– ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಕೇವಲ ಪ್ರಾದೇಶಿಕತೆಗೆ ಸೀಮಿತವಾದ ಪತ್ರಿಕೆಗಳಲ್ಲ. ಇದರ ಜೊತೆಗೆ ಕರ್ನಾಟಕದ ಪತ್ರಿಕೋದ್ಯಮದ ಬೆಳವಣಿಗೆ ಮತ್ತು ಪ್ರಗತಿಗೆ ಇವುಗಳ ಕೊಡುಗೆ ಅಪಾರ ಎಂದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಅಭಿಪ್ರಾಯಪಟ್ಟರು.

‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಪತ್ರಿಕೋದ್ಯಮ ಕಲಿಕೆಯ ಗರಡಿ ಮನೆ ಎಂದು ಕರೆಯಲು ಬಯಸುತ್ತೇನೆ. ಅಲ್ಲಿ ಕೇವಲ ಪತ್ರಿಕೋದ್ಯಮದ ಪಟ್ಟುಗಳನ್ನು ಮಾತ್ರ ಹೇಳಿಕೊಡುವುದಿಲ್ಲ. ಜೊತೆಗೆ ಜೀವನವನ್ನು ಎದುರಿಸುವ ಹಲವು ಸಂಗತಿಗಳನ್ನು ಹೇಳಿಕೊಡುವುದಿದೆ. ಈ ಗರಡಿ ಮನೆಯಲ್ಲಿ ಪಟ್ಟುಗಳನ್ನು ಕಲಿತು ಕರ್ನಾಟಕದ ಪತ್ರಿಕೋದ್ಯಮದಲ್ಲಿ ಇಂದು ಅನೇಕ ಪತ್ರಕರ್ತರು ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ರ್‍ಯಾಲಿ ಗಣಪತಿ ಮೇಡಂ ನನಗೆ ಗುರುಗಳು. ಪಿಯುಸಿಯಲ್ಲಿ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿ ನನಗೆ ಪಾಠ ಮಾಡಿದವರು. ಅವರು ತೋರಿದ ಮಾರ್ಗದಲ್ಲಿ ಕೆಬಿಜಿ ಅವರಂತಹ ಗುರುಗಳು ನನಗೆ ಸಿಕ್ಕಿದರು. ಎಲ್ಲರಿಗೂ ಇಂತಹ ಸೌಭಾಗ್ಯ ದೊರೆಯುವುದಿಲ್ಲ. ನಾನು ಕೆಬಿಜಿಯವರ ಗರಡಿಯಲ್ಲಿ ಪಳಗಿದವನು. ಕೆಬಿಜಿ ಅವರಿಗೆ ಕೊಡಗು ಜೀವ ಕೊಟ್ಟಿದ್ದರೆ, ಮೈಸೂರು ಜೀವನ ಕೊಟ್ಟಿದೆ ಎಂದು ಹೇಳಿದರು.

1970ರ ಸಂದರ್ಭದಲ್ಲಿ ನನಗೆ ಕೆಬಿಜಿ ಉದ್ಯೋಗ ಕೊಟ್ಟರು. ನಾನು ಬಿಎ ಪದವಿ ಮಾಡಿದ್ದು ಬಿಟ್ಟರೆ ಪತ್ರಿಕೋದ್ಯಮ ಓದಿರಲಿಲ್ಲ. ಆದರೂ ಆ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟರು. ಅಂದು ನನಗೆ ಕೆಲಸ ಬಹಳ ಅನಿವಾರ್ಯವಾಗಿತ್ತು. ಒಂದೇ ತಿಂಗಳಿನಲ್ಲಿ ನನ್ನ ಸಂಬಳವನ್ನು ಹೆಚ್ಚಳ ಮಾಡಿದರು. ಕೆಬಿಜಿ ಅವರೊಂದಿಗೆ ಕೆಲಸ ಮಾಡಿದ ನನ್ನ ಆ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ನನಗೆ ಎಂಎ ಪದವಿ ಮಾಡಲೂ ಅವಕಾಶ ಮಾಡಿಕೊಟ್ಟರು. ನಾನು ಪಿಹೆಚ್.ಡಿ ಮಾಡಲೂ ಕೆಬಿಜಿ ಸಹಾಯ ಮಾಡಿದರು ಎಂದು ನೆನೆಪಿಸಿಕೊಂಡರು.

ಮೈಸೂರಿನಲ್ಲಿ ಪತ್ರಿಕೋದ್ಯಮಕ್ಕೆ ತನ್ನದೇ ಆದ ದೊಡ್ಡ ಪರಂಪರೆ ಇದೆ. ಈ ಶ್ರೀಮಂತ ಪರಂಪರೆಯ ಮುಂದುವರೆದ ಭಾಗವಾಗಿ ಅಕಾಡೆಮಿ ನ್ಯೂಸ್ ಪೇಪರ್ ಪ್ರೈವೇಟ್ ಲಿಮಿಟೆಡ್ ಅಡಿಯಲ್ಲಿ ‘ಮೈಸೂರು ಮಿತ್ರ’ ಮತ್ತು ‘ಸ್ಟಾರ್ ಆಫ್ ಮೈಸೂರ್’ ಯಶಸ್ಸಿನ ಹಾದಿಯಲ್ಲಿ ಸಾಗಿವೆ. ಒಂದು ಪತ್ರಿಕೆ ಬಗ್ಗೆ ಮಾತನಾಡುವುದು ಸುಲಭ. ಆದರೆ ನಡೆಸುವುದು ಕಷ್ಟದ ಕೆಲಸ. ಒಬ್ಬ ಪತ್ರಕರ್ತನಾಗಿ ಒಂದು ಸಂಸ್ಥೆಯಲ್ಲಿ ಕೆಲಸ ಮಾಡಬಹುದು. ಲೇಖನಗಳನ್ನೂ ಬರೆಯಬಹುದು. ಆದರೆ ಪತ್ರಿಕೆಯ ಮಾಲೀಕತ್ವ ವಹಿಸಿಕೊಳ್ಳುವುದು ಸುಲಭವಲ್ಲ. ಅದಕ್ಕೆ ಅದರದೇ ಆದ ಕೌಶಲ್ಯ ಬೇಕು. ಅದರಲ್ಲಿ ಕೆಬಿಜಿ ಗೆಲುವು ಸಾಧಿಸಿದ್ದಾರೆ ಎಂದು ಹೇಳಿದರು.

ನಿರಂತರವಾಗಿ ಬರವಣಿಗೆ ಮಾಡುವುದು ಸಾಮಾನ್ಯ ಸಂಗತಿಯಲ್ಲ. ಅಂತಹ ಅಸಾಮಾನ್ಯ ಕೆಲಸದಲ್ಲಿ ಕೆಬಿಜಿ ನಿರತರಾಗಿದ್ದಾರೆ. ವೇದಿಕೆಯಲ್ಲಿ ಅವರೊಂದಿಗೆ ಕುಳಿತಿದ್ದಾಗ, ‘ಸಾರ್ ಇಷ್ಟೆಲ್ಲಾ ಬರೆದಿದ್ದೀರಿ, ಇನ್ನೂ ಬರೆಯುತ್ತಿದ್ದೀರಿ. ನೀವೇಕೆ ಆತ್ಮಚರಿತ್ರೆ ಬರೆದಿಲ್ಲ’ ಎಂದು ಕೇಳಿದೆ. ಅದಕ್ಕೆ ಅವರು, ಅಂತಹ ದೊಡ್ಡ ಸಾಧನೆ ನಾನು ಮಾಡಿದ್ದೇನೆಯೇ? ಎಂದು ಪ್ರಶ್ನಿಸಿದರು. ಅವರಿಗೆ ತಾವು ಎಂತಹ ಮಹಾನ್ ಸಾಧಕರು ಎಂಬುದು ಗೊತ್ತೇ ಆಗಿಲ್ಲ. ಒಂದು ದೊಡ್ಡ ಪರಂಪರೆಯನ್ನು ಅವರು ಮುನ್ನಡೆಸುತ್ತಿದ್ದಾರೆ ಎಂದರು.

## ಕೆಬಿಜಿ ಅವರಿಂದ ಬರವಣಿಗೆ ಮೂಲಕ ಸುತ್ತಮುತ್ತ ಘಟನಾವಳಿಗೆ ಸದಾ ಸ್ಪಂದನೆ

**ಡಾ.ಸಿ.ನಾಗಣ್ಣ ಅಭಿಮತ**



ಮೈಸೂರು,ಆ.6(ಪಿಎಂ)– ಕೆಬಿಜಿ ಅವರು ದಿನನಿತ್ಯ ಓದು ಮತ್ತು ಬರವಣಿಗೆ ಮಾಡುತ್ತಿದ್ದು, ಆ ಮೂಲಕ ನಮ್ಮ ಸುತ್ತಮುತ್ತಲ ಘಟನಾವಳಿಗಳಿಗೆ ಸದಾ ಸ್ಪಂದಿಸುತ್ತಿದ್ದಾರೆ. ಇದರಿಂದ ಬದುಕಿನಲ್ಲಿ ಅವರು ಸಾಧಿಸಿರುವ ಶ್ರೇಯಸ್ಸು ದೊಡ್ಡದು. ಅವರು ಒಬ್ಬ ಗ್ರಂಥ ರಚನಾಕಾರರಾಗಿ ಈಗಾಗಲೇ ಸಾಕಷ್ಟು ಕೃಷಿ ಮಾಡಿದ್ದಾರೆ ಎಂದು ಮೈಸೂರು ವಿವಿ ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರೊ.ಸಿ.ನಾಗಣ್ಣ ಹೇಳಿದರು.

ಪುಸ್ತಕ ಕುರಿತು ಮಾತನಾಡಿದ ಅವರು, ಒಬ್ಬ ನುರಿತ ಲೇಖಕರಾಗಿ ಹಲವಾರು ಗ್ರಂಥಗಳನ್ನು ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಅವರು ರಚಿಸಿದ್ದಾರೆ. ಇಂದು ಬಿಡುಗಡೆಯಾಗಿರುವುದು ಕೆಬಿಜಿ ಅವರ ‘ಅಬ್ರಕಡಬ್ರಾ’ ಮಾಲಿಕೆಯ ಎರಡನೇ ಪುಸ್ತಕ. ಮುಂದೆ ಕೂಡ ಅನೇಕ ಸಂಪುಟಗಳು ಬರಲಿವೆ. ಪತ್ರಿಕೋದ್ಯಮ ಆವಸರದ ಸಾಹಿತ್ಯ ಎಂದು ಕರೆಯಲಾಗುತ್ತದೆ. ಅದರ ನಡುವೆ ಅವರ ಸಾಧನೆ ದೊಡ್ಡದು ಎಂದರು.

ಇಂದು ಬಿಡುಗಡೆಯಾದ ಈ ಪುಸ್ತಕವು ಜೀವನ, ಸಾಹಿತ್ಯ, ಧರ್ಮ, ಆಧ್ಯಾತ್ಮಿಕತೆ ಮತ್ತು ಆಯಾಯ ನಿರ್ದಿಷ್ಟ ಸೇವಾ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ವ್ಯಕ್ತಿಗಳಿಗೆ ಸಂಬಂಧಿಸಿದ ವಿವಿಧ ವಿಷಯಗಳ ಕುರಿತ ಕೆಬಿಜಿ ಅವರ ಸಂಗ್ರಹವಾಗಿವೆ. ಈ ಪುಸ್ತಕದಲ್ಲಿರುವ 52 ಲೇಖನಗಳು ‘ಸ್ಟಾರ್ ಆಫ್ ಮೈಸೂರ್’ನ ‘ಅಬ್ರಕಡಬ್ರಾ’ ಎಂಬ ಅಂಕಣದಲ್ಲಿ ಈಗಾಗಲೇ ಪ್ರಕಟವಾಗಿವೆ ಎಂದು ತಿಳಿಸಿದರು.

ಕೆಬಿಜಿ ತಮ್ಮ ಬರವಣಿಗೆಯ ಭಾಷೆಯ ಮಟ್ಟದಲ್ಲಿ ಒಂದು ಹಂತವನ್ನು ಈ ಅರ್ಧ ಶತಮಾನದ ಅವರ ಬರವಣಿಗೆಯ ದೀರ್ಘ ಓಟದಲ್ಲಿ ಕಂಡುಕೊಂಡಿದ್ದಾರೆ. ಲೇಖನಗಳಿಗಿಂತಲೂ ಹೆಚ್ಚು ಗುರುತರವಾದ ಜವಾಬ್ದಾರಿಯನ್ನು ಇಲ್ಲಿನ ಬರಹಗಳು ವಹಿಸುವುದರಿಂದ ಇವುಗಳನ್ನು ಪ್ರಬಂಧ ಎಂದು ಕರೆಯಲು ಬಯಸುತ್ತೇನೆ. ಈ ಪುಸ್ತಕದಲ್ಲಿ ಸಾಕಷ್ಟು ಪುಸ್ತಕ ವಿಮರ್ಶೆಗಳಿವೆ. ತಮ್ಮ ವೃತ್ತಿ ಜೀವನದ ಕಾರ್ಪಣ್ಯದ ಒಂದು ಭಾಗವಾಗಿ ಪುಟ ತುಂಬಿಸಲು ಬರೆದ ವಿಮರ್ಶೆ ಇವಲ್ಲ. ಬಹಳ ತದೇಕಚಿತ್ತದಿಂದ ಪ್ರತಿ ಪುಸ್ತಕವನ್ನು ಓದಿ ವಿಮರ್ಶೆ ಮಾಡಿದ್ದಾರೆ ಎಂದು ನುಡಿದರು.

ಕೆಬಿಜಿಯವರು ಹಿಂದೂ ಸನಾತನ ಧರ್ಮದಲ್ಲಿ ನಂಬಿಕೆ ಮತ್ತು ಅಭಿಮಾನ ಹೊಂದಿದ್ದಾರೆ. ಪುಸ್ತಕದಲ್ಲಿರುವ ‘ಲೈಟ್ ಆಫ್ ಹಿಂದೂಯಿಸಂ’ ಲೇಖನ ಓದಿದರೆ ಅದು ನಮ್ಮ ಅರಿವಿಗೆ ಬರಲಿದೆ. ಜೊತೆಗೆ ಸನಾತನ ಧರ್ಮವನ್ನು ಸರ್ವ ವಿಧದಲ್ಲೂ ಸ್ವೀಕಾರ್ಹ, ದೋಷಗಳೇ ಇರಲಿಲ್ಲ ಎಂದು ಅವರು ವಾದ ಮಾಡಿಲ್ಲ. ಮೇಲ್ವರ್ಗದ ಜನ ತಳವರ್ಗದವರನ್ನು ದೂರವಿಟ್ಟ ಕಾರಣ ಬುದ್ಧ ಮತ್ತು ಮಹಾವೀರರಂತಹ ಸುಧಾರಕರು ಹುಟ್ಟಿಕೊಂಡಿದ್ದು ಸಹಜ ಬೆಳವಣಿಗೆ ಎಂದೂ ಕೆಬಿಜಿ ಒಪ್ಪುತ್ತಾರೆ. ಆಧ್ಯಾತ್ಮಿಕತೆ ವಿಚಾರದಲ್ಲಿ ಆದಿ ಶಂಕರರನ್ನು ಅತೀ ಎತ್ತರದಲ್ಲಿ ಅವರು ನೋಡಿದ್ದಾರೆ. ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರನ್ನು ಮುಕ್ತಕಂಠದಿಂದ ಗುಣಗಾನ ಮಾಡಿದ್ದಾರೆ. ಕೆಬಿಜಿ ಅವರು ಪ್ರಸಿದ್ಧ ವ್ಯಕ್ತಿಗಳನ್ನು ಬಣ್ಣಿಸುವಾಗ ಅಷ್ಟು ಸುಲಭವಾಗಿ ಅವರ ಬಗ್ಗೆ ಅತಿಶಯೋಕ್ತಿ ಬಳಸಿಲ್ಲ ಎಂಬುದು ಮುಖ್ಯ ಅಂಶ ಎಂದರು.

## ಯಾದವಗಿರಿಯಲ್ಲಿ ವ್ಹೀಲಿಂಗ್, ಓವರ್ ಸ್ಪೀಡ್, ಕಳ್ಳರ ಹಾವಳಿ

### ಸೂಕ್ತ ಕ್ರಮಕ್ಕೆ ಬಡಾವಣೆ ನಿವಾಸಿಗಳಿಂದ ಪೊಲೀಸರಿಗೆ ಮನವಿ

ಮೈಸೂರು, ಆ.6(ಎಂಕೆ)– ಮೈಸೂರಿನ ಪ್ರತಿಷ್ಠಿತ ಯಾದವಗಿರಿ ಬಡಾವಣೆಯಲ್ಲಿ ಬೈಕ್ ವ್ಹೀಲಿಂಗ್, ಓವರ್ ಸ್ಪೀಡ್, ವಾಹನ ದಟ್ಟಣೆ ಹಾಗೂ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ನಿವಾಸಿಗಳು, ಪೊಲೀಸರು ಸೂಕ್ತ ಕ್ರಮಕೈಗೊಳ್ಳುವ ಮೂಲಕ ಕಡಿವಾಣ ಹಾಕುವಂತೆ ಮನವಿ ಮಾಡಿದರು.

ಇಲ್ಲಿನ ಮೈಸೂರು ಗುಜರಾತಿ ಸಮಾಜದ ಭವನದಲ್ಲಿ ಯಾದವಗಿರಿ ನಿವಾಸಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಕುಂದು-ಕೊರತೆ ಸಭೆಯಲ್ಲಿ ಯಾದವಗಿರಿಯಲ್ಲಿ ಇತ್ತೀಚೆಗೆ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮನೆಯ ಮುಂದೆ ಕಬ್ಬಿಣದ ಪದಾರ್ಥಗಳಿದ್ದರೂ ಬಿಡದೆ ಕಳವು ಮಾಡುತ್ತಿದ್ದಾರೆ. ಖಾಲಿ ರಸ್ತೆಯಲ್ಲಿ ಬೈಕ್ ವ್ಹೀಲಿಂಗ್ ಮಾಡುವ ಪುಂಡರ ಹಾವಳಿ ಮಿತಿ ಮೀರಿದೆ. ಅಲ್ಲದೆ ರಾತ್ರಿ ವೇಳೆ ಜೋರು ಶಬ್ದ ಮಾಡಿಕೊಂಡು ಓವರ್ ಸ್ಪೀಡ್‌ನಲ್ಲಿ ಅಡ್ಡಾಡುವವರ ಸಂಖ್ಯೆ ಹೆಚ್ಚಾಗಿದ್ದು, ಪೊಲೀಸರು ಕಠಿಣ ಕ್ರಮ ತೆಗೆದುಕೊಳ್ಳುವ ಮೂಲಕ ಇದಕ್ಕೆಲ್ಲಾ ಕಡಿವಾಣ ಹಾಕಬೇಕು ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಿವಿಪುರಂ ಠಾಣೆ ಸಬ್ ಇನ್ಸ್‌ಪೆಕ್ಟರ್ ಕೆ.ಕೆ.ಮೋಹನ್, ಯಾದವಗಿರಿ ನಿವಾಸಿಗಳಿಗೆ ಸೂಕ್ತ ಭದ್ರತೆ ನೀಡಲಾಗುವುದು. ಈಗಾಗಲೇ ಹಲವು ಕಳವು ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, ರಾತ್ರಿ ವೇಳೆ ಬೀಟ್ ಪೊಲೀಸರ ನಿಯೋಜನೆ ಮಾಡಲಾಗುವುದು. ಅಪರಿಚಿತರಿಂದ ತೊಂದರೆ ಉಂಟಾಗುವ ಮುನ್ಸೂಚನೆ ಕಾಣುತ್ತಿದ್ದಂತೆಯೇ 112 ಟೋಲ್ ಫ್ರೀ ನಂಬರ್‌ಗೆ ಕರೆ ಮಾಡಿ ಎಂದರು.

ವಿವಿ ಸಂಚಾರ ಠಾಣೆ ಸಬ್ ಇನ್ಸ್‌ಪೆಕ್ಟರ್ ಗೌತಮ್ ಮಾತನಾಡಿ, ಯಾದವಗಿರಿಯ ಹಲವೆಡೆ ಬ್ಯಾರಿಕೇಡ್ ಅಳವಡಿಕೆ, ಹಂಪ್ಸ್ ಹಾಗೂ ಕ್ಯಾಟ್ ಐ ಅಳವಡಿಸುವ ಸಂಬಂಧ ಸರ್ವೆ ಮಾಡಿದ್ದು, ಮೇಲಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ಮೇಲಾಧಿಕಾರಿಗಳಿಂದ ಸೂಚನೆ ಬಂದ ಕೂಡಲೇ ಹಂಪ್ಸ್ ಹಾಕಲಾಗುವುದು. ಹಾಗೆಯೇ ಬ್ಯಾರಿಕೇಡ್‌ಗಳನ್ನು ಅಳವಡಿಸಿ, ವಾಹನಗಳ ತಪಾಸಣೆ ನಡೆಸುವ ಮೂಲಕ ಓವರ್ ಸ್ಪೀಡ್ ಮತ್ತು ವ್ಹೀಲಿಂಗ್ ಮಾಡುವವರ ವಿರುದ್ಧ ಕಾನೂನು ರಿತ್ಯ ಕ್ರಮ ಜರುಗಿಸಲಾಗುವುದು ಎಂದರು.

**ಸ್ವಚ್ಛತೆಗೆ ಆದ್ಯತೆ ನೀಡಿ:** ಹಾಗೆಯೇ ಯಾದವಗಿರಿಯಲ್ಲಿ ಸ್ವಚ್ಛತೆಗೆ ಇನ್ನಷ್ಟು ಆದ್ಯತೆ ನೀಡಬೇಕು. ವ್ಯವಸ್ಥಿತವಾಗಿ ಕಸ ವಿಲೇವಾರಿ ಮಾಡುವಂತೆ



ಪಾಲಿಕೆ ಅಧಿಕಾರಿಗಳಲ್ಲಿ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿ ನಗರಪಾಲಿಕೆ ಪರಿಸರ ಇಂಜಿನಿಯರ್ ಶ್ರೀದೇವಿ, ಸ್ವಚ್ಛತೆ ಸಂಬಂಧ ಯಾವುದೇ ಸಮಸ್ಯೆಗಳಿದ್ದರೂ ತ್ವರಿತವಾಗಿ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರಲ್ಲದೆ, ಅಲ್ಲದೆ ಎಲ್ಲೆಲ್ಲಿ ಸಮಸ್ಯೆಗಳಿವೆ ಎಂಬ ಮಾಹಿತಿ ಪಡೆದುಕೊಂಡರು.

ನಗರಪಾಲಿಕೆ ಸದಸ್ಯ ರವೀಂದ್ರ, ಯಾದವಗಿರಿ ನಿವಾಸಿಗಳ ಸಂಘದ ಸಂಚಾಲಕ ಹೆಚ್.ಕೆ.ದಿನೇಶ್, ಪಾಲಿಕೆ ಅಧಿಕಾರಿ ಯೋಗಾನಂದ್, ಹರೀಶ್ ಉಪಸ್ಥಿತರಿದ್ದರು.

## ನಕ್ಕರೆ ಅದೇ ಸ್ವರ್ಗ

ಅಪ್ಪ : ಮಗನೇ ನೀನು ಪಾಸ್ ಆದ್ರೂ ಸರಿ ಫೇಲ್ ಆದ್ರೂ ಸರಿ ನಿನಗೆ ಬೈಕ್ ಕೊಡಿಸ್ತೀನಿ...!

ಮಗ : ಯಪ್ಪೊ... ನಿನ್ನ ಮನಸ್ಸು ದೊಡ್ಡದು, ನೀನು ಬಂಗಾರದ ಮನುಷ್ಯ ಕಣಪ್ಪಾ...

ಅಪ್ಪ : ಹಾಗೇನಿಲ್ಲಾ... ಪಾಸ್ ಆದ್ರೆ ಕಾಲೇಜ್‌ಗೆ ಹೋಗೋದಕ್ಕೆ, ಫೇಲ್ ಆದ್ರೆ ಹಾಲು ಮಾರೋದಕ್ಕೆ...!

ಮೈಸೂರು ಮಿತ್ರ

ಸೋಮವಾರ, 7 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

'ಕೆಲವೊಮ್ಮೆ ಎಲ್ಲವೂ ತಿಳಿದಿದ್ದರೂ ಕೂಡ ಮೌನವಾಗಿ ಇರಬೇಕಾಗುತ್ತದೆ. ಏಕೆಂದರೆ ಸಮಯವು ನಿನ್ನ ವಿರುದ್ಧವಾಗಿರುತ್ತದೆ. ನಿನ್ನ ಸಮಯ ಬರುವವರೆಗೂ ಕಾಯಬೇಕು' –ಶ್ರೀಕೃಷ್ಣ ಪರಮಾತ್ಮ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೈಯಲ್ಲಿ ಕಾಸು ಇದ್ದಾಗ ಊರೆಲ್ಲಾ ನಂಟರು...

## ನಿಮ್ಮ ಪತ್ರಗಳು

### ದಸರಾ ಉದ್ಘಾಟನೆಗೆ ಡಾ.ಸಿಪಿಕೆಯವರನ್ನು ಆಹ್ವಾನಿಸಲಿ



ಮಾನ್ಯರೆ,

ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ನಾಡಿನ ಹಿರಿಯ ಬಹುಶ್ರುತ ಘನ ವಿದ್ವಾಂಸರೂ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಪುರಸ್ಕೃತರೂ ಆದ 'ಸಿಪಿಕೆ' ಎಂಬ ಮೂರಕ್ಷರದ ಕಾವ್ಯನಾಮದ ಡಾ.ಸಿ.ಪಿ. ಕೃಷ್ಣಕುಮಾರ್ ಸರ್ವ ರೀತಿಯಲೂ ಸೂಕ್ತ ಮತ್ತು ಸಮರ್ಥರು. ಮೈಸೂರು ತವರು ನೆಲದವರು ಎಂಬುದು ವಿಶೇಷ. ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಮತ್ತು ನಿರ್ದೇಶಕರಾಗಿ ಅಹರ್ನಿಶಿ ದುಡಿದಿದ್ದಾರೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿದ್ವತ್ ಪರಂಪರೆಯ ಪ್ರಮುಖ ಕೊಂಡಿಯಾಗಿದ್ದವರು ಕೂಡಾ. ಹಾಗಾಗಿ ಸಿಪಿಕೆಯವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸುವುದು ಸಾಹಿತ್ಯ ಲೋಕಕ್ಕೆ, ಅದರಲ್ಲೂ ಮೈಸೂರಿನ ವಿದ್ವತ್ತಿನ ಪರಂಪರೆಯನ್ನು ಗೌರವಿಸಿದಂತೆ ಆಗುತ್ತದೆ. ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವ ಹೊಂದಿರುವ ಸಿಪಿಕೆ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನನ್ಯ. ಕಾವ್ಯ, ಪ್ರಬಂಧ, ವಿಮರ್ಶೆ, ವಿಚಾರ, ಸಂಶೋಧನೆ, ಜಾನಪದ, ಅಂಕಣ, ಜೀವನ ಚರಿತ್ರೆ, ಸಂಪಾದನೆ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷಾಂತರ ಸೇರಿದಂತೆ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ 300ಕ್ಕೂ ಮೀರಿ ಅಮೂಲ್ಯ ಕೃತಿಗಳನ್ನು ರಚಿಸಿದ್ದಾರೆ. ಸಿಪಿಕೆಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಪದವಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಮುಕ್ತ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಸೇರಿದಂತೆ ನೂರಾರು ಪ್ರತಿಷ್ಠಿತ ಪ್ರಶಸ್ತಿಗಳು ದೊರೆತಿವೆ. ಆದ್ದರಿಂದ ಈ ಬಾರಿಯ ದಸರಾ ಉದ್ಘಾಟನೆಗೆ ಅವರನ್ನು ಆಹ್ವಾನಿಸುವುದು ಸೂಕ್ತ. ಈ ದಿಕ್ಕಿನಲ್ಲಿ ಸರ್ಕಾರ ಒಮ್ಮತದ ದೃಢ ನಿರ್ಧಾರ ಕೈಗೊಳ್ಳಲಿ.

–ಟಿ.ಸತೀಶ್ ಜವರೇಗೌಡ, ಮೈಸೂರು.

### ಸಿಟಿ ಬಸ್ ಚಾಲಕ, ನಿರ್ವಾಹಕರ ವರ್ತನೆ ಬದಲಾಗಲಿ

ಮಾನ್ಯರೆ,

ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಎಂದು ಘೋಷಿಸಿದಾಗಿನಿಂದಲೂ ಮೈಸೂರು ನಗರದ ಕೆಲ ಸಿಟಿ ಬಸ್ ಚಾಲಕ ಹಾಗೂ ನಿರ್ವಾಹಕರ ವರ್ತನೆಯು ತೀರ ಬೇಸರವನ್ನುಂಟು ಮಾಡಿದೆ. ಮಹಿಳಾ ಪ್ರಯಾಣಿಕರನ್ನು ಕಂಡರೆ ಚಾಲಕರು ಬಸ್ ನಿಲ್ಲಿಸುವುದೇ ಇಲ್ಲ. ಬಸ್ ತಂಗುದಾಣದ ಹಿಂದೆಯೇ ಬಸ್ ಅನ್ನು ನಿಲ್ಲಿಸುತ್ತಿದ್ದಾರೆ. ಒಂದು ವೇಳೆ ಬಸ್ ನಿಲ್ಲಿಸಿದರು ಬಾಗಿಲುಗಳನ್ನು ಮುಚ್ಚಿರುತ್ತಾರೆ. ಬಸ್ ಹತ್ತದಂತೆ ಗದರುವುದು. ಇನ್ನು ನಿರ್ವಾಹಕರ ವಿಷಯಕ್ಕೆ ಬಂದರೆ ಕೆಲ ನಿರ್ವಾಹಕರು ದುರಹಂಕಾರದಿಂದ ಮಹಿಳೆಯರೊಂದಿಗೆ ವರ್ತಿಸುತ್ತಾರೆ. ಉಚಿತ ಟಿಕೆಟ್ ನೀಡಬೇಕೆಂದು ಬೇಕಾಬಿಟ್ಟಿ ಟಿಕೆಟ್ ಅನ್ನು ಎಸೆಯುವುದು, ಮಹಿಳಾ ಪ್ರಯಾಣಿಕರಿಗೆ ಗದರುವುದು, ಬಯ್ಯುವುದು, ವಿದ್ಯಾರ್ಥಿಗಳಿಗೂ ಇದೇ ಪರಿಸ್ಥಿತಿ. ಹೀಗೆ ಇವರುಗಳ ಈ ಅಸಡ್ಡೆ ವರ್ತನೆಯಿಂದ ಪ್ರತಿನಿತ್ಯ ಮಹಿಳಾ ಪ್ರಯಾಣಿಕರಿಗೆ ಬೇಸರ ಹಾಗೂ ಕಿರಿಕಿರಿಯಾಗುತ್ತಿದೆ. ಆದ್ದರಿಂದ ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಇವರಿಗೆ ಕನಿಷ್ಠ ಮಹಿಳೆಯರ ಜೊತೆ ಹೇಗೆ ವರ್ತಿಸಬೇಕು ಎಂದು ತಿಳಿಸಿ ಕೊಡಬೇಕಾಗಿ ವಿನಂತಿ.

–ಶ್ವೇತಾ ಚಿದಂಬರ್, ಪತ್ರಿಕೋದ್ಯಮ ವಿದ್ಯಾರ್ಥಿನಿ, ಮಾನಸ ಗಂಗೋತ್ರಿ

### ಪುಂಡರ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರಿನ ಹೆಸರಾಂತ ಶಿಕ್ಷಣ ಸಂಸ್ಥೆಯಾದ ಗೋಪಾಲಸ್ವಾಮಿ ಸಮೂಹ ಶಿಕ್ಷಣ ಸಂಸ್ಥೆಯ ಮುಂಭಾಗ ಬೆಳಗ್ಗೆ ಮತ್ತು ಸಂಜೆ ಪುಂಡರ ಹಾವಳಿ ಹೆಚ್ಚಾಗಿದೆ. ಶಾಲೆಯ ಮುಂಭಾಗವೇ ಬೈಕ್ ವ್ಹೀಲಿಂಗ್, ಹೊಡೆದಾಟ ಹೆಚ್ಚಾಗಿದ್ದು ಪೊಲೀಸರ ಗಮನಕ್ಕೆ ತಂದರೂ ಇವರ ತೊಂದರೆ ತಪ್ಪಿಲ್ಲ, ಮುಂದೊಂದು ದಿನ ದೊಡ್ಡ ಅನಾಹುತ ಆಗಬಹುದು, ಸಂಬಂಧಪಟ್ಟವರು ಕ್ರಮಕೈಗೊಳ್ಳಬೇಕೆಂದು ಈ ಮೂಲಕ ಮನವಿ ಮಾಡುತ್ತಿದ್ದೇವೆ. –ಕ.ರ.ವೇ. ಪಿಂಟು, ಅಗ್ರಹಾರ, ಮೈಸೂರು

### ಘೋರ ಪರಿಣಾಮ ಬೀರುವ ಮಾದಕ ವಸ್ತುಗಳು

ಮಾನ್ಯರೆ,

ಮೈಸೂರು, ಕೊಡಗು ಸೇರಿದಂತೆ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅತೀ ಹೆಚ್ಚು ಮಾದಕ ವಸ್ತು ಸೇವನೆ ಎಂಬ ಪತ್ರಿಕಾ ವರದಿ ಗಾಬರಿಗೊಳಿಸುವಂತಹುದು. ಸಾಂಸ್ಕೃತಿಕ ನಗರಿ ಮೈಸೂರು ಸಹ ಈ ಪಟ್ಟಿಯಲ್ಲಿರುವುದು ಮತ್ತಷ್ಟು ಆತಂಕಕಾರಿಯಾದ ವಿಚಾರ. ಮಾದಕ ವಸ್ತುಗಳ ಜಾಲದಲ್ಲಿ ದೇಶದ ಯುವ ಜನತೆ ಸಿಲುಕಿ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವುದು ಸಹಾ ಅತ್ಯಂತ ಬೇಸರದ ಸಂಗತಿ. ಮಾದಕ ವಸ್ತುಗಳು ಮಾಯಾಲೋಕ ಭ್ರಮೆಯನ್ನು ಸೃಷ್ಟಿಸುತ್ತಲೇ ಯುವಕರನ್ನು ವಿಶೇಷವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ತನ್ನ ಕಬಂಧಬಾಹುಗಳಲ್ಲಿ ಬಂಧಿಸಿ ಅವರ ಬದುಕನ್ನು ಮೂರಾಬಟ್ಟೆಯನ್ನಾಗಿಸುತ್ತದೆ. ಒಮ್ಮೆ ಮಾದಕ ವಸ್ತುವಿನ ಚಟಕ್ಕೆ ಬಿದ್ದ ವ್ಯಕ್ತಿ ಅದರಿಂದ ಹೊರಬರುವುದು ಹುಲಿಯ ಬೋನಿನಿಂದ ಹೊರ ಬರುವಷ್ಟೇ ಕಷ್ಟಕರವಾದದ್ದು. ಗಾಂಜಾ, ಚರಸ್, ಅಫೀಮು, ಹೆರಾಯಿನ್, ಎಲ್‌ಎಸ್‌ಡಿ ಮಾತ್ರೆಗಳು ಮುಂತಾದ ಮಾದಕ ವಸ್ತುಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ, ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಕಳ್ಳಸಾಗಣೆ ಮಾಡಿ ಅದರಿಂದ ಕೋಟ್ಯಂತರ ರೂಪಾಯಿಗಳನ್ನು ಗಳಿಸುತ್ತಿರುವ ವ್ಯಕ್ತಿಗಳಿಗೆ ರಾಜಕಾರಣಿಗಳ ಹಾಗೂ ಹಿರಿಯ ಅಧಿಕಾರಿಗಳ ಕೃಪಾಕಟಾಕ್ಷ ಕೂಡ ಇರುತ್ತದೆ. ಮಾದಕ ವಸ್ತುಗಳು ದೈಹಿಕ ಆರೋಗ್ಯಕ್ಕಿಂತ ಹೆಚ್ಚಾಗಿ ಮಾನಸಿಕ ಆರೋಗ್ಯದ ಮೇಲೆ ಗಾಢವಾದ ಹಾಗೂ ಘೋರವಾದ ಪರಿಣಾಮ ಬೀರಿ, ವ್ಯಕ್ತಿಯನ್ನು ಜೀವಂತ ಶವವನ್ನಾಗಿಸುತ್ತದೆ. ವೈದ್ಯರು ಹೇಳುವಂತೆ, ಮಾದಕ ವಸ್ತುಗಳು, ನರಗಳ ದೌರ್ಬಲ್ಯ, ಶ್ವಾಸಕೋಶದ ಕಾಯಿಲೆ, ಕ್ಯಾನ್ಸರ್ ಮುಂತಾದ ಭೀಕರ ಕಾಯಿಲೆಗಳಿಗೆ ಕಾರಣವಾಗಬಹುದು. ಅನೇಕ ಮಾದಕ ವಸ್ತುಗಳ ದಾಸರು ಖಿನ್ನತೆಗೆ ಜಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಮಾಧ್ಯಮಗಳಲ್ಲಿ ಆಗಾಗ ಪ್ರಕಟವಾಗುತ್ತಲೇ ಇರುತ್ತದೆ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿ 37.80 ಕೋಟಿ ಜನ ಮಾದಕ ವಸ್ತುಗಳಿಗೆ ದಾಸರಾಗಿದ್ದಾರೆ ಎಂದು ಹೇಳಲಾಗುತ್ತದೆ. ಕುಡಿತದ ಚಟದಿಂದ ಬಿಡಿಸುವ ಹಾಗೆ, ಮಾದಕ ವಸ್ತುಗಳ ಚಟದಿಂದ ಬಿಡಿಸಲು ಹಲವಾರು ಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಪೋಷಕರು ತಮ್ಮ ಮಕ್ಕಳು ಈ ಚಟಕ್ಕೆ ಸಿಲುಕಿದ್ದಾರೆ ಎಂಬ ಸತ್ಯ ಗೊತ್ತಾದಾಗ, ಮಕ್ಕಳನ್ನು ದಂಡಿಸದೇ ಅವರು ಈ ಚಟದಿಂದ ಹೇಗೆ ಮುಕ್ತರಾಗಬಹುದು ಎಂಬುದರ ಕಡೆ ಹೆಚ್ಚು ಗಮನ ಹರಿಸಬೇಕು. ಸಮಾಜ ಮತ್ತು ಸರ್ಕಾರ ಇದರ ಬಗ್ಗೆ ಎಚ್ಚೆತ್ತುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ, ಪರಿಣಾಮ ಭೀಕರವಾಗುತ್ತದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

# ಸುಗಂಧ ಕಳೆದುಕೊಳ್ಳುತ್ತಿರುವ ಸಂಬಂಧ...!



"ಇಂದಿನ ಆಧುನಿಕ ಜೀವನ ಶೈಲಿಗೆ ಮಾರುಹೋದ ದಂಪತಿಗಳು ಒಂದು ಅಥವಾ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಮಾಡಿಕೊಳ್ಳುತ್ತಿಲ್ಲ. ಹೆತ್ತವರು ಹೊರೆ ಎನಿಸುವುದು ಸರಿ, ಆದರೆ ಮಕ್ಕಳೇ ಹೊರೆ ಎಂದು ಭಾವಿಸಿದರೆ ಗತಿ ಏನು? ಈ ಕಾಲದ ಆಘಾತಕಾರಿ ಬೆಳವಣಿಗೆ ಏನೆಂದರೆ ಎಷ್ಟೋ ಉದ್ಯೋಗಿ ದಂಪತಿಗಳು ಮಕ್ಕಳೇ ಬೇಡ ಎಂಬ ತೀರ್ಮಾನ ಕೈಗೊಳ್ಳುತ್ತಿದ್ದಾರಂತೆ ! ಏಕೆಂದರೆ ಮಕ್ಕಳು ಎಂದರೆ ಜವಾಬ್ದಾರಿ, ತಮ್ಮ ಕೆರಿಯರ್‌ಗೆ ಧಕ್ಕೆಯಾಗುತ್ತದೆ ಎಂದು. ಈಗಾಗಲೇ ಅನೇಕ ಸಂಬಂಧಗಳ ಹೆಸರುಗಳೇ ಮರೆಯಾಗುತ್ತಿವೆ. ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ, ಬಾವ, ಬಾವಮೈದುನ, ನಾದಿನಿ, ಅತ್ತಿಗೆ, ವಾರಗಿತ್ತಿ, ಸೋದರ ಮಾವ, ಸೋದರ ಅತ್ತೆ...... ಇವುಗಳನ್ನು ಕೇಳುವುದೇ ಅಪರೂಪವಾಗುವ ಕಾಲ ಸನ್ನಿಹಿತವಾಗಿದೆ. ಇದಕ್ಕಿಂತ ಘೋರವಾದುದು ಮತ್ತೊಂದು ಸಂಬಂಧ, ಅದೇ ಲಿವ್ ಇನ್ / ಲಿವಿಂಗ್ ಟುಗೆದರ್. ಈ ಸಂಬಂಧಕ್ಕೆ ಗಂಧ ಗಾಳಿ ಏನೂ ಇಲ್ಲ, ಜವಾಬ್ದಾರಿ ಇಲ್ಲ, ಹೊಣೆಗಾರಿಕೆ ಇಲ್ಲ, ಒಂದು ರೀತಿಯಲ್ಲಿ ಈ ಸಂಬಂಧಕ್ಕೆ ಅರ್ಥವೇ ಇಲ್ಲ. ಎಷ್ಟೋ ಈ ರೀತಿಯ ಸಂಬಂಧಗಳು ಹಳಸಿ ಹೋಗಿ ಸಂಗಾತಿಯ ಅಮಾನುಷ ಕೊಲೆಯಲ್ಲಿ ಅಂತ್ಯವಾಗುತ್ತಿರುವುದು ಶತಮಾನದ ದುರಂತವೇ ಸರಿ.

ಮನುಷ್ಯನ ಬದುಕಿನಲ್ಲಿ ಸಂಬಂಧ ಎಂಬುದು ಜೀವಸಂಜೀವಿನಿ. ಸಂಘಜೀವಿಯಾದ ಮನುಷ್ಯ ತನ್ನ ಜೀವಮಾನವಿಡೀ ನಿತ್ಯವೂ ಸಂಬಂಧ ಸೆಲೆ ಹಾಗೂ ನೆಲೆಯಲ್ಲಿಯೇ ಜೀವಿಸಬೇಕಾಗುತ್ತದೆ. ಸಂಬಂಧ ಎಂದೊಡನೆ ರಕ್ತ ಸಂಬಂಧವೇ ಆಗಬೇಕಿಲ್ಲ, ಸ್ನೇಹ ಸಂಬಂಧವೂ ಅದಕ್ಕಿಂತ ಮಿಗಿಲಾಗಿ ಇರುತ್ತದೆ. ಹತ್ತಿರದ ಸಂಬಂಧ, ದೂರದ ಸಂಬಂಧ, ನೆರೆಹೊರೆಯವರ ಸಂಬಂಧ, ಕೆಲಸ ನಿರ್ವಹಿಸುವ ಕಡೆ ಸಹೋದ್ಯೋಗಿಗಳ ಸಂಬಂಧ, ವ್ಯಾಪಾರ ಸಂಬಂಧ.. ಹೀಗೆ ಯಾವುದಾದರೂ ಸಂಬಂಧದ ಬೇರು ನಿತ್ಯ ಸಂಪರ್ಕದಲ್ಲಿ ಇರುತ್ತದೆ. ಸಂಬಂಧ ಸುಗಂಧ ಬೀರುತ್ತಿದೆ ಎಂದರೆ ಅದು ಆರೋಗ್ಯಕರ ಸಂಬಂಧ ಎನ್ನಬಹುದು, ಅದು ದುರ್ಗಂಧ ಬೀರಲು ಶುರುವಾಯಿತು ಎಂದರೆ ಅನಾರೋಗ್ಯ ಶುರುವಾಯಿತು ಎಂದೇ ಅರ್ಥ. ಇತ್ತೀಚಿನ ದಿನಮಾನಗಳಲ್ಲಿ ಸ್ವಾರ್ಥ, ದುರಾಸೆ, ನಿರೀಕ್ಷೆಗಳಿಂದ ಸಂಬಂಧಗಳು ಅರ್ಥ ಕಳೆದುಕೊಂಡು ಪ್ರೀತಿಪೂರ್ವಕವಾಗಿರಬೇಕಾಗಿದ್ದವು, ವ್ಯವಹಾರಿಕ ಸಂಬಂಧಗಳಾಗಿ ಉಳಿದುಕೊಂಡು ಸಂಬಂಧದ ಸುಗಂಧವನ್ನು ಕಳೆದುಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿ. ಫಾದರ್ಸ್ ಡೇ, ಮದರ್ಸ್ ಡೇ, ಫ್ರೆಂಡ್‌ಶಿಪ್ ಡೇ... ಹೀಗೆ ಎಲ್ಲಾ ಸಂಬಂಧಗಳು ಆಚರಣೆ ದಿನಕ್ಕೆ ಮಾತ್ರ ಸೀಮಿತವಾಗುತ್ತಿರುವುದು ದುರದೃಷ್ಟಕರ. ಹುಟ್ಟುಹಬ್ಬಕ್ಕೆ ಬಂದು ಕೇಕ್ ಕತ್ತರಿಸುವಾಗ ಬರುವವರು ಮಾತ್ರ ಬಂಧುಗಳಲ್ಲ, ಕಷ್ಟಕಾಲಕ್ಕೆ ಹೆಗಲು ಕೊಡುವವರು ಸಹ ಬಂಧುಗಳಾಗುತ್ತಾರೆ. ನಿರೀಕ್ಷೆಯಿಲ್ಲದ ಸಂಬಂಧಗಳು ಬಹುಕಾಲ ಉಳಿಯುತ್ತವೆ.

ಹಿಂದೆ ಸಂಬಂಧಗಳಿಗೆ ಲೈಫ್‌ಟೈಮ್ ಗ್ಯಾರಂಟಿ ನೀಡಬಹುದಿತ್ತು. ಅದರಲ್ಲೂ ಪ್ರಮುಖವಾಗಿ ಪತಿ–ಪತ್ನಿ ಸಂಬಂಧಕ್ಕೆ ಇದು ಹೆಚ್ಚಾಗಿ ಅನ್ವಯಿಸುತ್ತಿತ್ತು. ಗುರುಹಿರಿಯರ ಸಮ್ಮುಖ ಹಾಗೂ ಆಶೀರ್ವಾದದಿಂದ ದಂಪತಿಗಳಾದವರೂ ಜೀವಮಾನವಿಡೀ ಒಟ್ಟಿಗೆ ಇರುವ ಗ್ಯಾರಂಟಿ ಇರುತ್ತಿತ್ತು. ಅವಿದ್ಯಾವಂತರಾಗಿದ್ದರೂ ಸಂಸಾರದಲ್ಲಿ ಏಳುಬೀಳುಗಳನ್ನು ಅನುಭವಿಸಿದರೂ, ಬಡತನದ ಬೇಗೆಯಲ್ಲಿ ಬೆಂದರೂ ಒಬ್ಬರನ್ನೊಬ್ಬರು ಬಿಟ್ಟುಹೋಗುವ ಪ್ರಮೇಯವೇ ಇರುತ್ತಿರಲಿಲ್ಲ. ವಿಚ್ಛೇದನ ಎಂಬುದು ಬಲು ಅಪರೂಪದ ಸುದ್ದಿಯಾಗುತ್ತಿತ್ತು. ಒಂದು ಹೆಣ್ಣು ಗಂಡನ ಮನೆಗೆ ಬಂದಾಗ ಅತ್ತೆ ಮಾವ, ಬಾವ, ಮೈದುನ, ನಾದಿನಿ, ವಾರಗಿತ್ತಿ ಹೀಗೆ ಎಲ್ಲರೊಟ್ಟಿಗೆ ಇಷ್ಟವೋ ಕಷ್ಟವೋ ಸಂಬಂಧವನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುತ್ತಿದ್ದರು. ಆದರೆ ಇಂದಿನ ದಿನಮಾನದಲ್ಲಿ ಗಂಡನೊಟ್ಟಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಸಂಸಾರ ನಡೆಸಿದರೆ ಸಾಕು ಎಂದು ಹೆಣ್ಣು ಹೆತ್ತವರು ಆಶಿಸುತ್ತಾರೆ. ವಿದ್ಯಾವಂತರಾಗಿ, ಬುದ್ಧಿವಂತರಾಗಿ, ಗಂಡಹೆಂಡತಿ ಇಬ್ಬರೂ ಉದ್ಯೋಗಿಗಳಾಗಿದ್ದರೂ, ಬದುಕಿನಲ್ಲಿ ಯಾವುದೇ ಕೊರತೆ ಇರದಿದ್ದರೂ ಕ್ಷುಲ್ಲಕ ಕಾರಣಕ್ಕೆ ಸಂಬಂಧವನ್ನು ಕಡ್ಡಿ ಮುರಿದ ಹಾಗೆ ಮುರಿದುಕೊಳ್ಳುವ ಪರಿಪಾಠ ಹೆಚ್ಚಾಗಿದೆ. ಹಿರಿಯರು ಬಿಸಿರಕ್ತದ ಮಗಳಿಗೋ/ಮಗನಿಗೋ ಬುದ್ಧಿ ಹೇಳುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಮಾಡಿದ್ದುಣ್ಣೋ ಮಾರಾಯ ಎಂಬಂತೆ ಬೇರ್ಪಟ್ಟವರು ಕಷ್ಟ ಅನುಭವಿಸುವುದು ಸರಿ, ಏನೂ ತಪ್ಪು ಮಾಡದ ಲಕ್ಷಾಂತರ ರೂಪಾಯಿ ಸಾಲ ಮಾಡಿ ಶಿಕ್ಷಣ ಕೊಡಿಸಿ, ಮದುವೆ ಮಾಡುವ ಹೆತ್ತವರು ಶಿಕ್ಷೆ ಅನುಭವಿಸುವುದು ಮಾತ್ರ ವರ್ಣಿಸಲು ಆಗದ ನೋವಾಗಿದೆ.

ಆಸ್ತಿ ಸಂಪತ್ತು, ಅಂತಸ್ತು ಸಂಬಂಧಗಳನ್ನು ವೃದ್ಧಿಸುವ ಬದಲು ಸಂಬಂಧಗಳನ್ನು ಮರಿಯುವ ಸಂಗತಿಗಳಾಗುತ್ತಿರುವುದು ನಾಗರಿಕ ಪ್ರಪಂಚದ ವಿಪರ್ಯಾಸ. ಮನುಷ್ಯನಿಗೆ ಸಂಪತ್ತು ಹಾಗೂ ಅಂತಸ್ತು ಅಹಂಕಾರವನ್ನು ಹುಟ್ಟಿಸುತ್ತದೆ. ಹಣದಿಂದ ಎಲ್ಲವನ್ನೂ ಕೊಂಡುಕೊಳ್ಳಬಲ್ಲೆ ಎಂದು ಭಾವಿಸುತ್ತಾನೆ. ಆದರೆ ಹಣಕೊಟ್ಟು ಒಳ್ಳೆಯ ಸಂಬಂಧಗಳನ್ನು ಕೊಳ್ಳಲಾಗದು. ಹಣ ನೋಡಿ ಸಂಬಂಧ ಮಾಡುವವರು ಶಾಶ್ವತ ಸಂಬಂಧಿಗಳಾಗಲು ಸಾಧ್ಯವಿಲ್ಲ. ಕೊರತೆ ಹಾಗೂ ಅವಲಂಬನೆ ಮನುಷ್ಯನಿಗೆ ದುರ್ಬಲ ಅಂಶಗಳಾದರೂ ಅವುಗಳು ಸಂಬಂಧಗಳನ್ನು ಉಳಿಸುವ ಸಂಗತಿಗಳಾಗಿವೆ ಎನ್ನಬಹುದು. ಆಧುನಿಕ ನಾಗರಿಕ ಪ್ರಪಂಚದಲ್ಲಿ ನಂಬಲು ಆಗದ ವಿದ್ಯಮಾನಗಳು ನಡೆಯುತ್ತಿವೆ. ಮಕ್ಕಳ ಸೌಖ್ಯಕ್ಕಾಗಿ ತಮ್ಮ ಸುಖವನ್ನು ತ್ಯಾಗ ಮಾಡಿದ ಹೆತ್ತವರನ್ನು ಇಳಿವಯಸ್ಸಿನಲ್ಲಿ ನೋಡಿಕೊಳ್ಳುವ ಜವಾಬ್ದಾರಿಯನ್ನು ನಿಭಾಯಿಸದೇ ಇರುವುದು ಈಗ ಸರ್ವೇ ಸಾಮಾನ್ಯವಾದ ವಿಷಯವಾಗಿದೆ. ನಗರ ಪ್ರದೇಶದ ಜನ ವಯಸ್ಸಾದ ಹೆತ್ತವರನ್ನು ವೃದ್ಧಾಶ್ರಮಗಳಲ್ಲಿ ಇರಿಸಿದರೆ, ಗ್ರಾಮೀಣ ಭಾಗದಲ್ಲಿ ಇದಕ್ಕಿಂತ ಘೋರವಾದ ಒಂದು ಅಭ್ಯಾಸವಿದೆ. ಹಿರಿಯರಿಗೆ ಇಬ್ಬರು ಮಕ್ಕಳಿದ್ದರೆ ಒಬ್ಬ ಮಗ ತಾಯಿಯನ್ನು ಸಾಕುವುದು, ಮತ್ತೊಬ್ಬ ತಂದೆಯನ್ನು ಸಾಕುವುದು. ಹೆತ್ತವರ ಆಸ್ತಿಯನ್ನು ಹಂಚಿಕೊಳ್ಳುವುದು ಸಹಜ, ಆದರೆ ಹೆತ್ತವರನ್ನೇ ಹಂಚಿಕೊಳ್ಳುವ ಈ ಪದ್ಧತಿಯಂತೂ ಹೇಯವಾದುದು. ಬೇಜವಾಬ್ದಾರಿ ಮಕ್ಕಳು ತಮ್ಮ ಸ್ವಾರ್ಥಕ್ಕೆ ಅಸಹಾಯಕ ಹೆತ್ತವರನ್ನು ಇಳಿವಯಸ್ಸಿನಲ್ಲಿ ಬೇರ್ಪಡಿಸುವುದು ಎಂದರೆ? ಇದಕ್ಕಿಂತ ಮಾನಸಿಕ ದಿವಾಳಿತನ ಮತ್ತೊಂದುಂಟೆ. ಸಂಬಂಧ ಎಂಬುದಕ್ಕೆ ಅರ್ಥವೇ ತಿಳಿಯದೆ ಪ್ರತಿಷ್ಠೆ, ಅಣ್ಣತಮ್ಮಂದಿರ ಜಗಳದಿಂದ ಹೆತ್ತವರ ಕಣ್ಣಲ್ಲಿ ನೀರುತರಿಸುವುದು ಅಮಾನುಷ ಕೃತ್ಯವೇ ಸರಿ.

ಹೆಣ್ಣನ್ನು ಕ್ಷಮಯಾಧರಿತ್ರಿ, ಸಂಯಮದ ಸಾಕಾರಮೂರ್ತಿ, ತ್ಯಾಗಮೂರ್ತಿ ಎಂದೆಲ್ಲಾ ಬಣ್ಣಿಸಲಾಗುತ್ತದೆ. ಆದರೆ ಇತ್ತೀಚೆಗೆ ಕೇಳಿದ ಒಂದು ಸಂಗತಿ ಎಂತವರನ್ನು ಚಿಂತನೆಗೆ ದೂಡುತ್ತದೆ. ಆ ಹಿರಿಯ ಜೀವಗಳಿಗೆ ಒಟ್ಟು ಆರು ಮಕ್ಕಳು, ಒಬ್ಬ ಮಗ ಇನ್ನುಳಿದವರು ಹೆಣ್ಣು ಮಕ್ಕಳು. ಗಂಡನನ್ನು ಕಳೆದುಕೊಂಡು ಒಂಟಿಯಾದ ತಾಯಿಯನ್ನು ಆರು ಜನರಲ್ಲಿ ಯಾರಾದರೂ ನೋಡಿಕೊಳ್ಳಬಹುದಿತ್ತು. ಆದರೆ ಎಲ್ಲರೂ ಸೇರಿ ಹೊಸ ರೂಲ್ಸ್ ತಂದರು. ಪ್ರತಿಯೊಬ್ಬರೂ ತಾಯಿಯನ್ನು ಎರಡೆರಡು ತಿಂಗಳು ನೋಡಿಕೊಳ್ಳುವುದು ಎಂದು. ಆರು ಮಕ್ಕಳನ್ನು ಒಂದೇ ಮನೆಯಲ್ಲಿ ಭೇದಭಾವ ಮಾಡದೇ ಸಾಕಿದ್ದ ಹೆತ್ತ ಕರುಳಿಗೆ ಈ ರೂಲ್ಸ್ ಕರುಳು ಕಿತ್ತು ಬರುವಂತೆ ಮಾಡಿತ್ತು. ಆಯಸ್ಸು ತೀರುವ ಮೊದಲೇ ಆಕೆ ಇಹಲೋಕ ತ್ಯಜಿಸುವಂತೆ ಆಯಿತು. ಮಕ್ಕಳಿಗೆ ತಮ್ಮ ಹೆತ್ತವರೇ ಹೊರೆ ಎನಿಸಿದರೆ ಮುಂದೆ ಅವರು ತಮ್ಮ ಮಕ್ಕಳಿಗೆ ಹೊರೆಯಾಗಿಬಿಡುವುದಿಲ್ಲವೇ? ಎಂಬ ಪ್ರಶ್ನೆ ಮೂಡದಿರುವುದು ಸೋಜಿಗದ ಸಂಗತಿ.

ಇಂದಿನ ಆಧುನಿಕ ಜೀವನ ಶೈಲಿಗೆ ಮಾರುಹೋದ ದಂಪತಿಗಳು ಒಂದು ಅಥವಾ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಮಾಡಿಕೊಳ್ಳುತ್ತಿಲ್ಲ. ಹೆತ್ತವರು ಹೊರೆ ಎನಿಸುವುದು ಸರಿ, ಆದರೆ ಮಕ್ಕಳೇ ಹೊರೆ ಎಂದು ಭಾವಿಸಿದರೆ ಗತಿ ಏನು? ಈ ಕಾಲದ ಆಘಾತಕಾರಿ ಬೆಳವಣಿಗೆ ಏನೆಂದರೆ ಎಷ್ಟೋ ಉದ್ಯೋಗಿ ದಂಪತಿಗಳು ಮಕ್ಕಳೇ ಬೇಡ ಎಂಬ ತೀರ್ಮಾನ ಕೈಗೊಳ್ಳುತ್ತಿದ್ದಾರೆರಂತೆ! ಏಕೆಂದರೆ ಮಕ್ಕಳು ಎಂದರೆ ಜವಾಬ್ದಾರಿ, ತಮ್ಮ ಕೆರಿಯರ್‌ಗೆ ಧಕ್ಕೆಯಾಗುತ್ತದೆ ಎಂದು. ಈಗಾಗಲೇ ಅನೇಕ ಸಂಬಂಧಗಳ ಹೆಸರುಗಳೇ ಮರೆಯಾಗುತ್ತಿವೆ. ಚಿಕ್ಕಪ್ಪ, ದೊಡ್ಡಪ್ಪ, ಚಿಕ್ಕಮ್ಮ, ದೊಡ್ಡಮ್ಮ, ಬಾವ, ಬಾವಮೈದುನ, ನಾದಿನಿ, ಅತ್ತಿಗೆ, ವಾರಗಿತ್ತಿ ಸೋದರ ಮಾವ, ಸೋದರ ಅತ್ತೆ... ಇವುಗಳನ್ನು ಕೇಳುವುದೇ ಅಪರೂಪವಾಗುವ ಕಾಲ ಸನ್ನಿಹಿತವಾಗಿದೆ. ಇದಕ್ಕಿಂತ ಘೋರವಾದುದು ಮತ್ತೊಂದು ಸಂಬಂಧ, ಅದೇ ಲಿವ್ ಇನ್/ಲಿವಿಂಗ್ ಟುಗೆದರ್. ಈ ಸಂಬಂಧಕ್ಕೆ ಗಂಧ ಗಾಳಿ ಏನೂ ಇಲ್ಲ ಜವಾಬ್ದಾರಿ ಇಲ್ಲ, ಹೊಣೆಗಾರಿಕೆ ಇಲ್ಲ, ಒಂದು ರೀತಿಯಲ್ಲಿ ಈ ಸಂಬಂಧಕ್ಕೆ ಅರ್ಥವೇ ಇಲ್ಲ. ಎಷ್ಟೋ ಈ ರೀತಿಯ ಸಂಬಂಧಗಳು ಹಳಸಿ ಹೋಗಿ ಸಂಗಾತಿಯ ಅಮಾನುಷ ಕೊಲೆಯಲ್ಲಿ ಅಂತ್ಯವಾಗುತ್ತಿರುವುದು ಶತಮಾನದ ದುರಂತವೇ ಸರಿ.

ಶಿಕ್ಷಣ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಇಂದು ವ್ಯಾಪಾರಿ ಮನೋಭಾವ ಹೆಚ್ಚಾಗುತ್ತಿದೆ. ಅದು ಸಂಬಂಧದ ವಲಯಕ್ಕೂ ಪ್ರವೇಶ ಪಡೆದಿರುವುದು ದುರದೃಷ್ಟಕರ. ಎಲ್ಲವನ್ನೂ ಲಾಭನಷ್ಟಗಳ ಲೆಕ್ಕದಲ್ಲೇ ಅಳೆಯಲಾಗುತ್ತದೆ. ಯಾರೂ ಯಾವ ಸಂಬಂಧಿಕರ ಮನೆಗೆ ಸುಖಾಸುಮ್ಮನೆ ಹೋಗಿಬರುವ, ಆಹ್ವಾನಿಸುವ ಪದ್ಧತಿ ಮರೆಯಾಗಿದೆ. ಸಕಾರಣವಿದ್ದರೆ ಮಾತ್ರ ನೆಂಟರ ಮನೆಗೆ ಹೋಗುವುದು. ಲೋಕಾಭಿರಾಮವಾಗಿ ಮಾತನಾಡುವ ಅಭ್ಯಾಸ ಯಾರಿಗೂ ಇಲ್ಲ. ಇಂದು ಯಾರಾದರೂ ನಿಮ್ಮ ಮನೆಗೆ ಸುಮ್ಮನೆ ಬರುತ್ತೇವೆ ಎಂದರೆ, ಅವರನ್ನು ಅನುಮಾನಿಸುವ ಮಟ್ಟಿಗೆ ಸ್ವಾರ್ಥ ಸಂಬಂಧಗಳು ಏರ್ಪಟ್ಟಿವೆ. ಏನಾದರೂ ಕೋರಿಕೆ ಇದ್ದರೆ ಮಾತ್ರ ಒಬ್ಬರು ಮನೆಗೆ ಬರುತ್ತಾರೆ ಎಂಬ ಮನೋಭಾವ ಈ ಕಾಲಘಟ್ಟದ ಮನುಷ್ಯನಲ್ಲಿ ಬೆಳೆದಿದೆ.

'Blood is thicker than Water' ಎಂದು ಇಂಗ್ಲಿಷ್‌ನಲ್ಲಿ ನಾಣ್ಣುಡಿ ಇದೆ. ರಕ್ತ ಸಂಬಂಧಕ್ಕಿಂತ ಗಟ್ಟಿ ಸಂಬಂಧ ಮತ್ತೊಂದಿಲ್ಲ ಎನ್ನುತ್ತಿದ್ದರು. ಆದರೆ ಇಂದು ಉಳಿದಿರುವುದು ಯಾವ ಸಂಬಂಧವೂ ಅಲ್ಲ, ಸ್ವಾರ್ಥ ಸಂಬಂಧ. ತುಂಡು ಭೂಮಿಗಾಗಿ ರಕ್ತ ಸಂಬಂಧವನ್ನೇ ತುಂಡರಿಸಿಕೊಂಡು ಬಿಡುವ ದಾನವನಾಗಿದ್ದಾನೆ ಮಾನವ. ಈ ಯುಗದಲ್ಲಿ ಇವಕ್ಕೆಲ್ಲಾ ಅರ್ಥವುಂಟೇ? ಇವೆಲ್ಲದ್ದಕ್ಕೂ ವೈರುಧ್ಯದ ರೀತಿಯಲ್ಲಿ ಅನೇಕರು ರಕ್ತ ಸಂಬಂಧಿಗಳಾಗದಿದ್ದರೂ ಪರಸ್ಪರ ಸ್ನೇಹ, ವಿಶ್ವಾಸ, ತ್ಯಾಗ, ನಿಸ್ವಾರ್ಥದಿಂದ ಸೋದರ/ಸೋದರಿ ಭಾವದಲ್ಲಿ ಬದುಕುತ್ತಿದ್ದಾರೆ. ಎಷ್ಟೋ ಜನ ಮಕ್ಕಳು ತಂದೆ, ತಾಯಿಗೆ ತಮ್ಮ ಅಂಗಾಂಗ ದಾನ ಮಾಡುವ ಮೂಲಕ ಜೀವ ದಾನ ನೀಡಿದ ಉದಾಹರಣೆಗಳಿವೆ. ಆದರೆ ಇಂತಹ ಸಂಬಂಧಗಳು ವಿರಳವಾಗುತ್ತಿರುವುದು ವಿಷಾದಕರ.

ಮನುಷ್ಯ ಮನುಷ್ಯನನ್ನು ಮನುಷ್ಯನಂತೆ ಕಾಣಬೇಕು. ಯಾರೂ ಸಹ ಭೂಮಿಯ ಮೇಲೆ ಸಾವಿರ ವರ್ಷಗಳು ಬದುಕುವುದಿಲ್ಲ. ಇರುವಷ್ಟು ದಿನ ಸಂಬಂಧಗಳನ್ನು ಆರೋಗ್ಯಕರವಾಗಿ ಕಾಪಾಡಿಕೊಳ್ಳಬೇಕು. ಸಂಬಂಧಗಳು ಉಳಿಯಬೇಕಾದರೆ ಸೋಲಬೇಕು, ಸಹಕಾರ ಮನೋಭಾವವಿರಬೇಕು, ನಿಸ್ವಾರ್ಥವಿರಬೇಕು. ಪ್ರತಿಷ್ಠೆ, ಗೆಲ್ಲುವ ಹಠವಿದ್ದರೆ ನೀವು ಗೆಲ್ಲುತ್ತೀರಿ, ಸಂಬಂಧ ಸೋಲುವುದಷ್ಟೇ ಅಲ್ಲ ಸತ್ತು ಹೋಗುತ್ತದೆ. ಸ್ವತ್ತು ಎಷ್ಟೇ ಇರಬಹುದು, ಆದರೆ ಉತ್ತಮ ಸಂಬಂಧ ಎಂಬ ಸ್ವತ್ತಿಗೆ ಸಮನಾದುದು ಯಾವುದೂ ಇಲ್ಲ. ಸಂಬಂಧಗಳನ್ನು ಉಳಿಸುವ, ಬೆಳೆಸುವ ಮನೋಭಾವ ಹೆಚ್ಚಾಗಬೇಕು. ಮನುಷ್ಯ ಎಲ್ಲರನ್ನೂ ಕಳೆದುಕೊಂಡು ಬೇವರ್ಸಿಯಂತೆ ಬದುಕಬಾರದು. ನಿಮ್ಮ ಅಂತಸ್ತು, ಸಂಪತ್ತು ನಿಮ್ಮನ್ನು ಖುಷಿಯಾಗಿರಸದು, ಆದರೆ ಸ್ನೇಹ, ಸಂಬಂಧ ಎಂಬ ಸಂಪತ್ತು ನಿಮ್ಮನ್ನು ಖುಷಿಯಾಗಿರಿಸಬಹುದು. ಅಂತಹ ಸಂಬಂಧಗಳು ನೂರ್ಮಡಿಯಾಗಿ ವೃದ್ಧಿಸಲಿ ಎಂದು ಆಶಿಸೋಣ. ಏನಂತೀರಿ?

**ಪದ ತಾಂಬೂಲ:**

**ಸಂಬಂಧಕ್ಕೆ ರಕ್ತ ಸಂಬಂಧವೇ ಆಗಬೇಕಿಲ್ಲ
ಬಾಯಾರಿಕೆ ಆದಾಗ ನೀರು
ಕೊಟ್ಟವನಿಗಿಂತ ಬಂಧುವಿಲ್ಲ**

# ಕೆಆರ್‌ಎಸ್, ಕಬಿನಿಯಿಂದ ರೈತರ ಬೆಳೆಗೆ ನೀರು ಹರಿಸಲು ಆಗ್ರಹ

ಮೈಸೂರು, ಆ.6(ಎಂಟಿವೈ)– ಕಾವೇರಿ ಹಾಗೂ ಕಬಿನಿ ಜಲಾಶಯದಿಂದ ತಮಿಳುನಾಡಿಗೆ ನೀರು ಬಿಡದೆ ರೈತರಿಗೆ ಕೃಷಿ ಚಟುವಟಿಕೆಗೆ ನೀರು ಬಿಡುವಂತೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸಮರ್ಪಕವಾಗಿ ಮಳೆ ಬಿದ್ದಿಲ್ಲ. ಇದರಿಂದ ಕೃಷಿ ಚಟುವಟಿಕೆ ನಡೆಸಲು ಕೆಲವೆಡೆ ತೊಂದರೆಯಾಗಿದೆ. ಇಂತಹ ಸಂಕಷ್ಟ ಸಂದರ್ಭದಲ್ಲಿ ಸ್ಥಳೀಯ ರೈತರನ್ನು ನಿರ್ಲಕ್ಷಿಸಿ, ಕಬಿನಿ, ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರನ್ನು ಹರಿಸಲು ಮುಂದಾಗಿರುವುದು ಸರಿಯಲ್ಲ. ಈ ಎರಡು ಅಣೆಕಟ್ಟೆಯ ಅಚ್ಚುಕಟ್ಟು ಭಾಗದ ರೈತರನ್ನು ಬಲಿ ಕೊಡಬಾರದು. ಈ ಭಾಗದ ರೈತರು ಕೃಷಿ ಚಟುವಟಿಕೆ ನಡೆಸಲು ಎಲ್ಲಾ ನಾಲೆಗಳಿಗೆ ನೀರು ಹರಿಸಬೇಕು. ಕಳೆದ 2–3 ವರ್ಷದಿಂದ ತಮಿಳುನಾಡಿಗೆ ನಿಗದಿಗಿಂತ ನೂರಾರು ಟಿಎಂಸಿ ಹೆಚ್ಚುವರಿ ನೀರನ್ನು ಹರಿಸಲಾಗಿದೆ. ಹೆಚ್ಚುವರಿ ನೀರನ್ನು ಮೇಕೆದಾಟು ಯೋಜನೆ ಪೂರ್ಣಗೊಳಿಸಿ ಸಂಗ್ರಹಿಸಿಟ್ಟುಕೊಂಡಿದ್ದರೆ, ತಮಿಳುನಾಡಿಗೆ ಇಂತಹ ಸಂಕಷ್ಟ ಕಾಲದಲ್ಲಿ ಬಿಡಬಹುದಾಗಿತ್ತು. ಈ ಹಿನ್ನೆಲೆಯಲ್ಲಿ ಮೇಕೆದಾಟು ಯೋಜನೆ ತ್ವರಿತಗತಿಯಲ್ಲಿ ನಡೆಸುವುದರೊಂದಿಗೆ ತಮಿಳುನಾಡಿಗೆ ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎಂದು ಒತ್ತಾಯಿಸಿದರು.

**ಆ.14ರಂದು ಡಿಸಿ ಕಚೇರಿ ಬಳಿ ಪ್ರತಿಭಟನೆ:** ಕಬ್ಬಿನ ಬಾಕಿ ಟನ್‌ಗೆ 150 ರೂ. ಪಾವತಿ ಹಾಗೂ ಪ್ರಸಕ್ತ ಸಾಲಿನ ಕಬ್ಬು ದರ ನಿಗದಿ ಮತ್ತು ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ಆ.14 ರಂದು ಮೈಸೂರು ಜಿಲ್ಲಾಧಿಕಾರಿ ಕಚೇರಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ಈಗಾಗಲೇ ಬಾಕಿ ಹಣ ಪಾವತಿಗಾಗಿ ಸಕ್ಕರೆ ಕಾರ್ಖಾನೆ ಉಪ ಕಚೇರಿಗಳ ಮುಂದೆ ಪ್ರತಿಭಟನೆ ನಡೆಸಿದ್ದೂ, ಬಾಕಿ ಹಣ ಪಾವತಿಗೆ ಕ್ರಮ ಕೈಗೊಂಡಿಲ್ಲ. ಬಾಕಿ ಹಣ ನೀಡಲು ಒಂದು ವಾರದ ಗಡುವು ನೀಡಲಾಗಿತ್ತು ಆದರೆ, ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಆ.14 ರಂದು ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ ಎಂದರು.

ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡದ ಹಿನ್ನೆಲೆಯಲ್ಲಿ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವುದರಿಂದ ಕಬ್ಬು ಬೆಳೆಯುವವರ ಸಂಖ್ಯೆಯಲ್ಲಿ ಶೇ.30ರಷ್ಟು ಕ್ಷೀಣಿಸಿದೆ. ರೈತರು ಬೇಸತ್ತು ಕಬ್ಬು ಬೆಳೆಯಿಂದಲೇ ದೂರವಾಗುತ್ತಿದ್ದಾರೆ. ಪಕ್ಕದ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳು ಬಣ್ಣಾರಿ ಕಾರ್ಖಾನೆಗಳಿಗಿಂತ ಟನ್‌ಗೆ 100 ರೂ. ಹೆಚ್ಚು ನೀಡುತ್ತಿದ್ದಾರೆ. ಮಹದೇಶ್ವರ ಹಾಗೂ ಬಣ್ಣಾರಿ ಸಕ್ಕರೆ ಕಾರ್ಖಾನೆಯವರಿಗೆ ಹೆಚ್ಚುವರಿ ಹಣ ನೀಡಲು ಯಾಕೆ ಸಾಧ್ಯವಿಲ್ಲ. ಹಿಂದಿನ ವರ್ಷದ ಬಾಕಿ 150 ರೂ. ಹಣ ಪಾವತಿಸಬೇಕು. ಕಬ್ಬು ಕಟಾವು ಕೂಲಿ ಸಾಗಾಣಿಕೆ ವೆಚ್ಚವನ್ನು ಕಾರ್ಖಾನೆಯವರು ಮನಬಂದಂತೆ ಸುಲಿಗೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ವರ್ಷ ನಿಗದಿ ಮಾಡಿರುವ ಕಟಾವು ಕೂಲಿ 450 ರೂ.ಗಿಂತ ಹೆಚ್ಚುವರಿ ತೆಗೆದುಕೊಳ್ಳಬಾರದು. ಕಬ್ಬಿನ ಲಾರಿ ತೂಕ ಮಾಡುವುದು ವಿಳಂಬವಾಗುತ್ತಿರುವುದರಿಂದ ರೈತರಿಗೆ ತೂಕದಲ್ಲೂ ಮೋಸವಾಗುತ್ತಿದೆ. ರೈತರಿಗೆ ಆಗುತ್ತಿರುವ ಮೋಸ ತಪ್ಪಿಸಬೇಕು. ಒಪ್ಪಂದ ಮಾಡಿಕೊಂಡ ರೈತರಿಗೆ ಒಪ್ಪಂದ ಪತ್ರದ ಪ್ರತಿ ನೀಡಬೇಕು. ಒಪ್ಪಂದ ಪ್ರಕಾರ 12 ತಿಂಗಳಿಗೆ ಕಬ್ಬನ್ನು ಕಟಾವು ಮಾಡಬೇಕು. ಕಾರ್ಖಾನೆಯವರು ವಿಳಂಬ ಮಾಡಿದರೆ ವಿಳಂಬದ ಅವದಿಗೆ ಹೆಚ್ಚುವರಿ ಹಣ ಕೊಡಬೇಕು. ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ರೈತರಿಗೆ ನ್ಯಾಯ ಕೊಡಿಸಬೇಕು. ಜಿಲ್ಲೆಯಲ್ಲಿ ಹತ್ತಿ ಬೆಳೆಗೆ ಬೆಳೆ ವಿಮಾ ಪರಿಹಾರ ಬಂದಿಲ್ಲ. ಕೂಡಲೇ ನಷ್ಟದ ಪರಿಹಾರ ಕೊಡಿಸಬೇಕು. ಕೃಷಿ ಪಂಪಸೆಟ್‌ಗಳಿಗೆ ಹಗಲು ವೇಳೆ 12 ಗಂಟೆ ವಿದ್ಯುತ್ ಸರಬರಾಜು ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಅತ್ತಳ್ಳಿ ದೇವರಾಜ್, ಹಳ್ಳಿಕೆರೆ ಭಾಗ್ಯರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ, ವೆಂಕಟೇಶ, ಕಮಲಮ್ಮ, ಮಂಜುನಾಥ, ಸುನೀಲ್ ಇದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಖರ್ಗೆಗೆ ಅವಹೇಳನ; ಆರಗ ಜ್ಞಾನೇಂದ್ರ ವಿರುದ್ಧ ಪೊಲೀಸರಿಗೆ ದೂರು



ಮೈಸೂರು, ಆ.6(ಎಸ್‌ಬಿಡಿ)– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆಂದು ಮಾಜಿ ಗೃಹಸಚಿವ ಆರಗ ಜ್ಞಾನೇಂದ್ರ ಅವರ ವಿರುದ್ಧ ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದ ವತಿಯಿಂದ ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ದೂರು ಸಲ್ಲಿಸಲಾಗಿದೆ.

ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ ನೇತೃತ್ವದಲ್ಲಿ ಖರ್ಗೆ ಅಭಿಮಾನಿಗಳು ದೂರು ಸಲ್ಲಿಸಿದ್ದು, ಆರಗ ಜ್ಞಾನೇಂದ್ರ ಅವರ ವಿರುದ್ಧ ಪರಿಶಿಷ್ಟ ಜಾತಿ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಮಾಜಿ ಗೃಹಸಚಿವ ಆರಗ ಜ್ಞಾನೇಂದ್ರ ಅವರು ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಾ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆಯವರ ಬಣ್ಣದ ಬಗ್ಗೆ ವ್ಯಂಗ್ಯವಾಡಿದ್ದಾರೆ. ಅವರ ತಲೆಯಲ್ಲಿ ಏನೂ ಇಲ್ಲ, ಖಾಲಿ. ಆ ಪ್ರದೇಶದ ಜನರೂ ಸಹ ಹಾಗೆಂಯೇ ಏನೂ ತಿಳಿದಿಲ್ಲ ಎಂದಿದ್ದಾರೆ. ಹೀಗೆ ವರ್ಣಬೇಧ ಹಾಗೂ ಪ್ರಾದೇಶಿಕ ತಾರತಮ್ಯ ಮಾಡಿದ್ದಾರೆ. ಅಗ್ರಗಣ್ಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಅಪಮಾನಿಸುವ ಮೂಲಕ ಇಡೀ ಸಮುದಾಯವನ್ನೂ ಅವಮಾನಿಸಿದ್ದಾರೆ. ಇನ್ನುಮುಂದೆ ಯಾರೂ ವರ್ಣಬೇಧ, ಜಾತಿಬೇಧ, ಪ್ರಾದೇಶಿಕ ತಾರತಮ್ಯದ ಮಾತುಗಳನ್ನಾಡದೆ ಸಂವಿಧಾನ ಗೌರವಿಸುವುದರೊಂದಿಗೆ ಶಾಂತಿ–ಸಾಮರಸ್ಯದಿಂದ ಜೀವನ ನಡೆಸುವಂತಾಗಬೇಕು. ಈ ನಿಟ್ಟಿನಲ್ಲಿ ಆರಗ ಜ್ಞಾನೇಂದ್ರ ವಿರುದ್ಧ ಪರಿಶಿಷ್ಟ ಜಾತಿ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಪ್ರಕರಣ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಕೋರಲಾಗಿದೆ.

ದೂರು ಸಲ್ಲಿಸಿದ ವೇಳೆ ಹಯಿಲಾಳು ರಾಮಸ್ವಾಮಿ, ನಿಂಗಯ್ಯ, ವಿಜಯ್ ಕುಮಾರ್ ಬಂಡಿಪಾಳ್ಯ,ರಾಘವೇಂದ್ರ, ಪ್ರಮೋದ್‌ಕುಮಾರ್, ನಾಗರಾಜ್, ಪುಟ್ಟರಾಜು, ಬಸವರಾಜು, ಸಂತೋಷ್, ನಾರಾಯಣ ಮತ್ತಿತರರು ಹಾಜರಿದ್ದರು.

## ಕುಸ್ತಿಯಲ್ಲಿ ಪ್ರಥಮ ಸ್ಥಾನ



ಮೈಸೂರು, ಆ.6– ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ವಿದ್ಯಾರ್ಥಿ ಕ್ರೀಡಾನಿಧಿ ಮತ್ತು ಶಾಲಾ ಆಟೋಟಗಳ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಶಾಲಾ ಕ್ರೀಡಾ ಸ್ಪರ್ಧೆಯ 80 ಕೆಜಿ ತೂಕ ವಿಭಾಗದ ಕುಸ್ತಿಯಲ್ಲಿ ಸೆಂಟ್ ಫಿಲೋಮಿನಾ ಪ್ರೌಢ ಶಾಲೆ ವಿದ್ಯಾರ್ಥಿ ಸೈಯದ್ ಸಿದ್ದಿಕ್ ಪ್ರಥಮ ಬಹುಮಾನ ಪಡೆದಿದ್ದಾರೆ. ಈತ ಸೈಯದ್ ಫಾರೂಖ್ ಹಾಗೂ ಸುಮಯಾ ಬಾನು ದಂಪತಿ ಪುತ್ರ.

## ಮಣಿಪುರ ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣ: ಠಾಣಾಧಿಕಾರಿ ಸೇರಿ ಐವರು ಪೊಲೀಸರ ಅಮಾನತು

ಇಂಫಾಲ್, ಆ.6– ಮಣಿಪುರದಲ್ಲಿ ಮೇ 4 ರಂದು ಗುಂಪೊಂದು ಇಬ್ಬರು ಮಹಿಳೆಯರನ್ನು ವಿವಸ್ತ್ರಗೊಳಿಸಿ ಪರೇಡ್ ಮಾಡಿದ ಘಟನೆಗೆ ಸಂಬಂಧಿಸಿದಂತೆ ಆ ಪ್ರದೇಶದ ಠಾಣಾಧಿಕಾರಿ ಸೇರಿದಂತೆ ಐವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈ 19ರಂದು ಘಟನೆಯ ವೀಡಿಯೊ ವೈರಲ್ ಆದ ನಂತರ ಮಣಿಪುರ ಪೊಲೀಸರು ತೌಬಲ್ ಜಿಲ್ಲೆಯ ನಾಂಗ್‌ಪೋಕ್ ಸೆಕ್ಮೈ ಪೊಲೀಸ್ ಠಾಣೆಯ ಉಸ್ತುವಾರಿ ಮತ್ತು ಇತರ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತುಗೊಳಿಸಲು ನಿರ್ಧರಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕ್ರಮವನ್ನು ತ್ವರಿತವಾಗಿ ತೆಗೆದುಕೊಳ್ಳಲಾಗಿದೆ ಮತ್ತು ಅವರ ಅಮಾನತು ಹಿಂಪಡೆಯಬೇಕು ಎಂದು ಬಹುಸಂಖ್ಯಾತ ಸಮುದಾಯದ ಜನರು ಪ್ರತಿಭಟನೆ ನಡೆಸುತ್ತಿದ್ದರೂ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ. ಆ.3ರಂದು ಬಿಷ್ಣುಪುರದಲ್ಲಿ ಶಸ್ತ್ರಾಗಾರ ಲೂಟಿ ಪ್ರಕರಣವನ್ನು ರಾಜ್ಯ ಪೊಲೀಸರು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ನೇತೃತ್ವದಲ್ಲಿ ಕಾಲಮಿತಿಯೊಳಗೆ ತನಿಖೆಗೆ ಆದೇಶಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ವಿದ್ಯುತ್ ಸ್ಪರ್ಶದಿಂದ ಸಾವಿಗೀಡಾದವರ ನಿವಾಸಕ್ಕೆ ಉಸ್ತುವಾರಿ ಸಚಿವರ ಭೇಟಿ



ಮೈಸೂರು, ಆ.6(ಎಂಕೆ)– ಇತ್ತೀಚೆಗೆ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ ಅಶೋಕಪುರಂನ ರವಿಕುಮಾರ್ ಮತ್ತು ಕಿರಣ್ ಅವರ ಮನೆಗೆ ಭಾನುವಾರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರಲ್ಲದೆ ಸರ್ಕಾರದಿಂದ ಸೂಕ್ತ ಪರಿಹಾರ ಹಾಗೂ ಉದ್ಯೋಗ ದೊರಕಿಸಿಕೊಡುವ ಭರವಸೆ ನೀಡಿದರು.

ಈ ವೇಳೆ ಅವಘಡ ಸಂಭವಿಸಿದ ಬಗ್ಗೆ ಮಾಹಿತಿ ಪಡೆದರಲ್ಲದೆ ಕುಟುಂಬಸ್ಥರಿಂದ ಮನವಿ ಸ್ವೀಕರಿಸಿದರು. ಬಳಿಕ ನಾಳೆ(ಆ.7)ಯೇ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ, ಸರ್ಕಾರದಿಂದ ಮೃತಪಟ್ಟ ಇಬ್ಬರ ಕುಟುಂಬಕ್ಕೆ ಸೂಕ್ತ ಪರಿಹಾರದ ಜೊತೆಗೆ ಕುಟುಂಬಸ್ಥರಲ್ಲಿ ಒಬ್ಬರಿಗೆ ಉದ್ಯೋಗ ಕೊಡಿಸುವುದಾಗಿ ತಿಳಿಸಿದರು.

ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಘಟನೆ ಸಂಬಂಧ ಮಾಹಿತಿ ನೀಡಿದರಲ್ಲದೆ ಸಿಎಂ ಪರಿಹಾರ ನಿಧಿಯಿಂದಲೂ ಹಣಕಾಸಿನ ನೆರವು ದೊರಕಿಸಿಕೊಡುವಂತೆ ಕೋರಿದರು. ಮಾಜಿ ಮೇಯರ್ ಪುರುಷೋತ್ತಮ್, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್ ಉಪಸ್ಥಿತರಿದ್ದರು.

## ನೇಮಕ




ಮೈಸೂರು, ಆ. 6– ಮೈಸೂರಿನ ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಶಾಸಕ ತನ್ವೀರ್ ಸೇಠ್ ಬೆಂಬಲಿಗ ಸೈಯದ್ ಇಕ್ಬಾಲ್ ಅವರನ್ನು ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಈ ಹಿಂದೆ ಈ ಬ್ಲಾಕ್‌ನ ಅಧ್ಯಕ್ಷರಾಗಿದ್ದ ಅಬ್ದುಲ್ ಶಾಹಿದ್ ಖಾದರ್ ಅವರನ್ನು ಪಕ್ಷದಿಂದ ಉಚ್ಚಾಟಿಸಿದ ವೇಳೆ ಸೈಯದ್ ಇಕ್ಬಾಲ್‌ರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಬ್ಲಾಕ್ ಸಮಿತಿ ಪುನರ್‌ರಚನೆ ವೇಳೆ ಸತತ 2ನೇ ಬಾರಿಗೆ ಇಕ್ಬಾಲ್‌ರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಹೆಬ್ಬಾಳ್ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಹೆಸರಾಂತ ಕಂಪನಿಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC/ITI Pass / Fail, ESI & PF ಕ್ಯಾಂಟೀನ್ ಸೌಲಭ್ಯವಿದೆ.
ವಯೋಮಿತಿ : 18 ರಿಂದ 45 ವರ್ಷ
ಮಾಸಿಕ ವೇತನ : 13500 ರಿಂದ 18000
6360740198, 9148833780


ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಷೂಗಳು, ಸಾಕ್ಸ್ ಬ್ಯಾಗ್‌ಗಳು
1 ಜೊತೆ ಷೂಕೊಂಡಲ್ಲಿ 1 ಜೊತೆ ಸಾಕ್ಸ್ ಉಚಿತ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

**HOME APPLIANCES SERVICE**
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೇವ್, LED, LCD, AC Sales & Service
Contact: Srinivas 9379699229

**ಸೈಟ್ಸ್ @ ಮೈಸೂರು**
ಟಿ.ನರಸೀಪುರ ರಿಂಗ್ ರೋಡ್‌ನಿಂದ ಸುಮಾರು 1.5 KMS
NORTH FACING SITES
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

**ಶ್ರೀ ಗೌರಿಶಂಕರ ಟ್ರಾವೆಲ್ಸ್**
28-8-2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾ ಬೈದ್ಯನಾಥ್.
24-9-2023 (13 ದಿನ): ಹರಿದ್ವಾರ್, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ದೆಹಲಿ, ಇತ್ಯಾದಿ.
28–10–2023 (4 ದಿನ): ದೆಹಲಿ, ಮಥುರಾ, ಬೃಂದಾವನ, ಆಗ್ರಾ, ಜೈಪುರ.
ವಿಮಾನ / ಏಸಿ ಬಸ್ / ಊಟ / ರೂಂ.
Mob: 9620002114

**ಶ್ರೀ ಮೂರ್ತಿ ಟೂರಿಸ್ಟ್**
13–8–23 ಭಾನುವಾರ 'ಗೊರವನಹಳ್ಳಿ ಮಹಾಲಕ್ಷ್ಮಿ', ಎಡಿಯೂರು, ಹೆಬ್ಬೂರು, ದೇವರಾಯನದುರ್ಗ.
26–8–23 ರಾತ್ರಿ 9.30ಕ್ಕೆ "ಸಿಗಂಧೂರು", ಜೋಗ್ ಫಾಲ್ಸ್, ಶ್ರೀಧರ ಆಶ್ರಮ, ಸೋಂದಾ ಮಠ, ಸ್ವರ್ಣವಲ್ಲಿ ಮಠ, ಸಹಸ್ರ ಲಿಂಗ, ಶಿರಸಿ ಮಾರಿಕಾಂಭ, ಬನವಾಸಿ. 29–8–23 ಬೆಳಿಗ್ಗೆ 6ಕ್ಕೆ ವಾಪಸ್ ಬರುವುದು. (ತಿಂಡಿ, ಕಾಫಿ, ಊಟ ಸೇರಿದೆ).
Mob: 94807-33069
Tickets At Your Doorstep

**100% TEAK WOOD FACTORY FINISH DOORS @ DEPOT RATES**

10 YEARS WARRANTY
www.ssbuildmart.com
9901291267 9845426862

**Used Laptops & desktops**
EMI available
Pranitha Computers 74068 54998
Saraswathipuram, Mysore

**100% NEEM WOOD PLYWOOD & DOORS @ FACTORY DEPOT RATES**
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267 98454 26862

**ಟಿವಿ ರಿಪೇರಿ**
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಪುರುಷರು ಸಂಬಳ: 15,500 (ESI, PF ಒಳಗೊಂಡು) ಊಟದ ವ್ಯವಸ್ಥೆ ಇರುತ್ತದೆ.
9739688497 9008503554

**DTCP SITES FOR SALE**
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

**ಉಚಿತ ತರಬೇತಿ**
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 + ESI+PF. ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಪೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502,9108100117

**ಬೇಕಾಗಿದ್ದಾರೆ**
ರಾಯಲ್ ವಾರಿಯರ್ ಬೇಕರಿಗೆ ಅನುಭವವುಳ್ಳ ಸೇಲ್ಸ್ ಮ್ಯಾನ್‌ಗಳು ಮತ್ತು ಕ್ಯಾಷಿಯರ್‌ಗಳು, ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ ಉತ್ತಮ ಸಂಬಳದೊಂದಿಗೆ ಊಟ ವಸತಿ ಉಚಿತವಾಗಿ ದೊರಕುತ್ತದೆ. ಶ್ರೀ ರಾಯಲ್ ವಾರಿಯರ್ ಬೇಕರಿ ಅಂಡ್ ಫುಡ್ ನೃಪತುಂಗ ರಸ್ತೆ, 2ನೇ ಹಂತ, ಎಂ.ಬ್ಲಾಕ್, ಬಸ್ ಡಿಪೋ ಹತ್ತಿರ.
8310331609 9019876412

**ITI ಗೆ ಪ್ರವೇಶಾವಕಾಶ**
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.
BENAKA-ITI, College, Near Cauvery Circle, Dr. Rajkumar Road, Raghvendra Nagar, Mysore
9342123467 9141756695


V-GUARD GEYSER BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

**ಸುವರ್ಣ ಯಾತ್ರ**
ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗ ಸೇರಿ 3 ದಿನಗಳು 18–08–2023,
ಪುರಿ ಭುವನೇಶ್ವರ ಶಕ್ತಿಪೀಠ 4 ದಿನಗಳು 18/08/2023
ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 30–08–2023
ನೇಪಾಳ ಪ್ರವಾಸ 9 ದಿನಗಳು 08–09–2023
9008381022 9019462508

**GSS** 25 YEARS
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP • FULLY DEVELOPED • UNDER DEVELOPED • PLAN SANCTIONED
96868-25025

**AFFIDAVIT**
I, Poojadharshini B.N., residing at Door No. 41/A, 2nd Stage, Nandini Layout, Alanahalli, Mysore-570 028, state that in my Aadhar Card my name is mentioned as Pooja Darshini B.N., but in the SSLC Marks Card my name was mentioned as Poojadharshini B.N. Hence, I declare this, in front of Notary, that Poojadharshini B.N. and Pooja Darshini B.N., both the names are belongs to my names only and the same person.
Sd/- Poojadharshini B.N.

**ಉದ್ಯೋಗ ಅವಕಾಶ**
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಒಟಿ 15,200/- to 86,000/-
9740733021, 9535028750

**ಸಂಪು ಮತ್ತು ಟ್ಯಾಂಕ್**
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

**ಬರವಣಿಗೆಯ ಕೆಲಸ**
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409 ಮೈಸೂರು ಅಗ್ರಹಾರ.
9449774835 ಚಾಮರಾಜನಗರ

**ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು**
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಿ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ...

**ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು**
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ತಿಪಟೂರು ಜಾತಿಯ ತೆಂಗಿನ ಸಸಿ 8–14 ತಿಂಗಳಿನ ಸಸಿಗಳು ಮಾರಾಟಕ್ಕಿದೆ.
ಸ್ಥಳ: ದೈತ್ಯನ ಕೆರೆ ಕಾವಲ್, ಆರ್.ಪಿ.ಕಾಲೋನಿ ಬಿಳಿಕೆರೆ ಹೋಬಳಿ
ಸಂಪರ್ಕಿಸಿ: ಪ್ರಕಾಶ್ 8722646417
ಚೆರಿಯನ್ ಕೆ.ಜಾನ್ 9845340990

**ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ**
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

**ಕೊಳ್ಳೇಗಾಲದ ಜ್ಯೋತಿಷ್ಯರು**
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

**JOB'S @ MYSORE**
Age (18-24), 10th PUC, BBM ಯಾದ Earn (8500/- ರಿಂದ 16500/-) PM
Freshers Only * NO FEE*
ಪರಸ್ಥಳದವರಿಗೆ ಮಾತ್ರ ವಸತಿಗಾಗಿ. ಖುದ್ದಾಗಿ ಸಂಪರ್ಕಿಸಿ: Meet Us @ 11AM to 3PM
ಕಾವ್ಯ 9342827788

**HOUSE FOR SALE**
Vijayanagar 3rd Stage, 'B' Block, Mysore
40X60, Ground Floor, 3BHK, 1st Floor, 2BHK, 2 Portion, Teak wood, Italian marbles, stone cladding, luxurious attached bathrooms with Jaguar fittings. Brokers Excuse
9686881429 8453878567

20x30 ಅಳತೆಯ MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ 22 ಲಕ್ಷದ 50 ಸಾವಿರಗಳು ಯಶಸ್ವಿನಿ ಲೇಔಟ್ ಶ್ರೀನಗರದಿಂದ 1.5 ಕಿ.ಮೀ ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ N/F 9 ಲಕ್ಷದ 50 ಸಾವಿರಗಳು ಇಲವಾದ ಹತ್ತಿರ, ಮೈಸೂರು
9742198093

**ಕೆಲಸಕ್ಕೆ ಬೇಕಾಗಿದ್ದಾರೆ**
PRAGATHI TECH Hebbal Industrial Area, Mysore
SSLC / PUC / ITI
9986241412

**ತಕ್ಷಣ ಬೇಕಾಗಿದ್ದಾರೆ**
ಮೈಸೂರಿನ ಪ್ರಸಿದ್ಧ ಕಂಪನಿ ಆಫೀಸ್ ಮತ್ತು ಶೋರೂಂಗಳಿಗೆ 7th, 10th, PUC, ITI, Diploma, Any Degree Pass /Fail) ಆದ ಯುವಕ ಯುವತಿಯರು Telephone Athender, Receptionist, Billing, Cashier, Backend Department, Quality, Production Helper Labelling Maintenance ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 15,200 ರಿಂದ 43,200/- (ESI+PF+OT) ಸೇರಿ. ಷರತ್ತು ಅನ್ವಯ
9036548905,6364103418

**ಮೈಸೂರು ಮ್ಯಾರೇಜ್ ಬ್ಯೂರೋ**
ಎಲ್ಲಾ ಜಾತಿಯ ವಧು ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
ಡಾ. ಗುರೂಜಿ
9448229184 7899625268
Computer ಜ್ಞಾನವುಳ್ಳ Lady Receptionist ಬೇಕಾಗಿದ್ದಾರೆ. ಆಕರ್ಷಕ ಸಂಬಳ

ಸೈಟುಗಳು ಮತ್ತು ಜಮೀನಿಗೆ ಫೆನ್ಸಿಂಗ್ ಕಲ್ಲುಗಳು ಹಾಗೂ ಕಾಂಪೌಂಡ್ ಹಾಕಿ ಕೊಡಲಾಗುತ್ತದೆ. ಮತ್ತು ಕೆಮ್ಮಣ್ಣು ಗ್ರಾವೆಲ್ ಮಣ್ಣು ದೊರೆಯುತ್ತದೆ
7259407518 8310220458

**WANTED**
Accountant - 2 Post
Knowledge Of TALLY GST
Work Place - Hinkal & Industrial Suburb Mysore
Whatsapp Your Resume
9480155900

**100% Job**
ಮೈಸೂರಿನ ಪ್ರಸಿದ್ಧ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 15,000 ರಿಂದ 39,000/- (ESI+PF+OT) ಸೇರಿ. ಷರತ್ತು ಅನ್ವಯ
9008603466,9035143190

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್‌ಗಳು 10 ಮಂದಿ
ಸ್ಥಳ: 1) ಮೇಟಗಳ್ಳಿ 2) ಹಿನಕಲ್ 3) ಮಹದೇವಪುರ (ಶೂಟಿಂಗ್)
9686422400 9242406261

**SITE FOR SALE**
40X60 Vijayanagar 4th Stage, 2nd phase, Mysore, Brokers Excuse
Interested Parties Call @ 9448042467

**ಬೇಕಾಗಿದ್ದಾರೆ**
ಮೈಸೂರಿನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಸಿಬ್ಬಂದಿಗಳು ಬೇಕಾಗಿದ್ದಾರೆ. ESI & PF ಸೌಲಭ್ಯ, ವಯೋಮಿತಿ 25-45 ವರ್ಷ
9483853975 0821-2334785

**ಬೇಕಾಗಿದ್ದಾರೆ**
ಚಾಮರಾಜನಗರ ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು. 1) ಜಿಲ್ಲಾ ಎಂ.ಐ.ಎಸ್ ಸಂಯೋಜಕರು ವಿದ್ಯಾರ್ಹತೆ BE or BTech, Computer Science. 2) ತಾಂತ್ರಿಕ ಸಹಾಯಕರು : BSc/MSc (ಕೃಷಿ) 2 ವರ್ಷ ಅನುಭವವಿರಬೇಕು. 3) ತಾಂತ್ರಿಕ ಸಹಾಯಕರು : BSc/MSc (ರೇಷ್ಮೆ) 2 ವರ್ಷ ಅನುಭವವಿರಬೇಕು. 4. ತಾಂತ್ರಿಕ ಸಹಾಯಕರು : BE/B Tech (Civil) 2 ವರ್ಷ ಅನುಭವವಿರಬೇಕು. ಮೇಲ್ಕಂಡ ಹುದ್ದೆಗಳಿಗೆ ನಿಮ್ಮ ಎಲ್ಲಾ ದಾಖಲಾತಿಗಳನ್ನು ಈ–ಮೇಲ್ ಅಡ್ರೆಸ್‌ಗೆ ಕಳುಹಿಸಿ sriudyogrecruitment@gmail.com ಗೆ 15/08/2023ರ ಒಳಗೆ ಕಳುಹಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ
8147091660/8904027925

**FOR SALE**
Buy & Sell site , House, land
1) 20x30, Duplex House Ramakrishna Nagara
2) 14x100 In Ramavilas Road Near
3)30x40 Duplex Ground first House Srirampura
4)12x36 G+2 House Kuvempu Nagar
5)30x40, 16 lakhs H D Kote Road
Prakruthi Properties
9538690359 9035990359

**ಉದ್ಯೋಗವಕಾಶ**
ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರು, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಹಾಗೂ ಹೌಸ್ ಕೀಪಿಂಗ್ ಕೆಲಸಕ್ಕೆ ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ, ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ 7/10/PUC, ANM, GNM Pass/ Fail ತಿಂಗಳ ಸಂಬಳ: 9000 ರಿಂದ 18000
9606514441,08214242351 7349278501

**ಬೇಕಾಗಿದ್ದಾರೆ**
ಮೈಸೂರಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ. ಪಿ.ಎಫ್. & ಇ.ಎಸ್.ಐ ಲಭ್ಯವಿದೆ. ಸಂಬಳ: 12,000/–
7899754149

**ತಕ್ಷಣ ಬೇಕಾಗಿದ್ದಾರೆ**
ಬೋಗಾದಿ ಮತ್ತು ವಿಜಯನಗರ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು, ಸಂಬಳ: 14000/-
9620777819 9620667819

**ಬೇಕಾಗಿದ್ದಾರೆ**
ಶಾಖಾ ವ್ಯವಸ್ಥಾಪಕರು Branch Manager (2 ವರ್ಷದ ಅನುಭವ ಉಳ್ಳವರು)
ಸ್ಥಳ: ಶ್ರೀಕಂಠೇಶ್ವರ ಎಲೆಕ್ಟ್ರಾನಿಕ್ಸ್ ಪ್ರೈ.ಲಿ. ಮಂಡ್ಯ, ಕೆ.ಆರ್.ಪೇಟೆ, ಮಳವಳ್ಳಿ, ರಾಮನಗರ, ಚನ್ನಪಟ್ಟಣ
9164130030,8549859501

**HOUSE FOR LEASE /RENT**
Newly Built 2BHK Independent House Semi Furnished with Solar @ Lalithadri Nagar Ring Road, Near Indian Oil Petrol Bunk (Behind)
9902729729

**ನಿವೇಶನ ಮಾರಾಟಕ್ಕಿದೆ**
40x45 ಉತ್ತರ ದಿಕ್ಕು ಟಿ.ನರಸೀಪುರ ರೂ.3000/ಅಡಿ
7899327316

**SUMP & TANK SOLAR CLEANING**
8880558064

**ಸೈಟು ಮಾರಾಟಕ್ಕಿದೆ**
40x60 ಅಳತೆಯುಳ್ಳ ನಿವೇಶನ ಹೆಚ್.ಡಿ.ಕೋಟೆಯ ಮುಖ್ಯ ರಸ್ತೆ ಕೆಎಸ್‌ಆರ್‌ಟಿಸಿ ಲೇಔಟ್ ಪಕ್ಕ ದಾರಿಪುರ ಗ್ರಾಮ. ಸಂಪರ್ಕಿಸಿ
9449539398 8711014374

**ಬೇಕಾಗಿದ್ದಾರೆ**
ಮೈಸೂರಿನಲ್ಲಿ ಕೆಲಸ ಮಾಡಲು
1) ಸೆಕ್ಯೂರಿಟಿ ಗಾರ್ಡ್–01
2) ಡ್ರೈವರ್–01
9880102700

**ಬೇಕಾಗಿದ್ದಾರೆ**
MAX SOLAR ಶೋರೂಂನಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ : Any Degree
ವಯೋಮಿತಿ 21 ರಿಂದ 26
9535608456

**ಮನೆ ಬಾಡಿಗೆಗೆ ಇದೆ**
2BHK ಮನೆ 1ನೇ ಮಹಡಿಯಲ್ಲಿ (Big Independent Portico) ಮನೆ ಶಾರದಾದೇವಿ ನಗರದಲ್ಲಿ (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9980976912 9483577892

**WANTED**
For an Industry at Mysore:
1. Tech. Support Engineer: B.E/Diploma - E&F, E&C, IS, CS, Mechatronics, Mechanical with One year experience
2. CAD Engineer : BE, E&F, E&C with Knowledge of CAD Drawing
Contact Between 10.00 am to 5.00 pm
9901178588

**ಬೇಕಾಗಿದ್ದಾರೆ**
ಟೆಲಿಕಾಲರ್ಸ್ – 10
ಟೀಮ್ ಲೀಡರ್ಸ್ – 05
ಫೀಲ್ಡ್ ಎಕ್ಸಿಕ್ಯೂಟೀವ್ – 10
ಮೈಸೂರಿನ ಕಲೆಕ್ಷನ್ ಕಛೇರಿಯಲ್ಲಿ ಕೆಲಸ ಮಾಡಲು ಈ ಮೇಲ್ಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ
8867574400

**ತಕ್ಷಣ ಬೇಕಾಗಿದ್ದಾರೆ**
ನಾರಾಯಣ ಹೃದಯಾಲಯ ಆಸ್ಪತ್ರೆಯ ಆವರಣದ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC/PUC ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಅಡುಗೆ ಭಟ್ಟರು, ದೋಸೆಭಟ್ಟರು, ಕಾಫಿ ಮತ್ತು ಟೀ ತಯಾರಕರು ಅಡುಗೆ ಸಹಾಯಕರು ಬೇಕಾಗಿದ್ದಾರೆ. ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡಿರುವವರಿಗು ಅವಕಾಶವಿದೆ. Supervisor, Assistant Manager ಬೇಕಾಗಿದ್ದಾರೆ. ಪ್ರತಿ ಶನಿವಾರ INTERVIEW (10 TO 1 PM) ಇರುತ್ತದೆ. ಪಿಎಫ್ & ಇಎಸ್ಐ ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ.
ಸಂಪರ್ಕಿಸಬೇಕಾದ ವಿಳಾಸ:
ನಾರಾಯಣ ಹೃದಯಾಲಯ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್ ಸಿಎಹೆಚ್/1,3ನೇ ಫೇಸ್, ದೇವನೂರು, 2ನೇ ಹಂತ, ಆರ್.ಎಸ್.ನಾಯ್ಡು ನಗರ, ಮೈಸೂರು.
ಮೊ: 9740491192, 8884923636

**R.V.CONSTRUCTIONS**
Sanction Plans, Sanction Plans Upload (E-Submission) Construction Plans (As per Vastu), Estimations.
REASONABLE RATES.
D.Subbaiah Road, Mysuru-570004
0821-2002063 7975110915

**ಬೇಕಾಗಿದ್ದಾರೆ**
ಜೆ.ಎಸ್.ಎಸ್. ಆಸ್ಪತ್ರೆಯ ಕ್ಯಾಂಟೀನ್ ಮತ್ತು ಡಯಟರಿಯಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC/PUC ಪಾಸ್ ಅಥವಾ ಫೇಲ್ ಆದ ಹುಡುಗರು ಬೇಕಾಗಿದ್ದಾರೆ. ಅಡುಗೆ ಭಟ್ಟರು, ದೋಸೆಭಟ್ಟರು, ಕಾಫಿ ಮತ್ತು ಟೀ ತಯಾರಕರು ಅಡುಗೆ ಸಹಾಯಕರು ಬೇಕಾಗಿದ್ದಾರೆ. ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡಿರುವವರಿಗೂ ಅವಕಾಶವಿದೆ. ಪ್ರತಿ ಶನಿವಾರ INTERVIEW (10 TO 1 PM) ಇರುತ್ತದೆ. ಇಪಿಎಫ್ & ಇಎಸ್ಐ ಹಾಗೂ ಊಟ ತಿಂಡಿ ಸೌಲಭ್ಯವಿರುತ್ತದೆ. ವಯಸ್ಸು 18 ರಿಂದ 40ರ ಒಳಗಿರಬೇಕು.
ಸಂಪರ್ಕಿಸಬೇಕಾದ ವಿಳಾಸ:
MAHESHA.G (MANAGER) (S.A.S. GROUPS) J.S.S Hospital Canteen M.G.Road, Agrahara, Mysore.
Ph. 0821-2335073, 9740491192

**ಮೈಸೂರು ಮಿತ್ರ 44 — ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಪ್ರತಿಯೊಬ್ಬರೂ ಉತ್ತಮ ಆಲೋಚನೆ, ಸಂಸ್ಕಾರ ಬೆಳೆಸಿಕೊಳ್ಳಿ

## ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್




ಚಿನಕುರಳಿ, ಆ.6– ದುರ್ದಂಡೇಶ್ವರ, ಚಂದ್ರವನ ಮಠಗಳು ಶಿಕ್ಷಣದ ಜೊತೆಗೆ ಪರಂಪರೆ, ಸಂಸ್ಕೃತಿ, ಸಂಸ್ಕಾರ, ನೈತಿಕ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡುತ್ತಿವೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಹೇಳಿದರು.

ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ ವತಿಯಿಂದ ಲಿಂಗೈಕ್ಯ ಶ್ರೀಮರಿ ದೇವರು ಶ್ರೀಗಳ 15ನೇ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ತ್ರಿನೇತ್ರ ಮಹಾಂತ ಸ್ವಾಮೀಜಿಗಳು ಜನರ ಆರೋಗ್ಯದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಮಕ್ಕಳಿಗೆ ಶಿಕ್ಷಣ ನೀಡುವ ಜೊತೆಗೆ ಆರೋಗ್ಯಕರ ಚಿಂತನೆ ಮಾಡಿ ಶಿಬಿರಗಳನ್ನು ನಡೆಸಿ ಗ್ರಾಮೀಣ ಜನರ ಆರೋಗ್ಯ ರಕ್ಷಣೆ ಕೆಲಸ ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು. ಉತ್ತಮ ಆರೋಗ್ಯ ನಿರ್ಮಾಣ ಹಾಗೂ ನಿರ್ನಾಮ ಎರಡೂ ನಮ್ಮ ಕೈಯಲ್ಲೇ ಇದೆ. ನಮ್ಮ ಆರೋಗ್ಯವನ್ನು ನಾವೇ ಕಾಪಾಡಿಕೊಳ್ಳಬೇಕು. ಆರೋಗ್ಯ ಸೇವೆ ನಮ್ಮ ಅಂಗೈನಲ್ಲಿ ಸಿಗುವಂತಾಗಬೇಕು. ಇಂತಹ ಶಿಬಿರಗಳಿಂದ ಸಿಗುವ ಆರೋಗ್ಯ ಸೌಲಭ್ಯಗಳು ಸಮಾಜದ ಕಟ್ಟಕಡೆಯ ಜನರಿಗೆ ದೊರೆಯುವಂತಾಗಬೇಕು ಎಂದರು.

ಮನುಷ್ಯನಿಗೆ ದೇಹದ ಶುಚಿತ್ವಕ್ಕಿಂತ ಮನಸ್ಸಿನ ಶುಚಿತ್ವ ಬೇಕಾಗಿದೆ. ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯ ದೊರೆಯುತ್ತಿಲ್ಲ. ಹೀಗಾಗಿ ಮನುಷ್ಯ ಆಹಾರ ಪದ್ಧತಿ, ಜೀವನ ಶೈಲಿ ಬದಲಾಯಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ದೇಹಕ್ಕೆ ಬೇಕಾದ ಆಹಾರ ಸ್ವೀಕರಿಸಿ, ನೈತಿಕ ನೆಲೆಗಟ್ಟಿನಲ್ಲಿ ಬದುಕಬೇಕಾಗಿದೆ. ಎಲ್ಲವನ್ನು ದುಡ್ಡಿನಿಂದ ಅಳೆಯಲು ಸಾಧ್ಯವಿಲ್ಲ. ಮನುಷ್ಯ ಹಣ ಕೊಟ್ಟು ಕೊಳ್ಳುವುದಕ್ಕಿಂತ ಹಣ ಕೊಟ್ಟು ಕೊಳ್ಳಲಾಗದ ವಸ್ತುಗಳೇ ನಮಗೆ ಹೆಚ್ಚು ಸಂತೋಷ ಕೊಡುತ್ತವೆ. ಪ್ರತಿಯೊಬ್ಬರೂ ಉತ್ತಮ ಆಲೋಚನೆ, ಚಿಂತನೆ, ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಮಾತನಾಡಿ, ತ್ರಿನೇತ್ರ ಮಹಾಂತ ಸ್ವಾಮೀಜಿಗಳು ಜನರಿಗೆ ಧಾರ್ಮಿಕ ಸಂಸ್ಕೃತಿ ಜೊತೆಗೆ ಆರೋಗ್ಯ, ಸಂಸ್ಕಾರದ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಶ್ರೀಗಳು ನೇರ ನುಡಿ ಮನೋಭಾವ ಬೆಳೆಸಿಕೊಂಡಿದ್ದಾರೆ ಎಂದರು.

ಡಾ. ಶ್ರೀತ್ರಿನೇತ್ರಮಹಾಂತ ಸ್ವಾಮೀಜಿ ಮಾತನಾಡಿದರು. ಶಿಬಿರದಲ್ಲಿ ರಕ್ತದೊತ್ತಡ, ಕಣ್ಣು, ಕಿವಿ, ಹಲ್ಲು, ಹೃದಯ ಸೇರಿದಂತೆ ಹಲವು ರೋಗಗಳಿಗೆ ತಪಾಸಣೆ ನಡೆಸಲಾಯಿತು. ಶಿಬಿರದಲ್ಲಿ ಬೇಬಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು ಭಾಗವಹಿಸಿ ಚಿಕಿತ್ಸೆ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆ ನಿವೃತ್ತ ಡಿಎಒ ಡಾ.ಎನ್.ನಾಗೇಶ್, ಡಾ.ಲಕ್ಷ್ಮೀನಾರಾಯಣಶೆಣೈ, ಡಾ.ಸುನೀತ, ಡಾ.ಪ್ರಶಾಂತ್ ಗೋಕುಲೆ, ರೋಟರಿ ಚಂದ್ರವನ ಅಧ್ಯಕ್ಷ ಟಿ.ಶಿವಕುಮಾರ್, ಕಾರ್ಯದರ್ಶಿ ಮಹದೇವಪ್ಪ, ಡಾ. ಆಂಜನೇಯಮೂರ್ತಿ, ಡಾ.ಗುರುಬಸವ ರಾಜು, ಡಾ.ಸುನೀತ, ಪಿಡಿಓ ಕುಮಾರ್, ಡಾ.ಚರಣ್, ಡಾ.ಯೋಗಣ್ಣ, ಮುಖ್ಯ ಶಿಕ್ಷಕ ಜಗದೀಶ್ ಸೇರಿದಂತೆ ಹಲವರಿದ್ದರು.

## ಸಾಲಬಾಧೆ: ವಿಷ ಸೇವಿಸಿದ್ದ ರೈತ ಸಾವು



ಮಂಡ್ಯ, ಆ.6– ಕೃಷಿ ಉದ್ದೇಶಕ್ಕೆ ಸಾಲ ಮಾಡಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ರೈತರೊಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಟ ನಡೆಸಿ ಕೊನೆಗೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ತಾಲೂಕಿನ ಇಂಡುವಾಳು ಗ್ರಾಮದ ರೈತ ಮಹಾಲಿಂಗಯ್ಯ(65) ಸಾಲಬಾಧೆಗೆ ಬಲಿಯಾದವರು. ಗ್ರಾಮದಲ್ಲಿದ್ದ ತಮ್ಮ ಒಂದೂವರೆ ಎಕರೆ ಜಮೀನಿನಲ್ಲಿ ಭತ್ತ ಬೆಳೆದಿದ್ದರು. ಕೃಷಿಗಾಗಿ ಬ್ಯಾಂಕ್‌ನಲ್ಲಿ ಒಡವೆ ಸಾಲ, ಸೊಸೈಟಿ ಸಾಲ ಹಾಗೂ ಕೈಸಾಲ ಸೇರಿದಂತೆ ಸುಮಾರು ಆರೇಳು ಲಕ್ಷ ರೂ. ಸಾಲ ಮಾಡಿದ್ದರು ಎನ್ನಲಾಗಿದೆ.

ಆದರೆ ಮಾಡಿದ ಸಾಲ ತೀರಿಸಲಾಗದೇ ತಮ್ಮ ಜಮೀನಿನ ಬಳಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ಕೂಡಲೇ ಇವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಸುಮಾರು 15 ದಿನಗಳಿಂದ ಸಾವು ಬದುಕಿನ ನಡುವೆ ಹೋರಾಟ ನಡೆಸಿ ಶನಿವಾರ ರಾತ್ರಿ ಕೊನೆಯುಸಿರೆಳೆದಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿಯಿದ್ದಾರೆ. ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕ್ಷುಲ್ಲಕ ಕಾರಣ: ಯುವಕನ ಕೊಲೆ

ಮಂಡ್ಯ, ಆ.6– ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ನಡೆದ ಜಗಳ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ತಾಲೂಕಿನ ಕೀಲಾರ ಗ್ರಾಮದಲ್ಲಿ ಸಂಭವಿಸಿದೆ.

ಕೀಲಾರ ಗ್ರಾಮದ ಜಯಂತ್ (23) ಕೊಲೆಯಾದ ಯುವಕನಾಗಿದ್ದು, ಆತನ ಸ್ನೇಹಿತ ಕೀರ್ತಿರಾಜ್ ಕೊಲೆ ಆರೋಪಿ. ಚಿಲ್ಲರೆ ಅಂಗಡಿ ನಡೆಸುತ್ತಿದ್ದ ಕೀರ್ತಿರಾಜ್ ಹಾಗೂ ಜಯಂತ್ ನಡುವೆ ಕ್ಷುಲ್ಲಕ ಕಾರಣಕ್ಕೆ ಜಗಳ ಆರಂಭವಾಗಿದ್ದು, ವಿಕೋಪಕ್ಕೆ ತಿರುಗಿ ಕೀರ್ತಿರಾಜ್ ಜಯಂತ್‌ನನ್ನು ಚಾಕುವಿನಿಂದ ಇರಿದಿದ್ದಾನೆ. ಈ ವೇಳೆ ತೀವ್ರ ಗಾಯಗೊಂಡ ಜಯಂತ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಕೆರೆಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

# ಆಲಂಬಾಡಿಕಾವಲು ಗ್ರಾಪಂಗೆ ಬೀರೇಶ್‌ಬಾಬು ಅಧ್ಯಕ್ಷ



ಕೆ.ಆರ್.ಪೇಟೆ, ಆ.6– ತಾಲೂಕಿನ ಆಲಂಬಾಡಿಕಾವಲು ಗ್ರಾಪಂ ಅಧ್ಯಕ್ಷರಾಗಿ ಎಸ್.ಬೀರೇಶ್‌ಬಾಬು ಹಾಗೂ ಉಪಾಧ್ಯಕ್ಷೆಯಾಗಿ ಭಾಗ್ಯಮ್ಮ ಸ್ವಾಮಿಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂನ 2ನೇ ಅವಧಿಯ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಬಿಸಿಎಂ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಎಸ್.ಬೀರೇಶ್ ಬಾಬು, ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಸದಸ್ಯೆ ಭಾಗ್ಯಮ್ಮ ಸ್ವಾಮಿಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ಪಶುವೈದ್ಯ ಇಲಾಖೆ ಸಹಾಯಕ ನಿರ್ದೇಶಕ ಡಾ.ಎ.ಎಸ್. ದೇವರಾಜು ಘೋಷಿಸಿದರು. ಸಹ ಚುನಾವಣಾಧಿಕಾರಿಯಾಗಿ ಪಿಡಿಓ ಶಿವಕುಮಾರ್, ಕಾರ್ಯದರ್ಶಿ ಇಮ್ರಾನ್ ಷರೀಫ್ ಕಾರ್ಯ ನಿರ್ವಹಿಸಿದರು. ನೂತನ ಅಧ್ಯಕ್ಷ ಎಸ್. ಬೀರೇಶ್‌ಬಾಬು ಮಾತನಾಡಿ, ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ. ಸರ್ಕಾರದ ಅನುದಾನ ಬಳಸಿಕೊಂಡು ಕೆರೆಕಟ್ಟೆ ಅಭಿವೃದ್ಧಿ, ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಜಾನುವಾರು ಕುಡಿಯುವ ನೀರಿನ ತೊಟ್ಟಿ, ಜಾನುವಾರ ಕೊಟ್ಟಿಗೆ ನಿರ್ಮಾಣ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುತ್ತೇನೆ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ತಾಪಂ ಮಾಜಿ ಅಧ್ಯಕ್ಷ ಪಿ.ನಂಜುಂಡೇಗೌಡ, ತಾಪಂ ಮಾಜಿ ಸದಸ್ಯ ಸಂಜೀವಪ್ಪ, ಮುಖಂಡರಾದ ಜಿ.ಎ.ರಾಯಪ್ಪ, ಜವರೇಗೌಡ, ಸಿದ್ಧಿಕ್, ನಂದಕುಮಾರ್, ರಘುನಾಥ್, ಚಂದ್ರಶೇಖರ್, ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮೋಹನ್ ಕುಮಾರ್, ಶಿವರಾಜು, ಅಪ್ಪಾಜಿ, ಗೋವಿಂದೇಗೌಡ, ಕುಮಾರಸ್ವಾಮಿ, ಸದಸ್ಯರಾದ ಎ.ಟಿ.ಕರಿಶೆಟ್ಟಿ, ಎ.ಎಸ್.ರವಿ, ಚಂದ್ರಕಲಾ, ಸುಮ, ಅತೀಕ್ ಅಹಮದ್, ಮುಜಾಯಿದ್ ಖಾನ್, ರೂಪ, ಇಶ್ರತ್ ಉನ್ನಿಸಾ, ವೆಂಕಟೇಶ್, ನಾಗೇಶ್, ಸರೋಜಮ್ಮ, ವೇದಾಂಬ, ಎ. ರಾಜು, ಸಾಕಮ್ಮ, ನಾಗಮ್ಮ ಇನ್ನಿತರರಿದ್ದರು.

## ಇಂದು ಇಂದ್ರಧನುಷ್ ಅಭಿಯಾನ

ಮಂಡ್ಯ, ಆ.6– ಜಿಲ್ಲೆಯಲ್ಲಿ ಆ.7ರಿಂದ 12 ರವರೆಗೆ ಮೊದಲ ಸುತ್ತಿನ ಮಿಷನ್ ಇಂದ್ರಧನುಷ್ ಅಭಿಯಾನ 5.0 ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಅಂಗವಾಗಿ ಆ.7ರ ಬೆಳಗ್ಗೆ 10 ಗಂಟೆಗೆ ಹೊಸಹಳ್ಳಿ ರಾಮಮಂದಿರದಲ್ಲಿ ಪರಿಣಾಮಕಾರಿ ಮಿಷನ್ ಇಂದ್ರಧನುಷ್ 5.0 ಅಭಿಯಾನ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

## ಕಾರು, ಬೈಕ್ ನಡುವೆ ಡಿಕ್ಕಿ: ಇಬ್ಬರಿಗೆ ಗಾಯ



ಮಳವಳ್ಳಿ, ಆ.6– ಕಾರು, ಬೈಕ್ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಇಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ಹೊಸಹಳ್ಳಿ ಕ್ರಾಸ್ ಬಳಿ ಭಾನುವಾರ ಮಧ್ಯಾಹ್ನ ನಡೆದಿದೆ.

ಗುತ್ತಲು ನಿವಾಸಿ ಚಂದನ್ (28), ಗಾಣಿಗಪುರ ಗ್ರಾಮದ ನಿವಾಸಿ ದರ್ಶನ್(28) ಗಾಯಗೊಂಡವರು. ಬೈಕ್‌ನಲ್ಲಿ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದ ವೇಳೆ ಎದುರಿನಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

ಗಾಯಾಳುಗಳನ್ನು ತಕ್ಷಣ 108 ಆಂಬುಲೆನ್ಸ್ ಮೂಲಕ ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಬೆಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಂಡ್ಯದಲ್ಲಿ 400 ಕೆವಿ ಪವರ್ ಸ್ಟೇಷನ್ ಸ್ಥಾಪನೆ



ಮಂಡ್ಯ, ಆ.6– ಮಂಡ್ಯ ಜನತೆಗೆ ವಿದ್ಯುತ್ ಸಮಸ್ಯೆಯಾಗಬಾರದೆಂಬ ನಿಟ್ಟಿನಲ್ಲಿ 400 ಕೆವಿ ಪವರ್ ಸ್ಟೇಷನ್ ಸ್ಥಾಪಿಸಲಾಗುತ್ತಿದ್ದು, ಇದು ಶೀಘ್ರ ಲೋಕಾರ್ಪಣೆಗೊಂಡರೆ ಮಂಡ್ಯದಲ್ಲಿ ಕನಿಷ್ಠ 100 ವರ್ಷ ವಿದ್ಯುತ್ ಸಮಸ್ಯೆ ಇರುವುದಿಲ್ಲ ಎಂದು ಶಾಸಕ ಗಣಿಗ ರವಿಕುಮಾರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಶಾಸಕನಾಗಿ 75 ದಿನ ಕಳೆದಿವೆ. ಇಷ್ಟು ಸಣ್ಣ ಅವಧಿಯಲ್ಲಿ 100 ವರ್ಷಕ್ಕೆ ವಿದ್ಯುತ್ ಸಮಸ್ಯೆಯಾಗಬಾರದೆಂಬ ದೊಡ್ಡ ಯೋಜನೆಯನ್ನು ಮಂಡ್ಯಕ್ಕೆ ತರಲು ಸಿದ್ಧತೆ ಮಾಡಿಕೊಂಡಿದ್ದು, ಇದರ ಜೊತೆಗೆ 120 ಕೆವಿ ಪವರ್ ಸ್ಟೇಷನ್ ಅನ್ನು ಸಹ ಮಂಡ್ಯ ತಾಲೂಕಿನ ಬೇಬಿ ಅಥವಾ ಹುಲಿವಾನ ಗ್ರಾಮಗಳಲ್ಲಿ ಸ್ಥಾಪಿಸುವ ಚಿಂತನೆ ಇದೆ. ಇದಕ್ಕಾಗಿ ತಹಸೀಲ್ದಾರ್ ಜೊತೆಗೆ ಜಾಗ ನೋಡಿ ಬಂದಿದ್ದೇನೆ ಎಂದು ತಿಳಿಸಿದರು.

ಮೈಷುಗರ್ ಪುನರಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ 50 ಕೋಟಿ ಹಣ ಬಿಡುಗಡೆ ಮಾಡಿದ್ದಾರೆ ಎಂದ ಅವರು, ಮುಂದಿನ 3 ತಿಂಗಳಲ್ಲಿ ಮಂಡ್ಯ ನಗರದ ಚಿತ್ರಣ ಬದಲಿಸಬೇಕೆಂಬ ಹಂಬಲ ಹೊಂದಿದ್ದು, ಇದಕ್ಕೆ ಎಲ್ಲರೂ ಪಕ್ಷಾತೀತವಾಗಿ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಹೊಳಲು ಹಾಗೂ ಹೊಸಹಳ್ಳಿ ವೃತ್ತವನ್ನು ಉತ್ತಮವಾಗಿ ಅಭಿವೃದ್ಧಿಪಡಿಸಲು ಸಿದ್ಧತೆ ಮಾಡಿಕೊಂಡಿದ್ದು, ಬನ್ನೂರು ರಸ್ತೆ ಗೌರಿಶಂಕರ ಕಲ್ಯಾಣ ಮಂಟಪದಿಂದ ಕನ್ನಿಕಾ ಪರಮೇಶ್ವರಿ ದೇಗುಲದವರೆಗೆ ತಾತ್ಕಾಲಿಕವಾಗಿ ರಸ್ತೆ ಗುಂಡಿ ಮುಚ್ಚಲಾಗಿದ್ದು, ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ಈ ರಸ್ತೆಯ ಅಭಿವೃದ್ಧಿ ಯೋಜನೆ ರೂಪಿಸಲಾಗಿದೆ. ಹೈಟೆಕ್ ಫುಟ್‌ಪಾತ್, ಸೈಕಲ್ ಸ್ಟ್ಯಾಂಡ್ ಅನ್ನು ಸಹ ತರಲು ಸಿದ್ಧತೆ ನಡೆಸಲಾಗಿದೆ ಎಂದು ವಿವರಿಸಿದರು.

ನಗರದ ಮಹಾವೀರ ವೃತ್ತದಲ್ಲಿ ಅಂಡರ್ ಪಾಸ್ ಕಾಮಗಾರಿ ಬರದಿಂದ ಸಾಗಿದೆ. ನಗರದ ವಿವಿಧೆಡೆ ರಿಂಗ್ ರಸ್ತೆ ಸ್ಥಾಪನೆಗೂ ಚಿಂತಿಸಲಾಗಿದೆ. ದೊಡ್ಡಬಳ್ಳಿ ರೀತಿಯಲ್ಲಿರುವ ಮಂಡ್ಯ ನಗರವನ್ನು ಸುಸಜ್ಜಿತ ನಗರವನ್ನಾಗಿಸುವುದೇ ನಮ್ಮ ಗುರಿ. 350 ಕೋಟಿ ವೆಚ್ಚದಲ್ಲಿ ಹೇಮಾವತಿ ನಾಲೆ ಆಧುನೀಕರಣ ಕಾಮಗಾರಿ ನಡೆಯುತ್ತಿದ್ದು, ನಗರದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆಗೆ 5 ಕೋಟಿ ಹಣ ಮಂಜೂರಾಗಿದೆ ಎಂದರು.

ಗಾಂಧಿನಗರದ ನೀರು ಸರಬರಾಜಿಗೆ ಮೀಸಲಾಗಿದ್ದ 7 ಎಕರೆ ಜಾಗವನ್ನು ಮಂಡ್ಯ ನಗರಸಭೆಗೆ ಹಸ್ತಾಂತರಿಸಿದ್ದು, ಅಲ್ಲಿ ಯಾವ ಅಭಿವೃದ್ಧಿ ಯೋಜನೆ ಮಾಡಬೇಕೆಂಬುದನ್ನು ಶೀಘ್ರ ನಿಗದಿಗೊಳಿಸಲಾಗುವುದು ಎಂದರು.

ನಗರದ ಸರ್‌ಎಂವಿ ಕ್ರೀಡಾಂಗಣದ ಅಭಿವೃದ್ಧಿಗೆ 10 ಕೋಟಿ ಹಣ ಬಿಡುಗಡೆಯಾಗಿತ್ತು. ಆದರೆ ಆ ಹಣದಲ್ಲಿ ಸಂಪೂರ್ಣ ಕಳಪೆ ಕಾಮಗಾರಿ ನಡೆದು ಹಣವು ದುರ್ಬಳಕೆಯಾಗಿದ್ದು, ಈ ಬಗ್ಗೆ ಸಮಗ್ರ ತನಿಖೆ ಮಾಡಿಸಲಾಗುವುದು. ಮಂಡ್ಯ ನಗರದ ವಿವಿಧ ರಸ್ತೆಗಳ ಅಭಿವೃದ್ಧಿಗೆ 25 ಕೋಟಿ ಹಣ ಬಿಡುಗಡೆ ಮಾಡಲು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಒಪ್ಪಿದ್ದು, ಶೀಘ್ರ ಹಣ ಬಿಡುಗಡೆಯಾಗಲಿದೆ ಎಂದರು.

ಮಂಡ್ಯದಲ್ಲಿ ನಿರಾಶ್ರಿತರಿಗೆ ಹಕ್ಕುಪತ್ರ ವಿತರಣೆ ಕಾರ್ಯ ಶೇ.90ರಷ್ಟು ಮುಗಿದಿದ್ದು, ಇನ್ನು ಕೇವಲ 10ರಷ್ಟು ಮಾತ್ರ ಬಾಕಿ ಇದೆ. ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆಯುವ ಕೆಡಿಪಿ ಸಭೆಯಲ್ಲಿ ಉಳಿದ ಹತ್ತರಷ್ಟು ಶೀಘ್ರ ಮುಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ಶೀಘ್ರವೇ ಸಿಎಂ ಸಿದ್ದರಾಮಯ್ಯ ಅವರನ್ನು ಮಂಡ್ಯ ನಗರಕ್ಕೆ ಕರೆಸಿ, ಹಕ್ಕುಪತ್ರ ವಿತರಣೆ, ಮೈಷುಗರ್ ಪುನರಾರಂಭ ಸೇರಿದಂತೆ ವಿವಿಧ ಯೋಜನೆಗಳಿಗೆ ಚಾಲನೆ ಕೊಡಿಸಲಾಗುವುದು ಎಂದರು.

# ವಿವಿಧ ಕಲೆಗಳ ಮೂಲಕ ಜನರನ್ನು ಒಗ್ಗೂಡಿಸಬೇಕು

## ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ




ಮೈಸೂರು, ಆ.6(ಎಂಕೆ)– ಭಾರತವು ವೈವಿಧ್ಯತೆಯಲ್ಲಿ ಏಕತೆ ಹೊಂದಿರುವ ರಾಷ್ಟ್ರ. ಬಹುಮುಖ ವಿಚಾರಧಾರೆಯನ್ನೂ ಹೊಂದಿದ್ದು, ಕಲೆ–ಸಾಹಿತ್ಯ, ಸಂಗೀತ, ನೃತ್ಯ–ನಾಟಕ ಸೇರಿದಂತೆ ವಿವಿಧ ಕಲೆಗಳ ಮೂಲಕ ಎಲ್ಲರನ್ನು ಒಗ್ಗೂಡಿಸುವ ಕೆಲಸವಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ ಧ್ವನಿ ಫೌಂಡೇಷನ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಸಂಸ್ಕೃತಿ, ಪರಂಪರೆ, ಆಚಾರ–ವಿಚಾರವನ್ನು ಕಲೆಗಳ ಮೂಲಕ ಉಳಿಸಿಕೊಳ್ಳಬೇಕಾಗಿದೆ ಎಂದರು.

ಜಾತಿ–ಧರ್ಮದ ಹೆಸರಿನಲ್ಲಿ ಜನ ಮತ್ತು ಸಮಾಜವನ್ನು ವಿಭಜನೆ ಮಾಡಲಾಗುತ್ತಿದೆ. ಮೂಲಭೂತವಾದದ ಹಾವಳಿ ಹೆಚ್ಚಾಗಿದೆ. ಈ ಉಪಟಳವನ್ನು ತಡೆಹಿಡಿದು ದೇಶದ ಸಾರ್ವಭೌಮ, ಬಹುತ್ವ, ಪ್ರಜಾತಂತ್ರ ಮತ್ತು ಸಂವಿಧಾನವನ್ನು ಎತ್ತಿಹಿಡಿಯುವ ಕೆಲಸವನ್ನು ಸಂಘಟನೆಗಳು ಮಾಡಬೇಕಾಗಿದೆ ಎಂದರು.

ಬಡತನ, ಕಷ್ಟ–ನಷ್ಟ, ನೋವು–ದುಃಖವನ್ನು ಅನುಭವಿಸಿದವರು ದೇಶ ಮತ್ತು ಜಗತ್ತಿನ ಚರಿತ್ರೆಯನ್ನು ನಿರ್ಮಾಣ ಮಾಡಿದ್ದಾರೆ. ಗಾಂಧೀಜಿಯವರು ತಮ್ಮ ಪತ್ರಿಕೆ ಮೂಲಕ ಜನರ ಧ್ವನಿಯಾಗಿ ಕೆಲಸ ಮಾಡುತ್ತಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಪತ್ರಿಕಾ ಮಾಧ್ಯಮದ ಮೂಲಕ ಧ್ವನಿ ಇಲ್ಲದವರ ದನಿಯಾಗಿ ಕೆಲಸ ಮಾಡಿದ್ದಾರೆ. ಅದರಂತೆ ಈ ಧ್ವನಿ ಫೌಂಡೇಷನ್ ಧ್ವನಿ ಇಲ್ಲದವರ ದನಿಯಾಗಲಿ ಎಂದು ಆಶಿಸಿದರು.

ಬಳಿಕ ಡಾ.ಲಕ್ಷ್ಮಣದಾಸ್ ಅವರಿಂದ ಪಂಪಾಭಿವ್ಯಕ್ತಿ(ಹರಿಕಥೆ), ಪ್ರಭು ರಾವ್ ಮತ್ತು ತಂಡದಿಂದ ಕನ್ನಡ ಗೀತೆಗಳ ಗಾಯನ ನಡೆಯಿತು. ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ್ ಬಿಳಿಮಲೆ, ಚಲನಚಿತ್ರ ನಟಿ ಭಾವನಾ, ಫೌಂಡೇಷನ್ ಸ್ಥಾಪಕಾಧ್ಯಕ್ಷೆ ಡಾ.ಶ್ವೇತಾ ಮಡಪ್ಪಾಡಿ, ಕಾರ್ಯದರ್ಶಿ ಪ್ರಸಾದ್ ಮತ್ತಿತರರಿದ್ದರು.

# ಆರ್.ಧ್ರುವನಾರಾಯಣ್ ಸ್ಮರಣಾರ್ಥ ದೇಹದಾರ್ಢ್ಯ ಸ್ಪರ್ಧೆ



ಮೈಸೂರು, ಆ.6(ಎಂಕೆ)– ಮೈಸೂರು ಅಶೋಕಪುರಂ ಅಂಬೇಡ್ಕರ್ ಪಾರ್ಕ್ ಎದುರಿನ ಎನ್‌ಟಿಎಂಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಅಶೋಕಪುರಂ ಯೂತ್ಸ್, ಮೈಸೂರು ಡಿಸ್ಟ್ರಿಕ್ಟ್ ಅಮೆಚೂರ್ ಬಾಡಿ ಬಿಲ್ಡರ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ದಿವಂಗತ ಆರ್.ಧ್ರುವನಾರಾಯಣ್ ಸ್ಮರಣಾರ್ಥ ಆಯೋಜಿಸಿದ್ದ ಅಂತರ ಜಿಲ್ಲಾ ದೇಹದಾರ್ಢ್ಯ ಸ್ಪರ್ಧೆ(ಆರ್.ಧ್ರುವನಾರಾಯಣ್ ಕಪ್–2023) ಹಾಗೂ ನೂತನ ಶಾಸಕರಿಗೆ ಅಭಿನಂದನಾ ಸಮಾರಂಭ ನಡೆಯಿತು.

ಸಮಾರಂಭ ಉದ್ಘಾಟಿಸಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಕ್ರೀಡೆಗಳು ಯುವಕರಿಗೆ ಸ್ಫೂರ್ತಿಯನ್ನು ನೀಡುತ್ತವೆ. ದಿವಂಗತ ಆರ್.ಧ್ರುವನಾರಾಯಣ್ ಅವರ ಸ್ಮರಣಾರ್ಥ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರಲ್ಲದೆ ಯುವಕರು ದುಶ್ಚಟಗಳಿಗೆ ಬಲಿಯಾಗದೆ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಉತ್ತಮ ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು.

> ಯಾರು ಸಂವಿಧಾನವನ್ನು ತೆಗೆಯುತ್ತೇವೆ ಎಂದು ಬೊಬ್ಬೆ ಹೊಡೆಯುತ್ತಿದ್ದರೋ ಅಂತಹವರೂ ಕೂಡ ಇಂದು ಸಂವಿಧಾನದ ಪೀಠಿಕೆಯನ್ನು ಓದುವಂತಾಗಿದೆ. ನಾವು ಸಂವಿಧಾನವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಶಾಲೆಗಳಲ್ಲಿ ಮತ್ತು ವಿಧಾನಸಭೆ ಹಾಗೂ ವಿಧಾನಪರಿಷತ್ ಕಲಾಪ ಆರಂಭಕ್ಕೂ ಮುನ್ನ ಸಂವಿಧಾನ ಪೀಠಿಕೆಯನ್ನು ಎಲ್ಲರೂ ಓದುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಕೋಮುವಾದ ಹತ್ತಿಕ್ಕುವ ದೃಷ್ಟಿಯಿಂದ ರಾಜ್ಯದ ಜನತೆ ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ. ಅದರಂತೆ ಚುನಾವಣೆಗೂ ಮುನ್ನ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸುವ ಮೂಲಕ ಜನರ ವಿಶ್ವಾಸಗಳನ್ನು ಉಳಿಸಿಕೊಳ್ಳುತ್ತೇವೆ.
> – ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ದೇಹದಾರ್ಢ್ಯ ಸ್ಪರ್ಧೆ ಸುಲಭವನ್ನು ಅದೊಂದು ತಪಸ್ಸು. ಪೌಷ್ಟಿಕಾಂಶವುಳ್ಳ ನಿಯಮಿತ ಆಹಾರ, ದೈನಂದಿನ ಕಸರತ್ತು, ತರಬೇತಿ, ಶಿಸ್ತು, ಸಂಯಮ, ಬದ್ಧತೆ ಎಲ್ಲವೂ ಬೇಕು. ಕ್ರೀಡಾಪಟುಗಳನ್ನು ನೋಡುತ್ತಿದ್ದರೆ ಅದೆಂತಹ ಶಿಸ್ತಿನಿಂದ ನಿಮ್ಮ ದೇಹವನ್ನು ಸದೃಢವಾಗಿಟ್ಟುಕೊಂಡಿದ್ದೀರಿ ಎಂದು ತಿಳಿಯುತ್ತದೆ ಎಂದರು.

ಇದೇ ವೇಳೆ ನೂತನ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್, ಜೋಗಿ ಮಹೇಶ್, ಸುರೇಶ್, ಜೈರಾಜ್, ಜೇಸುದಾಸ್, ಮಯೂರ್, ಕೃಷ್ಣ, ಆದರ್ಶ್‌ಭೀಮ್, ಶ್ಯಾಮ್ ಮತ್ತಿತರರು ಉಪಸ್ಥಿತರಿದ್ದರು.

# ಜಮೀನು ವಿವಾದ, ಹಲ್ಲೆ ಅವಮಾನ ತಾಳಲಾರದೆ ರೈತ ಆತ್ಮಹತ್ಯೆ

ಹುಣಸೂರು, ಆ.6– ಜಮೀನು ವಿವಾದದ ಹಿನ್ನೆಲೆಯಲ್ಲಿ ಮರಕ್ಕೆ ಕಟ್ಟಿಹಾಕಿ ಥಳಿಸಿದ್ದರಿಂದ ಅವಮಾನಿತರಾಗಿ ಕ್ರಿಮಿನಾಶಕ ಸೇವಿಸಿ ರೈತ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕುಡಿನೀರು ಮುದ್ದನಹಳ್ಳಿಯಲ್ಲಿ ನಡೆದಿದೆ.

ಹುಣಸೂರು ತಾಲೂಕಿನ ಕುಡಿನೀರುಮುದ್ದನಹಳ್ಳಿ ಗ್ರಾಮದ ಗುರುರಾವ್ ಭಾಂಗೆ(60) ಆತ್ಮಹತ್ಯೆಗೆ ಶರಣಾದವರು. ಪತಿಯ ಆತ್ಮಹತ್ಯೆಗೆ ಗ್ರಾಮದ ಮಹೇಶ್ ಮತ್ತವರ ಪತ್ನಿ ಸಾಕಮ್ಮ ಹಾಗೂ ಇವರ ಪುತ್ರ ರಂಜನ್‌ರ ಕಿರುಕುಳವೇ ಕಾರಣವೆಂದು ಇವರ ಪತ್ನಿ ಮಂಜುಳಾ ಬಾಯಿ ದೂರು ದಾಖಲಿಸಿದ್ದಾರೆ.

**ಘಟನೆ ವಿವರ:** ತರೀಕಲ್ ಗ್ರಾಮದಲ್ಲಿ ಗುರುರಾವ್ ಬಾಂಗೆಗೆ 2.05ಎಕರೆ ಜಮೀನಿದ್ದು, ಪಕ್ಕದ ಜಮೀನಿನ ಮಹೇಶ್ ಮತ್ತು ಕುಟುಂಬದವರು ಗುರುರಾವ್ ಬಾಂಗೆ ಜಮೀನಿನಲ್ಲಿ 16ಗುಂಟೆ ನಮ್ಮ ಕುಟುಂಬಕ್ಕೆ ಸೇರಬೇಕೆಂದು ಹಿಂದಿನಿಂದಲೂ ಗುರುರಾವ್ ಭಾಂಗೆ ಕುಟುಂಬಕ್ಕೂ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಕಳೆದ ಎರಡು ವರ್ಷಗಳ ಹಿಂದೆ ಜಮೀನು ವಿವಾದ ನ್ಯಾಯಾಲಯದ ಮೆಟ್ಟಿಲೇರಿತ್ತು.

**ಪೊಲೀಸರ ಎಚ್ಚರಿಕೆ:** ಶುಕ್ರವಾರ ಸಹ ಮಹೇಶ್ ಮತ್ತು ಗುರುರಾವ್ ಬಾಂಗೆ ನಡುವೆ ಗಲಾಟೆಯಾಗಿತ್ತು. ಈ ಸಂಬಂಧ ಗ್ರಾಮಾಂತರ ಠಾಣೆ ಪೊಲೀಸರು ಇಬ್ಬರನ್ನು ಕರೆಸಿ ಜಮೀನು ವಿವಾದ ನ್ಯಾಯಾಲಯದಲ್ಲಿದ್ದು, ಆದೇಶ ಹೊರಬೀಳುವವರೆಗೆ ಇಬ್ಬರೂ ಸಹ ಗಲಾಟೆ ಮಾಡಿಕೊಳ್ಳದಂತೆ ಎಚ್ಚರಿಸಿ ಕಳುಹಿಸಿದ್ದರು.

**ಅವಮಾನ ತಾಳಲಾರದೆ ಆತ್ಮಹತ್ಯೆ:** ಈ ನಡುವೆ ಶುಕ್ರವಾರ ಸಂಜೆ ಮತ್ತೆ ಗಲಾಟೆ ನಡೆದಿದ್ದು, ಮಹೇಶ್ ಮತ್ತವರ ಪತ್ನಿ ಸಾಕಮ್ಮ ಇವರ ಪುತ್ರ ರಂಜನ್‌ರವರು ಗುರುರಾವ್ ಭಾಂಗೆ ಅವರಿಗೆ ಕುಡಿನೀರು ಮುದ್ದನಹಳ್ಳಿ ಗ್ರಾಮದ ಸರ್ಕಲ್‌ನಲ್ಲಿ ಚಪ್ಪಲಿಯಿಂದ ಮನಬಂದಂತೆ ಥಳಿಸಿ ಅಪಮಾನ ಮಾಡಿದ್ದರಿಂದ ಮನನೊಂದ ಗುರುರಾವ್‌ಭಾಂಗೆ ಶನಿವಾರ ಮುಂಜಾನೆ ತಮ್ಮ ಜಮೀನಿನಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಅಸ್ವಸ್ಥಗೊಂಡಿದ್ದವರನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ತಮ್ಮ ಪತಿಯ ಸಾವಿಗೆ ಮಹೇಶ್, ಆತನ ಪತ್ನಿ ಸಾಕಮ್ಮ ಹಾಗೂ ಇವರ ಪುತ್ರ ರಂಜನ್‌ರವರುಗಳೇ ಕಾರಣವೆಂದು ಗುರುರಾವ್‌ಭಾಂಗೆ ಪತ್ನಿ ಮಂಜುಳಾಬಾಯಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಚಾಮರಾಜನಗರದಲ್ಲಿ ವಿ.ಶ್ರೀನಿವಾಸ್ ಪ್ರಸಾದ್ ಹುಟ್ಟುಹಬ್ಬ




ಚಾಮರಾಜನಗರ, ಆ.6– ಚಾಮರಾಜನಗರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ 77ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ತಾಲೂಕಿನ ಭೋಗಾಪುರ ಗ್ರಾಮದ ದೀಪಾ ಅಕಾಡೆಮಿ ದೃಷ್ಟಿ, ವಿಕಲಚೇತನ ಮಕ್ಕಳ ವಸತಿ ಶಾಲೆಯಲ್ಲಿ ಅರ್ಥಪೂರ್ಣವಾಗಿ ಆಚರಿಸಿದರು.

ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗ ಚಾಮರಾಜನಗರ ಮತ್ತು ಮೈಸೂರು ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್ ಅವರು ಶೋಷಿತ ಸಮುದಾಯಗಳ ಆಶಾಕಿರಣವಾಗಿ ನಿರಂತರ ಸೇವೆ ಸಲ್ಲಿಸಿಕೊಂಡು ಬಂದಿದ್ದಾರೆ. ಸರಳ–ಸಜ್ಜನ ರಾಜಕಾರಣಿಯಾಗಿರುವ ಇವರು ತಮ್ಮ ಹುಟ್ಟುಹಬ್ಬವನ್ನು ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಆಚರಿಸಿಕೊಳ್ಳುವುದು ಅನುಕರಣೀಯ. ಹಾಗೆಯೇ ಅವರ ಅಭಿಮಾನಿಗಳು ದೀಪ ಅಂಧ ಮತ್ತು ಕಿವುಡು ಮಕ್ಕಳ ಶಾಲೆಯಲ್ಲಿ ಹುಟ್ಟುಹಬ್ಬ ಆಚರಿಸಿದ್ದು ಆದರ್ಶನೀಯವಾಗಿದೆ ಎಂದು ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕಿ ಪ್ರೊ.ಕೋಮಲ ಮಾತನಾಡಿ, ಬಡವರು, ಶೋಷಿತರ ಬಗ್ಗೆ ಚಿಂತಿಸುವ, ನೊಂದವರಿಗೆ ಸ್ಪಂದಿಸುವ ಗುಣವುಳ್ಳ ವಿ.ಶ್ರೀನಿವಾಸ್‌ಪ್ರಸಾಸ್ ಅವರಂತಹ ವ್ಯಕ್ತಿತ್ವ ಇಂದಿನ ಪೀಳಿಗೆಗೆ ಆದರ್ಶವಾಗಬೇಕು. ಉತ್ತಮವಾಗಿ ಓದಿ, ಸಾಮಾಜಿಕ ಕಳಕಳಿಯ ಕಾರ್ಯಗಳಲ್ಲಿ ಸಕ್ರಿಯವಾಗುವ ಜವಾಬ್ದಾರಿಯುತ ವ್ಯಕ್ತಿಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ವಿವಿ ಪಿಎಂಇಬಿ ನಿರ್ದೇಶಕ ಡಾ.ವಿ.ಜಿ.ಸಿದ್ಧರಾಜು, ಸಂಶೋಧಕ ದೊರೈರಾಜು, ದೀಪ ಅಕಾಡೆಮಿ ಶಿಕ್ಷಕಿ ಜ್ಯೋತಿ ಹಾಗೂ ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದ ಸದಸ್ಯರು ಉಪಸ್ಥಿತರಿದ್ದರು. ಬಳಗದ ವತಿಯಿಂದ ಚಾಮರಾಜನಗರದ ಸಾವಿತ್ರಿ ಆಶ್ರಮದಲ್ಲೂ ಸಿಹಿ ವಿತರಿಸಲಾಯಿತು.

# ಬಿದ್ದು ಗಾಯಗೊಂಡ ಸಾಲುಮರದ ತಿಮ್ಮಕ್ಕ ಆಸ್ಪತ್ರೆಗೆ ದಾಖಲು



ಬೆಂಗಳೂರು, ಆ.6– ಪರಿಸರ ಪ್ರೇಮಿ, ವೃಕ್ಷಮಾತೆ ಎಂದೇ ಕರೆಯಲ್ಪಡುವ ಸಾಲುಮರದ ತಿಮ್ಮಕ್ಕ ಬಿದ್ದು ಗಾಯಗೊಂಡು ಅಸ್ವಸ್ಥರಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೆಂಗಳೂರಿನ ಜಯನಗರದಲ್ಲಿರುವ ಖಾಸಗಿ ಆಸ್ಪತ್ರೆಯೊಂದರಲ್ಲಿ ಅವರಿಗೆ ಚಿಕಿತ್ಸೆ ನಡೆಯುತ್ತಿದೆ. ಸಾಲುಮರದ ತಿಮ್ಮಕ್ಕ ಇಂದು ಸಂಜೆ 4.30ರ ಸುಮಾರಿಗೆ ಮನೆಯಲ್ಲಿ ಕಾಲು ಜಾರಿ ಬಿದ್ದಿದ್ದು, ಗಾಯಗೊಂಡಿದ್ದರು. ಹೀಗಾಗಿ ವಿಪರೀತ ನೋವಿನಿಂದ ಅಸ್ವಸ್ಥಗೊಂಡ ಅವರನ್ನು ಕೂಡಲೇ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದೆ.

ವೈದ್ಯರು ತಕ್ಷಣಕ್ಕೆ ಸೂಕ್ತ ಕ್ರಮ ಕೈಗೊಂಡಿದ್ದು, ಸಾಲುಮರದ ತಿಮ್ಮಕ್ಕ ಅವರಿಗೆ ಚಿಕಿತ್ಸೆ ಮುಂದುವರಿದಿದೆ. ಬೆನ್ನಿನ ಭಾಗಕ್ಕೆ ಸ್ವಲ್ಪ ಪೆಟ್ಟಾಗಿದೆ, ಉಳಿದಂತೆ ಯಾವುದೇ ಸಮಸ್ಯೆ ಇಲ್ಲ ಎಂದು ಕೌಟುಂಬಿಕ ಮೂಲದಿಂದ ತಿಳಿದುಬಂದಿದೆ.

# ಕೆಂಪೇಗೌಡ ವಿಮಾನ ನಿಲ್ದಾಣ: 12 ನಿಮಿಷ ಮೊದಲೇ, 6 ಪ್ರಯಾಣಿಕರ ಬಿಟ್ಟು ಹೋದ ಇಂಡಿಗೋ ವಿಮಾನ

ಬೆಂಗಳೂರು, ಆ.6– ಬೆಂಗಳೂರಿನಿಂದ ಮಂಗಳೂರಿಗೆ ತೆರಳುತ್ತಿದ್ದ ಇಂಡಿಗೋ ವಿಮಾನವೊಂದು 12 ನಿಮಿಷ ಮೊದಲೇ, 6 ಪ್ರಯಾಣಿಕರ ಬಿಟ್ಟು ಹೋದ ಘಟನೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದ್ದು, ತಡವಾಗಿ ಈ ಘಟನೆ ಬೆಳಕಿಗೆ ಬಂದಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಳೆದ ಶುಕ್ರವಾರ (ಆಗಸ್ಟ್ 4) ದಂದು ಮಂಗಳೂರಿಗೆ ತೆರಳಬೇಕಿದ್ದ ಇಂಡಿಗೋ ವಿಮಾನವೂ ನಿಗದಿತ ಸಮಯಕ್ಕಿಂತ 12 ನಿಮಿಷ ಮೊದಲೇ ಹಾರಾಟ ಮಾಡಿದ್ದರ ಪರಿಣಾಮವಾಗಿ 6 ಜನ ಪ್ರಯಾಣಿಕರಿಗೆ ವಿಮಾನ ತಪ್ಪಿದ್ದು, ಮಾಡದ ತಪ್ಪಿಗೆ ಸತತ 6 ಗಂಟೆಗಳ ಕಾಲ ವಿಮಾನ ನಿಲ್ದಾಣದಲ್ಲಿಯೇ ಕಾದು ಕುಳಿತಿದ್ದಾರೆ.

ಬೆಂಗಳೂರಿನಿಂದ ಮಂಗಳೂರಿಗೆ ಹೋಗುತ್ತಿದ್ದ ಇಂಡಿಗೋ 6ಇ 6162 ವಿಮಾನವೂ ಶುಕ್ರವಾರ ಮಧ್ಯಾಹ್ನ 2.55ಕ್ಕೆ ಹಾರಾಟ ಆರಂಭಿಸಬೇಕಿದ್ದು, ನಿಗದಿತ ಅವಧಿಗೂ ಮುನ್ನ, ಅಂದರೆ ಮಧ್ಯಾಹ್ನ 2.43ಕ್ಕೆ ಹೊರಟ ಪರಿಣಾಮ 6 ಜನ ಪ್ರಯಾಣಿಕರಿಗೆ ವಿಮಾನ ಮಿಸ್ ಆಗಿದ್ದು, ವಿಮಾನ ಹತ್ತಲು ತೆರಳುವ ವೇಳೆಯಲ್ಲಿ ಎಲ್ಲ ಬಾಗಿಲುಗಳು ಮುಚ್ಚಿವೆ ಎಂದು ತಿಳಿದು ಬಂದಿದೆ ಆದರೆ ಇಂಡಿಗೋ, ಪ್ರಯಾಣಿಕರ ಆರೋಪವನ್ನು ತಳ್ಳಿಹಾಕಿದೆ.

# ಮನೆಬಿಟ್ಟು ಹೋಗಿದ್ದ ಬಾಲಕಿಯರಲ್ಲಿ ಓರ್ವ ಬಾಲಕಿ ಮಲ್ಪೆಯಲ್ಲಿ ಸಮುದ್ರ ಪಾಲು

## ಮತ್ತೋರ್ವ ಬಾಲಕಿ ರಕ್ಷಣೆ, ಬಂಡೆ ಮೇಲೆ ಕುಳಿತು ಆಟವಾಡುತ್ತಿದ್ದಾಗ ದುರಂತ

ಮಡಿಕೇರಿ, ಆ.6– ಕಳೆದ 3 ದಿನಗಳ ಹಿಂದೆ ಯಾರಿಗೂ ಹೇಳದೆ ಮನೆ ಬಿಟ್ಟು ಹೋಗಿದ್ದ ಮಡಿಕೇರಿ ತಾಲೂಕಿನ ಇಬ್ಬರು ಅಪ್ರಾಪ್ತ ಬಾಲಕಿಯರ ಪೈಕಿ ಓರ್ವಳು ಕಡಲಲ್ಲಿ ಮುಳುಗಿ ಮೃತಪಟ್ಟ ಘಟನೆ ಉಡುಪಿಯ ಮಲ್ಪೆಯಲ್ಲಿ ನಡೆದಿದೆ. ಮಡಿಕೇರಿ ನಿವಾಸಿ ಮಾನ್ಯ ಎಂಬಾಕೆ ಮೃತಪಟ್ಟ ಬಾಲಕಿಯಾಗಿದ್ದು, ಮತ್ತೋರ್ವ ಬಾಲಕಿ ಮೇಕೇರಿ ನಿವಾಸಿ ಯಶಸ್ವಿನಿ ಎಂಬಾಕೆಯನ್ನು ರಕ್ಷಿಸಲಾಗಿದೆ.

**ಘಟನೆ ಹಿನ್ನೆಲೆ:** ಮಡಿಕೇರಿ ನಗರದ ಖಾಸಗಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿನಿಯರಾದ ಮಾನ್ಯ ಮತ್ತು ಯಶಸ್ವಿನಿ ಕಾಲೇಜಿಗೆ ತೆರಳುವುದಾಗಿ ಹೇಳಿ ಮನೆಯಿಂದ ಮಡಿಕೇರಿಗೆ ಬಂದಿದ್ದು, ಬಳಿಕ ನಾಪತ್ತೆಯಾಗಿದ್ದರು. ಈ ಕುರಿತು ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿ, ಪೊಲೀಸರು ತನಿಖೆ ಕೈಗೊಂಡಿದ್ದರು. ಈ ಇಬ್ಬರು ಬಾಲಕಿಯರು ಬಸ್‌ನಲ್ಲಿ ಉಡುಪಿಯ ಮಲ್ಪೆ ಕಡಲಿಗೆ ತೆರಳಿದ್ದು, ಶನಿವಾರ ರಾತ್ರಿ 8.30 ಗಂಟೆ ವೇಳೆ ಬಂಡೆಯೊಂದರ ಮೇಲೆ ಕುಳಿತು ಆಟವಾಡುತ್ತಿದ್ದರು ಎನ್ನಲಾಗಿದೆ. ಈ ವೇಳೆ ಸಮುದ್ರದಿಂದ ದೊಡ್ಡ ಅಲೆಯೊಂದು ಅಪ್ಪಳಿಸಿ ಇಬ್ಬರನ್ನೂ ಸೆಳೆದುಕೊಂಡು ಹೋಗಿದೆ.

ಮಲ್ಪೆ ಕಡಲಲ್ಲಿ ಇಬ್ಬರು ಬಾಲಕಿಯರು ನೀರಿನಲ್ಲಿ ಮುಳುಗೇಳುತ್ತಿದ್ದಾರೆ ಎಂಬ ಸುದ್ದಿ ತಿಳಿಯುತ್ತಿದ್ದಂತೆಯೇ ಸಮೀಪದಲ್ಲೇ ಇದ್ದ ಮಲ್ಪೆಯ ಸಮಾಜ ಸೇವಕ, ಮುಳುಗು ತಜ್ಞ ಈಶ್ವರ್ ಮಲ್ಪೆ ಅವರು ಸಮುದ್ರಕ್ಕೆ ನೆಗೆದು ನೀರಿನಲ್ಲಿ ಮುಳುಗುತ್ತಿದ್ದ ಇಬ್ಬರನ್ನೂ ಮೇಲೆತ್ತಿದ್ದಾರೆ. ಆದರೆ, ಆ ಹೊತ್ತಿಗೆ ಮಾನ್ಯ ನೀರು ಕುಡಿದು ಮೃತಪಟ್ಟಿದ್ದಾಳೆ. ಆದರೆ ನೀರಿನಲ್ಲಿ ಮುಳುಗುತ್ತಿದ್ದ ಯಶಸ್ವಿನಿಯನ್ನು ರಕ್ಷಿಸಲಾಗಿದೆ. ಬಳಿಕ ಯಶಸ್ವಿನಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿ ಇದೀಗ ಚೇತರಿಸಿಕೊಳ್ಳುತ್ತಿದ್ದಾಳೆ.

ಈ ಕುರಿತು ಯಶಸ್ವಿನಿ ಪೊಲೀಸರಿಗೆ ಮಾಹಿತಿ ನೀಡಿದ್ದು ಮೂರು ದಿನಗಳ ಹಿಂದೆ ಮನೆ ಬಿಟ್ಟು ಬಂದಿದ್ದಾಗಿ ತಿಳಿಸಿದ್ದಾಳೆ. ಇಬ್ಬರು ಬಾಲಕಿಯರು ಮಲ್ಪೆ ಕಡಲ ತೀರಕ್ಕೆ ಏತಕ್ಕಾಗಿ ಹೋಗಿದ್ದರು ಎಂಬ ಬಗ್ಗೆ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಮಲ್ಪೆ ಪೊಲೀಸ್ ಠಾಣೆಯ ವೃತ್ತನಿರೀಕ್ಷಕ ಗುರುನಾಥ್ ಹಾದಿಮನಿ ಮತ್ತು ಸಿಬ್ಬಂದಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ. ಕಡಲಲ್ಲಿ ಮುಳುಗಿ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಆಧಾರ್ ತಿದ್ದುಪಡಿಗಾಗಿ ಜನರ ಅಲೆದಾಟ

## ಸೇವಾ ಕೇಂದ್ರದ ಮುಂದೆ ಕಾದು ಕಾದು ಬೇಸತ್ತಿರುವ ಜನರು



ಸಿದ್ದಾಪುರ, ಆ.6– ಆಧಾರ್, ರೇಷನ್ ಕಾರ್ಡ್ ಮತ್ತು ಪಾನ್‌ಕಾರ್ಡ್ ಸೇರಿದಂತೆ ಅಗತ್ಯ ದಾಖಲಾತಿಗಾಗಿ ಹಲವು ವರ್ಷಗಳಿಂದಲೂ ಸಮಸ್ಯೆಗಳನ್ನು ಎದುರಿಸುತ್ತಿರುವ ಸಾರ್ವಜನಿಕರು ಶಾಶ್ವತ ಪರಿಹಾರ ಕಾಣದೆ ದಿನನಿತ್ಯ ಕಚೇರಿಗಳಿಗೆ ಅಲೆಯುವಂತಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಯೋಜನೆಗಳ ಲಾಭ ಪಡೆದುಕೊಳ್ಳಲು ಗ್ರಾಮೀಣ ಭಾಗದ ಜನರು ಹರಸಾಹಸ ಪಡಬೇಕಾಗಿದೆ. ಇತ್ತೀಚೆಗೆ ರಾಜ್ಯ ಸರ್ಕಾರ ಘೋಷಣೆ ಮಾಡಿದ ಗ್ಯಾರಂಟಿ ಯೋಜನೆಗಳನ್ನು ಪಡೆದುಕೊಳ್ಳಲು ಸಾರ್ವಜನಿಕರು ಅಗತ್ಯ ದಾಖಲಾತಿಗಳನ್ನು ಸರಿಪಡಿಸಿಕೊಳ್ಳಲು ಪರದಾಡುತ್ತಿದ್ದಾರೆ.

ಆಧಾರ್‌ಕಾರ್ಡ್ ತಿದ್ದುಪಡಿ ಸೇರಿದಂತೆ ಇನ್ನಿತರ ಬದಲಾವಣೆ ಮಾಡಿಕೊಳ್ಳಲು ಸಿದ್ದಾಪುರ ಗ್ರಾಮ ಪಂಚಾಯಿತಿ, ಬಿಎಸ್‌ಎನ್‌ಎಲ್ ಹಾಗೂ ಅಂಚೆ ಕಚೇರಿ ಮುಂದೆ ಸಾಲುಗಟ್ಟಿ ನಿಲ್ಲುವಂತಾಗಿದೆ. ಸುಮಾರು 10 ರಿಂದ 30 ಮಂದಿಗೆ ಮಾತ್ರ ಟೋಕನ್ ನೀಡಲಾಗುತ್ತಿದ್ದು, ಟೋಕನ್ ಪಡೆದುಕೊಳ್ಳಲು ದಿನನಿತ್ಯ ಕಚೇರಿ ಸುತ್ತಬೇಕಾಗಿದೆ.

> ಸರ್ಕಾರಿ ಕಚೇರಿಗಳಲ್ಲಿ ಸರ್ವರ್ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಸಾರ್ವಜನಿಕರು ಯೋಜನೆಗಳಿಗೆ ನೋಂದಾಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಗ್ರಾಮ ಒನ್ ಕೇಂದ್ರಗಳಲ್ಲಿ ಆಧಾರ್ ತಿದ್ದುಪಡಿ ವ್ಯವಸ್ಥೆಯನ್ನು ಸರಿಪಡಿಸಿದಲ್ಲಿ ಸಾರ್ವಜನಿಕರಿಗೆ ಉಪಯೋಗವಾಗಲಿದೆ.
>
> -ಜಾಫರ್, ಸಿದ್ದಾಪುರ ಗ್ರಾಮ ಪಂಚಾಯಿತಿ ಸದಸ್ಯ

ಪ್ರತಿ ಕೇಂದ್ರಗಳಲ್ಲೂ ಗ್ರಾಮೀಣ ಭಾಗದ ಜನರು ಬೆಳಗ್ಗೆ 6 ಗಂಟೆಯಿಂದ ಕ್ಯೂ ನಿಲ್ಲುತ್ತಿದ್ದಾರೆ. ಕೂಲಿ ಕೆಲಸವನ್ನೇ ನಂಬಿ ಜೀವನ ನಡೆಸುತ್ತಿರುವ ಬಹುತೇಕ ಕಾರ್ಮಿಕ ಕುಟುಂಬಗಳು ಕಾಡು ಪ್ರಾಣಿಗಳ ಭಯದ ನಡುವೆ ವಾಹನ ವ್ಯವಸ್ಥೆ ಇಲ್ಲದೆ ಮಾಲ್ದಾರೆ, ಸಿದ್ದಾಪುರ, ಗುಯ್ಯ, ಕರಡಿಗೋಡು, ನೆಲ್ಯಹುದಿಕೇರಿ, ಇಂಜಿಲಗೆರೆ ಸೇರಿದಂತೆ ಇತರ ಸ್ಥಳಗಳಿಂದ ಆಧಾರ್ ಕಾರ್ಡ್ ಸಮಸ್ಯೆ ಬಗೆಹರಿಸಿಕೊಳ್ಳಲು ಬೆಳಗ್ಗೆಯಿಂದ ಸಂಜೆವರೆಗೆ ಕಾದರೂ ಕಾರ್ಡ್ ಸಮಸ್ಯೆ ಸರಿಪಡಿಸಿಕೊಳ್ಳಲು ಸಾಧ್ಯವಾಗದೆ ಮನೆಗೆ ಹಿಂತಿರುಗಿ ಮರುದಿನ ಮತ್ತೆ ಬರಬೇಕಾಗಿದೆ.

ಸಾರ್ವಜನಿಕರಿಗೆ ಉಪಯೋಗವಾಗಲು ಪ್ರತಿ ಗ್ರಾಮ ಮಟ್ಟದಲ್ಲೂ ಗ್ರಾಮ ಒನ್ ಕೇಂದ್ರ ಪ್ರಾರಂಭಿಸಲಾಗಿದ್ದು, ಸರ್ಕಾರದ ಯೋಜನೆಗಳನ್ನು ಪಡೆದುಕೊಳ್ಳಲು ಆಧಾರ್ ಕಾರ್ಡ್ ಕಡ್ಡಾಯವಾಗಿದೆ. ಆದರೆ ಗ್ರಾಮ ಒನ್ ಕೇಂದ್ರದಲ್ಲಿ ಕಳೆದ 20 ದಿನಗಳಿಂದ ಆಧಾರ್ ತಿದ್ದುಪಡಿ ಸೇವೆಯನ್ನು ರದ್ದುಗೊಳಿಸಲಾಗಿದೆ. ಬಹುತೇಕ ಯೋಜನೆಗಳನ್ನು ಪಡೆದುಕೊಳ್ಳಲು ಆಧಾರ್ ಮೂಲಕ ಓಟಿಪಿ ಅಗತ್ಯವಾಗಿದ್ದು, ಆಧಾರ್ ತಿದ್ದುಪಡಿ ಸಮಸ್ಯೆಯಿಂದ ಗ್ರಾಮ ಒನ್ ಕೇಂದ್ರಗಳಿಗೆ ತೆರಳಿದರು ಪ್ರಯೋಜನವಾಗದೆ ಮನೆಗೆ ಹಿಂತಿರುಗಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಸ್ಥಳೀಯರು ದೂರಿಕೊಂಡಿದ್ದಾರೆ.

# ಅರೆಭಾಷೆ ಮಹಿಳೆಯರಿಂದ ವೈವಿಧ್ಯಮಯ ಆಟಿ ಸಂಭ್ರಮ



ಕುಶಾಲನಗರ, ಆ.6– ಇಲ್ಲಿನ ಅರೆಭಾಷಿಕ ಸಮುದಾಯದ ಪದ್ಮಾವತಿ ಗೌಡ ಮಹಿಳಾ ಒಕ್ಕೂಟ ಹಾಗೂ ಗೌಡ ಮಹಿಳಾ ಸ್ವ – ಸಹಾಯ ಸಂಘದ ವತಿಯಿಂದ ಆಟಿ ಸಂಭ್ರಮ –2023 ಕಾರ್ಯಕ್ರಮ ಸ್ಥಳೀಯ ಗೌಡ ಸಮಾಜದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿಪ್ರಸಾದ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಯೋಧ ದೇವಜನ ಚಿಣ್ಣಪ್ಪ, ಗೌಡ ಯುವಕ ಸಂಘದ ಅಧ್ಯಕ್ಷ ಕೊಡಗಿನ ಹರ್ಷ, ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೇಯಂಡಿ ಶಾಂತಿ, ನಿರ್ದೇಶಕರಾದ ಚೆರಿಯಮನೆ ಪಾರ್ವತಿ, ಗೌಡ ಸ್ವ ಸಹಾಯ ಸಂಘದ ಅಧ್ಯಕ್ಷೆ ಸೂದನ ಲೀಲಾವತಿ, ಶಾರದಾ ಬಸಪ್ಪ, ಪಟ್ಟಂದಿ ಬೀನಾ ಸೀತಾರಾಂ ಮೊದಲಾದವರಿದ್ದರು. ಆಟಿ ಸಂಭ್ರಮದಲ್ಲಿ ಮಹಿಳೆಯರು ಸಿದ್ದಪಡಿಸಿ ತಂದು ಪ್ರದರ್ಶನಕ್ಕಿಟ್ಟಿದ್ದ ವೈವಿಧ್ಯಮಯ ಖಾದ್ಯಗಳು ನೋಡುಗರ ಬಾಯಲ್ಲಿ ನೀರೂರಿಸಿದವು.

ಈ ಪೈಕಿ ಎಡಿಕೇರಿ ಪ್ರೀತು ಸುಜಿತ್ ಅವರು ಸಿದ್ದಪಡಿಸಿದ್ದ ಮರಗೆಣಸಿನ ಹಪ್ಪಳ, ಚಿಲ್ಲನ ಲತಾ ಗಣಿಪ್ರಸಾದ್ ಅವರ ಪತ್ರೊಡೆ ಹಾಗೂ ಆಟಿಸೊಪ್ಪಿನ ರಸದ ಶಾವಿಗೆ, ನಡುವಟ್ಟಿರ ವನಿತ ಸುಜಿತ್ ಅವರ ಬಾಳೆ ಹೂವಿನ ಪಲ್ಯ, ಕಲಾ ಆನಂದ್ ಅವರ ಡ್ರೈ ಫಿಶ್ ಕರಿ, ಫಿಶ್ ಎಗ್ ರೋಸ್ಟ್ ಕಹಿ ಹುಳಿ ಪಜ್ಜಿ, ಆಟಿ ರಸದ ಹಲ್ವಾ, ಮಾವಿನ ಹಣ್ಣಿನ ಹಲ್ವ, ಕಣಲೆ ಉಪ್ಪಿನಕಾಯಿ, ಪಂದಿ ಕರಿ ಮೊದಲಾದ ಖಾದ್ಯಗಳು ಬಾಯಲ್ಲಿ ನೀರೂರಿಸಿದವು. ಕಾರ್ಯಕ್ರಮದಲ್ಲಿ ಭಾಗಿಯಾ ದವರೆಲ್ಲರೂ ಸಾಮೂಹಿಕವಾಗಿ ಆಟಿ ಸೊಪ್ಪಿನ ಖಾದ್ಯಗಳನ್ನು ಸವಿದು ಸಂಭ್ರಮಿಸಿದರು.

# ಆ.9, ವಿರಾಜಪೇಟೆಯಲ್ಲಿ ಹಿಂದೂ ಜಾಗರಣಾ ವೇದಿಕೆಯಿಂದ ಪಂಜಿನ ಮೆರವಣಿಗೆ

## ಅಂದು ಸಂಜೆ 5ರಿಂದ ರಾತ್ರಿ 8ರವರೆಗೆ ರಸ್ತೆ ಬದಿ ವಾಹನಗಳ ನಿಲುಗಡೆ ನಿಷೇಧ

ವಿರಾಜಪೇಟೆ, ಆ.6– ಅಖಂಡ ಭಾರತ ಸಂಕಲ್ಪ ದಿನದ ಅಂಗವಾಗಿ ಹಿಂದೂ ಜಾಗರಣ ವೇದಿಕೆ ವತಿಯಿಂದ ಆ.9ರಂದು ವಿರಾಜಪೇಟೆಯಲ್ಲಿ 'ಬೃಹತ್ ಪಂಜಿನ ಮೆರವಣಿಗೆ' ಹಮ್ಮಿಕೊಂಡಿದ್ದು, ಅಂದು ಸಂಜೆ 5 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ರಸ್ತೆ ಬದಿಯಲ್ಲಿ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ ಎಂದು ವೃತ್ತನಿರೀಕ್ಷಕ ಬಿ.ಎಸ್.ಶಿವರುದ್ರ ತಿಳಿಸಿದ್ದಾರೆ.



ವಿರಾಜಪೇಟೆ ತಾಲೂಕು ಹಿಂದೂ ಜಾಗರಣ ವೇದಿಕೆ ವತಿಯಿಂದ ಆ.9 ರಂದು ಹಮ್ಮಿಕೊಂಡಿರುವ ಬೃಹತ್ ಪಂಜಿನ ಮೆರವಣಿಗೆ ಹಿನ್ನೆಲೆಯಲ್ಲಿ ಪೊಲೀಸ್ ಠಾಣಾ ಸಭಾಂಗಣದಲ್ಲಿ ಕರೆದಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಂಜಿನ ಮೆರವಣಿಗೆಯು ನಗರದ ತೆಲುಗರ ಬೀದಿಯಲ್ಲಿರುವ ಮಾರಿಯಮ್ಮ ದೇವಸ್ಥಾನದಿಂದ ಹೊರಟು ಜೈನರ ಬೀದಿ, ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬದ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ, ಸುಣ್ಣದ ಬೀದಿ, ಗೋಣಿಕೊಪ್ಪ ರಸ್ತೆಯಿಂದ ಮಹಿಳಾ ಸಮಾಜದವರೆಗೆ ಸಾಗಲಿದೆ ಎಂದರು.

ಇದರಿಂದ ಅಂದು ಸಂಜೆ 5 ರಿಂದ 8ರವರೆಗೆ ರಸ್ತೆಬದಿ ವಾಹನ ನಿಲುಗಡೆ ನಿಷೇಧಿಸಲಾಗಿದೆ. ಸಾರ್ವಜನಿಕರು ಸಹಕರಿಸುವಂತೆ ಕೋರಿದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಬೇಕು. ಮೆರವಣಿಗೆ ನಂತರ ಪಂಜುಗಳನ್ನು ಎಚ್ಚರದಿಂದ ಇಡಬೇಕು. ಬಳಿಕ ಸ್ಥಳೀಯ ಮಹಿಳಾ ಸಮಾಜದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಕಾನೂನು ಸುವ್ಯವಸ್ಥೆಗೆ ಸಹಕರಿಸುವುದರೊಂದಿಗೆ ಪಾಲನೆ ಮಾಡುವಂತೆ ತಿಳಿಸಿದರಲ್ಲದೆ ಯಾರಿಗೂ ತೊಂದರೆ ಕೊಡದಂತೆ ಎಚ್ಚರವಹಿಸಬೇಕು ಎಂದರು. ಶಾಂತಿ ಸಭೆಯಲ್ಲಿ ನಗರ ಠಾಣಾಧಿಕಾರಿ ಶ್ರೀಧರ್, ಗ್ರಾಮಾಂತರ ಠಾಣೆಯ ಮಂಜುನಾಥ್, ಹಿಂದೂ ಜಾಗರಣ ವೇದಿಕೆಯ ತಾಲೂಕು ಸಂಚಾಲಕ ಗಣೇಶ್ ಬಿಟ್ಟಂಗಾಲ, ಕಾರ್ಯಕರ್ತರಾದ ಪಿ.ವಿ. ವಿಶ್ವನಾಥ್, ಕಿಶೋರ್, ಅನೀಲ್ ಅಪ್ಪು, ದಿನೇಶ್‌ನಾಯರ್, ಪ್ರದೀಪ್ ರೈ, ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಪುರಸಭೆ ಮಾಜಿ ಅಧ್ಯಕ್ಷ ಕೂತಂಡ ಸಚಿನ್, ಸ್ಥಳೀಯ ಮಸೀದಿಯ ಕಾರ್ಯದರ್ಶಿಗಳಾದ ಸೈನುದ್ದೀನ್, ಖಾಶಿಂ, ಜುನೈದ್ ಮುಂತಾದವರು ಉಪಸ್ಥಿತರಿದ್ದರು.

# ಮಾವಿನ ಮರದಿಂದ ಬಿದ್ದು, ಪೊಲೀಸ್ ಗನ್‌ಮ್ಯಾನ್ ಸಾವು



ಮಡಿಕೇರಿ, ಆ.6– ಮಡಿಕೇರಿ ಕ್ಷೇತ್ರದ ಮಾಜಿ ಶಾಸಕ, ಮಾಜಿ ಕ್ರೀಡಾ ಸಚಿವ ಅಪ್ಪಚ್ಚು ರಂಜನ್ ಅವರ ಗನ್‌ಮ್ಯಾನ್ ಲೋಕೇಶ್ ಪೂಜಾರಿ(35) ಅವರು ಮಾವಿನ ಮರದಿಂದ ಬಿದ್ದು ಮೃತಪಟ್ಟಿದ್ದಾರೆ.

ಭಾನುವಾರ ಬೆಳಗ್ಗೆ 7 ಗಂಟೆಯ ವೇಳೆಗೆ ಸುಂಟಿಕೊಪ್ಪ ಕಾನ್‌ಬೈಲ್‌ನಲ್ಲಿರುವ ತಮ್ಮ ತೋಟದಲ್ಲಿ ಮಾವಿನ ಮರ ಏರಿ ಅದರ ಕೊಂಬೆಗೆ ಕಸಿ ಮಾಡುವ ಸಂದರ್ಭ ರಕ್ತದೊತ್ತಡ ಕಡಿಮೆಯಾಗಿ 50 ಅಡಿ ಎತ್ತರದಿಂದ ನೆಲಕ್ಕೆ ಬಿದ್ದದ್ದಾರೆ. ತಕ್ಷಣವೇ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತಾದರೂ ಆ ವೇಳೆಗೆ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಮೃತ ಲೋಕೇಶ್ ಪತ್ನಿ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಲಿದೆ. ಕೊಡಗು ಜಿಲ್ಲಾ ಪೊಲೀಸ್ ಇಲಾಖೆಯಲ್ಲಿ ಸಶಸ್ತ್ರ ಪಡೆಯ ಸಿಬ್ಬಂದಿಯಾಗಿದ್ದ ಲೋಕೇಶ್ ಕಳೆದ 15 ವರ್ಷಗಳ ಕಾಲ ನಿರಂತರವಾಗಿ ಮಾಜಿ ಸಚಿವ ಅಪ್ಪಚ್ಚು ರಂಜನ್ ಅವರ ಗನ್‌ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಈ ಘಟನೆ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

**ಅಪ್ಪಚ್ಚು ರಂಜನ್ ಕಂಬನಿ:** ಜಿಲ್ಲಾಸ್ಪತ್ರೆಗೆ ಆಗಮಿಸಿದ ಮಾಜಿ ಸಚಿವ ಅಪ್ಪಚ್ಚು ರಂಜನ್ ತಮ್ಮ ಪರಮಾಪ್ತ ಗನ್‌ಮ್ಯಾನ್ ಅಗಲಿಕೆಗೆ ಕಂಬನಿ ಮಿಡಿದರು. 2018ರಲ್ಲಿ ಭೂಕುಸಿತವಾದಾಗ ವಿಕೋಪದ ಸಂದರ್ಭ ಮುನ್ನುಗ್ಗುತ್ತಾ ಸಾಗುತ್ತಿದ್ದರು. ಮೊದಲು ವಿಕೋಪದ ಸ್ಥಳಕ್ಕೆ ಹೆಜ್ಜೆ ಹಾಕಿ ನಂತರ ಸುರಕ್ಷಿತ ಎಂದು ಅರಿತ ಬಳಿಕವೇ ನನ್ನನ್ನು ಲೋಕೇಶ್ ಬರ ಹೇಳುತ್ತಿದ್ದರು ಎಂದು ಅಪ್ಪಚ್ಚು ರಂಜನ್ ಕಂಬನಿ ಮಿಡಿದರು. ಕೆ.ಜಿ. ಬೋಪಯ್ಯ ಮಾತನಾಡಿ, ಲೋಕೇಶ್ ಪ್ರಾಮಾಣಿಕ ವ್ಯಕ್ತಿಯಾಗಿದ್ದು, ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಲೋ ಬಿಪಿಯಿಂದಾಗಿ ಮರದ ಮೇಲಿನಿಂದ ಬಿದ್ದು ಪ್ರಾಣ ಕಳೆದುಕೊಂಡರು. ಉತ್ತಮ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ ಎಂದು ಸಂತಾಪ ಸೂಚಿಸಿದರು. ಅಪ್ಪಚ್ಚು ರಂಜನ್ ಅವರ ಕುಟುಂಬ ಸದಸ್ಯನಂತೆ ಇದ್ದ ಲೋಕೇಶ್ ಅಗಲಿಕೆಯ ನೋವಿನಲ್ಲಿ ಅಳುತ್ತಿದ್ದ ರಂಜನ್ ಅವರನ್ನು ಕೆ.ಜಿ. ಬೋಪಯ್ಯ ಸಂತೈಸಿದರು. ಪೊಲೀಸ್ ಇಲಾಖೆ ಸಿಬ್ಬಂದಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಪಕ್ಷ ಬೇಧ ಮರೆತು ಆಸ್ಪತ್ರೆಗೆ ಆಗಮಿಸಿ ಲೋಕೇಶ್ ಅವರ ಅಂತಿಮ ದರ್ಶನ ಪಡೆದರು.

# ಚಾ.ನಗರ: ಗೃಹಜ್ಯೋತಿಗೆ 2.26 ಲಕ್ಷ ನೋಂದಣಿ

## • ಆ.1ರಿಂದಲೇ ಗ್ರಾಹಕರಿಗೆ ಉಚಿತ ಬಿಲ್ • ನೋಂದಣಿ ಪ್ರಕ್ರಿಯೆ ಮುಂದುವರಿಕೆ




ಚಾಮರಾಜನಗರ, ಆ.6– ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆಗೆ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 2.26 ಲಕ್ಷಕ್ಕೂ ಹೆಚ್ಚು ಗ್ರಾಹಕರು ನೋಂದಣಿಯಾಗಿದ್ದಾರೆ.

ಜಿಲ್ಲಾದ್ಯಂತ ಜು.18ರಿಂದ ಗೃಹಜ್ಯೋತಿ ಯೋಜನೆ ನೋಂದಣಿ ಪ್ರಕ್ರಿಯೆ ಆರಂಭವಾಗಿದ್ದು, ಗ್ರಾಹಕರು ಅಗತ್ಯ ದಾಖಲೆಗಳೊಂದಿಗೆ ಯೋಜನೆಗೆ ನೋಂದಣಿಯಾಗುತ್ತಿದ್ದಾರೆ. ಈ ಯೋಜನೆಯಡಿ ಅರ್ಜಿ ಸಲ್ಲಿಸಿದವರಿಗೆ ಉಚಿತ ಇಲ್ಲವೇ, ವಿನಾಯಿತಿ ದರದ ವಿದ್ಯುತ್ ಬಿಲ್ ವಿತರಣೆ ಕಾರ್ಯವನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಆರಂಭಿಸಿದ್ದು, ಜಿಲ್ಲೆಯ 49 ಸಾವಿರಕ್ಕೂ ಹೆಚ್ಚು ಗ್ರಾಹಕರು ಈ ಯೋಜನೆಗೆ ನೋಂದಾಯಿಸಿಕೊಳ್ಳಬೇಕಿದೆ.

**ಶೂನ್ಯ ಬಿಲ್ ವಿತರಣೆ:** ಸೆಸ್ಕ್ ಸಿಬ್ಬಂದಿ ಈಗಾಗಲೇ ಆ.1ರಿಂದಲೇ ಕೆಲವೆಡೆ ವಿದ್ಯುತ್ ಬಿಲ್ ನೀಡುತ್ತಿದ್ದಾರೆ. 200 ಯೂನಿಟ್ ಒಳಗೆ ವಿದ್ಯುತ್ ಬಳಸಿದ ಬಹುತೇಕರಿಗೆ ಶೂನ್ಯ ದರದ ಬಿಲ್ ನೀಡಲಾಗುತ್ತಿದೆ. ಕೆಲವರಿಗೆ ಹಳೇ ಬಾಕಿ, ಬಡ್ಡಿ ಇತರೆ ಶುಲ್ಕ ಸೇರಿಸಿ ಬಿಲ್ ನೀಡಲಾಗಿದ್ದು, ಅದರಲ್ಲಿ ಜುಲೈ ತಿಂಗಳ ವಿದ್ಯುತ್ ಬಳಕೆ ಶುಲ್ಕವನ್ನು 0 ಎಂದು ತೋರಿಸಲಾಗಿದೆ. ಇನ್ನೂ ಕೆಲವರಿಗೆ 10, 20, 40... ಹೀಗೆ ಅಲ್ಪ ಮೊತ್ತದ ಬಿಲ್‌ಗಳು ಬಂದಿವೆ.

ಗ್ರಾಹಕರು ಕಳೆದ ಒಂದು ತಿಂಗಳ ಅವಧಿಯಲ್ಲಿ ಬಳಸಿದ ವಿದ್ಯುತ್ ಯೂನಿಟ್ ಹಾಗೂ ಅದಕ್ಕೆ ತಗುಲುವ ಶುಲ್ಕವನ್ನು ಬಿಲ್‌ನಲ್ಲಿ ಉಪಮೊತ್ತ ಎಂದು ನಮೂದಿಸಲಾಗಿದೆ. ಆದರೆ ಕೊನೆಯಲ್ಲಿ ಪಾವತಿಸಬೇಕಾದ ಮೊತ್ತದಲ್ಲಿ ಈ ಹಣವು ಶೂನ್ಯವಾಗಿದೆ.

**2.75 ಲಕ್ಷ ಗೃಹಬಳಕೆ ಮೀಟರ್:** ಜಿಲ್ಲೆಯಲ್ಲಿ 2,75,859 ಗೃಹ ಬಳಕೆ ವಿದ್ಯುತ್ ಮೀಟರ್ ಸಂಪರ್ಕಗಳಿವೆ. ಈ ಪೈಕಿ 2,26,508 ಗ್ರಾಹಕರು ಯೋಜನೆಗೆ ನೋಂದಾಯಿಸಿಕೊಂಡಿದ್ದು, 49,351 ಗ್ರಾಹಕರು ನೋಂದಣಿ ಮಾಡಿಕೊಳ್ಳಬೇಕಿದೆ. ಈಗಾಗಲೇ ನೋಂದಣಿ ಮಾಡಿಕೊಂಡಿರುವವರಿಗೆ ಆ.1ರಿಂದ ಶೂನ್ಯ ಮೊತ್ತದ ಬಿಲ್ ನೀಡಲಾಗುತ್ತಿದೆ. ಮುಂದೆ ನೋಂದಣಿ ಮಾಡಿಸಿಕೊಂಡ ವರಿಗೆ ಮುಂದಿನ ತಿಂಗಳಿನಿಂದ ವಿನಾಯಿತಿ ಸಿಗಲಿದೆ ಎಂದು ಚೆಸ್ಕಾಂ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಅರ್ಜಿ ಸಲ್ಲಿಕೆ ಪ್ರಕ್ರಿಯೆ:** ಗೃಹಜ್ಯೋತಿ ಯೋಜನೆ ನೋಂದಣಿ ಪ್ರಕ್ರಿಯೆ ಈಗಲೂ ಚಾಲನೆಯಲ್ಲಿದೆ. ಸಾರ್ವಜನಿಕರು ತಮ್ಮ ಹತ್ತಿರದ ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರ, ಸೆಸ್ಕ್ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಯೋಜನೆ ನೋಂದಣಿ ಪ್ರಕ್ರಿಯೆ ಸರಳವಾಗಿರುವುದರಿಂದ ಭೌತಿಕವಾಗಿ ಯಾವುದೇ ದಾಖಲೆ ನೀಡದೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಖಾತೆ ಸಂಖ್ಯೆ, ಆಧಾರ್ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆಗಳನ್ನು ನಮೂದಿಸುವ ಮೂಲಕ ಸುಲಭವಾಗಿ ನೋಂದಣಿ ಮಾಡಬಹುದಾಗಿದೆ.

**ಯಾವುದೇ ಗಡುವಿಲ್ಲ:** ಸೇವಾ ಸಿಂಧು ಪೋರ್ಟಲ್ ಮೂಲಕ ಯೋಜನೆಗೆ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ನೋಂದಣಿಗೆ ಯಾವುದೇ ಗಡುವು ನಿಗದಿಪಡಿಸಲಾಗಿಲ್ಲ. ಆದ್ದರಿಂದ ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

# ಹೊತ್ತಿ ಉರಿದ ಎಲೆಕ್ಟ್ರಿಕ್ ಸ್ಕೂಟರ್



ಚಾಮರಾಜನಗರ, ಆ.6– ಚಾರ್ಜ್ ಮಾಡಿ ಮನೆ ಮುಂದೆ ನಿಲ್ಲಿಸಿದ್ದ ಎಲೆಕ್ಟ್ರಿಕ್ ಬೈಕ್ ಸ್ಟಾರ್ಟ್ ಮಾಡಿದ ವೇಳೆ ಏಕಾಏಕಿ ಬೆಂಕಿ ಹೊತ್ತಿಕೊಂಡು ಧಗಧಗನೆ ಹೊತ್ತಿ ಉರಿದ ಘಟನೆ ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಬಸವರಾಜಪ್ಪ ಎಂಬುವರಿಗೆ ಸೇರಿದ ಬೈಕ್ ಇದಾಗಿದ್ದು, ಚಾರ್ಜ್ ಆದ ಬಳಿಕ ಬೈಕ್ ಸ್ಟಾರ್ಟ್ ಮಾಡಿದ ವೇಳೆ ಹೊಗೆ ಕಾಣಿಸಿಕೊಂಡಿದೆ. ಈ ವೇಳೆ ಹೊಗೆ ಕಂಡು ಆತಂಕದಿಂದ ಬಸವರಾಜಪ್ಪ ಹಿಂದೆ ಸರಿದಿದ್ದು, ಕ್ಷಣಾರ್ಧದಲ್ಲೇ ಬೆಂಕಿ ಜ್ವಾಲೆ ಕಾಣಿಸಿಕೊಂಡು ಹೊತ್ತಿ ಉರಿದಿದೆ. ಅದೃಷ್ಟವಶಾತ್ ಪಕ್ಕದಲ್ಲೇ ನಿಲ್ಲಿಸಿದ್ದ ಮತ್ತೊಂದು ಬೈಕ್ ಹಾಗೂ ಮನೆಗೆ ಬೆಂಕಿ ವ್ಯಾಪಿಸಿಲ್ಲ. ಕೂಡಲೇ, ಕೆಲ ಯುವಕರು ಸೇರಿ ಉರಿಯುತ್ತಿದ್ದ ಬೈಕ್‌ಗೆ ನೀರು ಹಾಕಿ ಬೆಂಕಿ ನಂದಿಸಿದ್ದಾರೆ.

# ಚಾ.ನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಸಂಘ ರಚನೆ



ಚಾಮರಾಜನಗರ, ಆ.6– ಚಾಮರಾಜನಗರ ತಾಲೂಕು ಪತ್ರಿಕಾ ಪ್ರತಿನಿಧಿಗಳ ಹಿತರಕ್ಷಣೆ ಹಾಗೂ ಸಂಘಟನೆ ದೃಷ್ಟಿಯಿಂದ ಚಾ.ನಗರ ತಾಲೂಕು ವ್ಯಾಪ್ತಿಯ ವಿವಿಧ ಪತ್ರಿಕೆಗಳ 50ಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಒಳಗೊಂಡ ಸಂಘ ರಚನೆ ಮಾಡಲಾಯಿತು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಪತ್ರಿಕಾ ಪ್ರತಿನಿಧಿಗಳ 2ನೇ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರು ಸಂಘ ರಚನೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷರಾಗಿ ದೊಡ್ಡರಾಯಪೇಟೆ ಸಿ.ಪುರುಷೋತ್ತಮ್, ಪ್ರಧಾನ ಕಾರ್ಯದರ್ಶಿಯಾಗಿ ಎನ್.ಅಕ್ಷಯ್, ಗೌರವಾಧ್ಯಕ್ಷರಾಗಿ ಹೆಚ್.ಎಸ್. ಚಂದ್ರಶೇಖರ್, ಖಜಾಂಚಿಯಾಗಿ ಎಸ್.ಪ್ರತಾಪ್ ಚಾ.ನಗರ ಅವರನ್ನು ನೇಮಕ ಮಾಡಲಾಯಿತು.


ಉಪಾಧ್ಯಕ್ಷರಾಗಿ ಹೆಗ್ಗವಾಡಿ ಎಸ್. ಮಹದೇವ್, ಉಡಿಗಾಲ ಶೇಖರ್, ದೇಮಹಳ್ಳಿ ಶಿವಕುಮಾರ್, ಕಾರ್ಯದರ್ಶಿಗಳಾಗಿ ನವೀನ್‌ಕುಮಾರ್ ರಾಮಸಮುದ್ರ, ಸಹ ಕಾರ್ಯದರ್ಶಿಯಾಗಿ ಎಲ್. ಶಿವಲಿಂಗಮೂರ್ತಿ, ಕಾನೂನು ಸಲಹೆಗಾರರಾಗಿ ಚಂದ್ರು ಚಾ.ನಗರ, ಪತ್ರಿಕಾ ಕಾರ್ಯದರ್ಶಿಯಾಗಿ ಹರವೆ ಮಹೇಶ್ ಆಯ್ಕೆಯಾದರು.

ನಿರ್ದೇಶಕರಾಗಿ ಪತ್ರಿಕಾ ಪ್ರತಿನಿಧಿಗಳಾದ ಪ್ರಕಾಶ್ ಬೆಲ್ಲದ್, ಆರ್.ಎನ್. ಸಿದ್ದಲಿಂಗಸ್ವಾಮಿ, ಎಂ.ರೇಣುಕೇಶ್, ಎಂ.ಲಿಂಗಪ್ಪ ಶ್ರೀನಿವಾಸನಾಯಕ, ಮಂಜುನಾಥ ಆರಾಧ್ಯ ಎಸ್. ಸಾಗರ್, ಎಂ.ಆರ್.ಪ್ರಕಾಶ್, ಸಿದ್ದಪ್ಪಾಜಿ, ಸಿದ್ದರಾಜು, ಬದನಗುಪ್ಪೆ ಮಲ್ಲಣ್ಣ, ನಾಗೇಂದ್ರಸ್ವಾಮಿ, ಪರಶಿವಪ್ಪ, ಗಿರೀಶ್, ಸಿದ್ದರಾಜು, ಮಹದೇವಯ್ಯ, ಮಣಿಕಂಠ, ಸಿದ್ದು, ಮಹದೇವಸ್ವಾಮಿ ಅವರನ್ನು ನೇಮಕ ಮಾಡಲಾಯಿತು.

# ಒಂಟಿ ಸಲಗ ದಾಳಿ: ಇಬ್ಬರು ರೈತರಿಗೆ ತೀವ್ರ ಗಾಯ

ಹನೂರು, ಆ.6– ಒಂಟಿ ಸಲಗ ದಾಳಿ ನಡೆಸಿದ ಪರಿಣಾಮ ಇಬ್ಬರು ರೈತರು ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಮಲೆಮಹದೇಶ್ವರ ಬೆಟ್ಟದ ವನ್ಯಧಾಮದಲ್ಲಿ ಭಾನುವಾರ ನಡೆದಿದೆ. ದಿನ್ನಳ್ಳಿ ಗ್ರಾಮದ ರೈತರಾದ ಸಿದ್ದಮರಿಯಪ್ಪ(65) ಹಾಗೂ ಗಿರಿಯಪ್ಪ(55) ಗಾಯಗೊಂಡವರು. ಇವರಿಬ್ಬರೂ ಅರಣ್ಯದೊಳಗೆ ಹಸುಗಳನ್ನು ಮೇಯಿಸುತ್ತಿದ್ದ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿ ಗಾಯಗೊಳಿಸಿದೆ. ತೀವ್ರ ಗಾಯಗೊಂಡ ಇವರಿಬ್ಬರನ್ನು ಚಿಕಿತ್ಸೆಗಾಗಿ ರಾಮಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

# ವೈ.ಕೆ.ಮೋಳೆಯಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆ: ಆತಂಕ



ಯಳಂದೂರು, ಆ.6– ತಾಲೂಕಿನ ವೈ.ಕೆ.ಮೋಳೆ ಗ್ರಾಮದ ರೈತರ ಜಮೀನಿನಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದ್ದು, ಇದರಿಂದ ಈ ಭಾಗದ ರೈತರು ಆತಂಕಗೊಂಡಿದ್ದಾರೆ.

ತಾಲೂಕಿನ ಕೆಸ್ತೂರು, ಮಲ್ಲಿಗಹಳ್ಳಿ, ಕಟ್ನವಾಡಿ ಸೇರಿದಂತೆ ಕುಂತೂರು ಬೆಟ್ಟದ ಬಂಡೆ ಬಳಿ ಚಿರತೆ ಸೆರೆ ಹಿಡಿದು 3 ದಿನ ಕಳೆದಿಲ್ಲ ಆಗಲೇ ವೈ.ಕೆ.ಮೋಳೆ, ಚಂಗಚಹಳ್ಳಿ, ಹೆಗ್ಗೆಡೆಹುಂಡಿ, ಅಂಬಳೆ ಗ್ರಾಮಗಳ ರೈತರ ಜಮೀನು ಹಾಗೂ ಕೆರೆಗಳ ಬಳಿ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದ್ದು, ರೈತರು ಜಮೀನಿಗೆ ತೆರಳಿ ಕೆಲಸ ಮಾಡಲು ಭಯಪಡುತ್ತಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದರು. ಈ ವೇಳೆ ಆರ್‌ಎಫ್‌ಓ ಲೋಕೇಶ್ ಮೂರ್ತಿ ಬೋನ್ ಇಟ್ಟು ಚಿರತೆ ಸೆರೆ ಹಿಡಿಯಲಾಗುವುದು ಎಂದು ತಿಳಿಸಿದರು.

# ಹನೂರಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ

## ಇದುವರೆಗೂ 57 ಶಿಬಿರಗಳು ಯಶಸ್ವಿ: ಜನಧ್ವನಿ ಬಿ.ವೆಂಕಟೇಶ್

ಹನೂರು, ಆ.6– ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ನಿರಂತರವಾಗಿ ಹಮ್ಮಿಕೊಳ್ಳಲಾಗಿದ್ದ 57 ಕಣ್ಣಿನ ತಪಾಸಣಾ ಶಿಬಿರಗಳು ಯಶಸ್ವಿಯಾಗಿದೆ ಎಂದು ರಾಜ್ಯ ಓಬಿಸಿ ಕಾರ್ಯಕಾರಿಣಿ ಸದಸ್ಯ ಜನಧ್ವನಿ ಬಿ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಭಾನುವಾರ ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಜಿಲ್ಲಾ ಅಂಧತ್ವ ನಿವಾರಣ ಸಂಸ್ಥೆ, ಜನಧ್ವನಿ ಬಿ.ವೆಂಕಟೇಶ್ ಅಭಿಮಾನಿ ಬಳಗ ಹಾಗೂ ಬಿಜೆಪಿ ಓಬಿಸಿ ಮೋರ್ಚಾ ವತಿಯಿಂದ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಹನೂರು ತಾಲೂಕಿನ ಸಾರ್ವಜನಿಕರ ಅನುಕೂಲಕ್ಕಾಗಿ ಇದುವರೆಗೂ 57 ಉಚಿತ ಕಣ್ಣಿನ ತಪಾಸಣಾ ಶಿಬಿರಗಳನ್ನು ನಡೆಸಲಾಗಿದೆ. ಸುಮಾರು 7 ಸಾವಿರಕ್ಕೂ ಹೆಚ್ಚು ಜನರು ಶಿಬಿರದ ಪ್ರಯೋಜನ ಪಡೆದಿದ್ದು, 3 ಸಾವಿರಕ್ಕೂ ಹೆಚ್ಚು ಜನರಿಗೆ



ಕಣ್ಣಿನ ಆಪರೇಷನ್ ಮಾಡಲಾಗಿದೆ. ಎಲ್ಲರೂ ಆರೋಗ್ಯವಂತರಾಗಿದ್ದು, ಶಿಬಿರಕ್ಕೆ ಆಗಮಿಸಿ ವೈದ್ಯರಿಂದ ಸಲಹೆ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಮುಂದಿನ ತಿಂಗಳು ಕಾಡಂಚಿನ ಹೂಗ್ಯಂ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ. ರಾಮಾಪುರ, ಕೌದಳ್ಳಿ, ಮಾರ್ಟಳ್ಳಿ ಜಿಪಂ ವ್ಯಾಪ್ತಿಯ ಸಾರ್ವಜನಿಕರು ಸದುಪಯೋಗ ಪಡೆಯಬೇಕು ಎಂದು ಮನವಿ ಮಾಡಿದರು. ಪ್ರತಿಯೊಬ್ಬರೂ ಆರೋಗ್ಯವಂತರಾಗಿರಲು ಹಾಗೂ ಕಣ್ಣಿನ ರಕ್ಷಣೆ ಮಾಡಿಕೊಳ್ಳಲು ದೃಷ್ಟಿ ವೃದ್ಧಿಸಬಲ್ಲ ಆಹಾರ ಪದಾರ್ಥಗಳು, ತರಕಾರಿ ಸೇವನೆ ಮಾಡುವ ಮೂಲಕ ಕಣ್ಣಿನ ಹಾಗೂ ಆರೋಗ್ಯದ ಕಡೆ ಹೆಚ್ಚಿನ ಒತ್ತು ನೀಡಬೇಕೆಂದು ಸಲಹೆ ನೀಡಿದರು.

**ಮಾನವೀಯತೆ ಮೆರೆದ ಜನಧ್ವನಿ ಬಿ.ವೆಂಕಟೇಶ್:** ದಿನ್ನಳ್ಳಿ ಗ್ರಾಮದ ಮಾಜಿ ಸೈನಿಕ ಸುಭಾಷ್ ನಾಯಕ್ ಅವರಿಗೆ ಕಣ್ಣಿನ ಪೊರೆ ಕಾಣಿಸಿಕೊಂಡಿದ್ದರಿಂದ ಆಪರೇಷನ್ ಮಾಡಬೇಕಿತ್ತು. ಆದರೆ ಜೊತೆಯಲ್ಲಿ ಯಾರು ಇಲ್ಲದಿದ್ದರಿಂದ ನಿಮ್ಮ ಕುಟುಂಬಸ್ಥರನ್ನು ಕರೆತನ್ನಿ ಎಂದು ವೈದ್ಯಾಧಿಕಾರಿಗಳು ತಿಳಿಸಿದ್ದರು.

ಈ ವೇಳೆ ಸ್ಥಳಕ್ಕಾಗಮಿಸಿದ ಜನಧ್ವನಿ ವೆಂಕಟೇಶ್ ಅವರಿಗೆ ನನ್ನ ಜೊತೆ ಕುಟುಂಬಸ್ಥರು ಬಾರದಿರುವುದರಿಂದ ನನ್ನನ್ನು ಆಪರೇಷನ್‌ಗೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ದಯಮಾಡಿ ನನಗೆ ಆಪರೇಷನ್ ಮಾಡಿಸಿ ಎಂದು ಮನವಿ ಮಾಡಿದಾಗ ತಕ್ಷಣ ತಮ್ಮ ಕಚೇರಿ ಸಿಬ್ಬಂದಿಯನ್ನು ಜೊತೆ ಮಾಡಿ ಆಪರೇಷನ್‌ಗೆ ಕಳುಹಿಸಿಕೊಟ್ಟು ಮಾನವೀಯತೆ ಮೆರೆದರು.

ಈ ವೇಳೆ ಶಂಕರ ಕಣ್ಣಿನ ಆಸ್ಪತ್ರೆ ವೈದ್ಯರಾದ ಶ್ರೀಕಂಠ ಮೂರ್ತಿ, ಶಂಕೇಶ್ ಮನೋಲಿ, ಜನಧ್ವನಿ ಬಿ.ವೆಂಕಟೇಶ್ ಕಚೇರಿ ಸಿಬ್ಬಂದಿಗಳಾದ ಲೋಕೇಶ್ ಜತ್ತಿ, ರಾಮಚರಣ್, ಅಪ್ಪು, ಚಿರಂಜೀವಿ, ಮುಖಂಡರಾದ ಮುರುಗೇಶ್, ವಿಜಿ, ರಾಜು ಸೇರಿದಂತೆ ಇನ್ನಿತರರಿದ್ದರು.

# ರೋಟರಿಯಿಂದ ಕಣ್ಣಿನ ತಪಾಸಣಾ ಶಿಬಿರ

ಚಾಮರಾಜನಗರ, ಆ.6– ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.


ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ 422 ಮಂದಿ ತಪಾಸಣೆ ಮಾಡಿಸಿಕೊಂಡರು. 132 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಲಾಯಿತು.

ರೋಟರಿ ಸಂಸ್ಥೆ ಕಾರ್ಯದರ್ಶಿ ಅಬ್ದುಲ್ ಅಜೀಜ್ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಯೋವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದು ದಿನನಿತ್ಯ ಜೀವನದಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ಅನುಕೂಲ ಕಲ್ಪಿಸಲು ರೋಟರಿ ಸಂಸ್ಥೆ ಪ್ರತಿ ತಿಂಗಳು ಮೊದಲನೆ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಿದ್ದು, ಇದರ ಸದುಪಯೋಗ ಪಡೆಯಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆ ಖಜಾಂಚಿ ಆರ್.ಎಂ.ಸ್ವಾಮಿ, ಎಲ್.ನಾಗರಾಜು, ಸುರೇಶ್, ಶ್ರೀನಿವಾಸ್, ಅಶೋಕ್, ಕಮಲ್ ರಾಜು, ಪ್ರಭಾಕರ್, ಪಿಆರ್‌ಓ ವಿಜಯಕಾಂತ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.



## ಹೋರಾಟಗಾರ, ಕ್ರಾಂತಿಕಾರಿ ಗಾಯಕ ಗದ್ದರ್ ಇನ್ನಿಲ್ಲ



**ಹೈದರಾಬಾದ್:** ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ತೆಲಂಗಾಣದ ಖ್ಯಾತ ಜಾನಪದ ಗಾಯಕ, ಹೋರಾಟಗಾರ ಗದ್ದರ್ ಅವರು ಭಾನುವಾರ ನಿಧನರಾಗಿದ್ದಾರೆ. ಗದ್ದರ್ ಎಂದೇ ಖ್ಯಾತ ಪಡೆದಿದ್ದ ಕ್ರಾಂತಿಕಾರಿ ಗಾಯಕ 77 ವರ್ಷದ ಗುಮ್ಮಡಿ ವಿಠಲ್ ರಾವ್ ಅವರು ಕಳೆದ ಕೆಲವು ದಿನಗಳಿಂದ ಶ್ವಾಸಕೋಶ ಮತ್ತು ಮೂತ್ರದ ಸಮಸ್ಯೆಯಿಂದ ಬಳಲುತ್ತಿದ್ದರು. ಚಿಕಿತ್ಸೆಗಾಗಿ ಅಪೋಲೋ ಸ್ಪೆಕ್ಟ್ರಾ ಆಸ್ಪತ್ರೆ ದಾಖಲಾಗಿದ್ದರು. ಆದರೆ ಇಂದು ಚಿಕಿತ್ಸೆ ಫಲಿಸದೆ ವಿಧಿವಶರಾಗಿದ್ದಾರೆ.

ತೀವ್ರ ಹೃದ್ರೋಗದಿಂದ ಬಳಲುತ್ತಿದ್ದ ಅವರು ಜು.20ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಆಗಸ್ಟ್ 3ರಂದು ಅವರಿಗೆ ಬೈಪಾಸ್ ಸರ್ಜರಿ ಮಾಡಲಾಗಿತ್ತು ಮತ್ತು ಚೇತರಿಸಿಕೊಂಡಿದ್ದಾರೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿತ್ತು. ಆದಾಗ್ಯೂ, ಅವರು ಶ್ವಾಸಕೋಶ ಮತ್ತು ಮೂತ್ರದ ಸಮಸ್ಯೆಯಿಂದ ಬಳಲುತ್ತಿದ್ದರಿಂದ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆ ಹೇಳಿದೆ. 1948ರಲ್ಲಿ ಜನಿಸಿದ ಗುಮ್ಮಡಿ ವಿಠ್ಠಲ್ ರಾವ್ ಅವರು, 2010ರವರೆಗೆ ನಕ್ಸಲೀಯ ಚಳವಳಿಯಲ್ಲಿ ಸಕ್ರಿಯರಾಗಿದ್ದರು. ನಂತರ ಅವರು ತೆಲಂಗಾಣ ಚಳವಳಿಗೆ ಸೇರ್ಪಡೆಗೊಂಡರು. ತೆಲಂಗಾಣದಲ್ಲಿ ಹಿಂದುಳಿದ ಜಾತಿಗಳು ಮತ್ತು ದಲಿತರ ಹಕ್ಕುಗಳಿಗಾಗಿ ಗದ್ದರ್ ಹೋರಾಟ ಮಾಡಿದ್ದರು. ತಮ್ಮ ಹಾಡುಗಳ ಮೂಲಕವೇ ಅಪಾರ ಅಭಿಮಾನಿಗಳನ್ನು ಪಡೆದು, ಹೆಚ್ಚಿನ ಜನಮನ್ನಣೆ ಗಳಿಸಿದ್ದರು.

ಒಂದನೇ ಪುಟದಿಂದ

## ನವೀಕರಣಕ್ಕೆ ಶಂಕುಸ್ಥಾಪನೆ

ಮಧ್ಯಪ್ರದೇಶದಲ್ಲಿ 34, ಅಸ್ಸಾಂನಲ್ಲಿ 32, ಒಡಿಶಾದಲ್ಲಿ 25, 22 ಸೇರಿದಂತೆ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿವೆ. ಪಂಜಾಬ್‌ನಲ್ಲಿ, ಗುಜರಾತ್ ಮತ್ತು ತೆಲಂಗಾಣದಲ್ಲಿ 21–21, ಜಾರ್ಖಂಡ್‌ನಲ್ಲಿ 20, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ 18–18, ಹರಿಯಾಣದಲ್ಲಿ 15, ಕರ್ನಾಟಕದಲ್ಲಿ 13 ನಿಲ್ದಾಣಗಳು ಇರಲಿವೆ.

ಭಾರತದಲ್ಲಿನ ಸುಮಾರು 1,300 ಪ್ರಮುಖ ರೈಲು ನಿಲ್ದಾಣಗಳನ್ನು ಈಗ ಅಮೃತ್ ಭಾರತ್ ರೈಲು ನಿಲ್ದಾಣವಾಗಿ ಅಭಿವೃದ್ಧಿಪಡಿಸಲಾಗುವುದು. ಅವುಗಳನ್ನು ಆಧುನಿಕ ರೀತಿಯಲ್ಲಿ ಮರು–ಅಭಿವೃದ್ಧಿಪಡಿಸಲಾಗುವುದು. ಇವುಗಳಲ್ಲಿ 508 ಅಮೃತ್ ಭಾರತ್ ರೈಲು ನಿಲ್ದಾಣಗಳ ಪುನರಾಭಿವೃದ್ಧಿಯ ಕೆಲಸ ಇಂದು ಆರಂಭವಾಗಿದೆ. ಈ 508 ಅಮೃತ್ ಭಾರತ್ ಸ್ಟೇಷನ್‌ಗಳ ಪುನರಾಭಿವೃದ್ಧಿಗೆ ಸುಮಾರು 25,000 ಕೋಟಿ ಖರ್ಚು ಮಾಡಲಾಗುವುದು. ಇದು ಮೂಲ ಸೌಕರ್ಯ, ರೈಲ್ವೇ ಮತ್ತು ಮುಖ್ಯವಾಗಿ ದೇಶದ ಸಾಮಾನ್ಯ ಜನರಿಗೆ ಬಹಳ ಸಹಾಯವಾಗಲಿದೆ ಎಂದು ಶಂಕುಸ್ಥಾಪನೆ ನೆರವೇರಿಸಿ ಪ್ರಧಾನಿ ಹೇಳಿದರು. ಇಂದು ಇಡೀ ವಿಶ್ವದ ಗಮನ ಭಾರತದತ್ತ ನೆಟ್ಟಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಿದೆ. ಭಾರತದ ಬಗೆಗಿನ ವಿಶ್ವ ದೃಷ್ಟಿಕೋನ ಬದಲಾಗಿದೆ. ಇದರ ಹಿಂದೆ ಎರಡು ಪ್ರಮುಖ ಕಾರಣಗಳಿವೆ – ಸುಮಾರು 30 ವರ್ಷಗಳ ನಂತರ ಭಾರತೀಯರು ಪೂರ್ಣ ಬಹುಮತದ ಸರ್ಕಾರವನ್ನು ತಂದರು ಎರಡನೆಯದಾಗಿ ಪೂರ್ಣ ಬಹುಮತದ ಸರ್ಕಾರವು ಪ್ರಮುಖ ನಿರ್ಧಾರಗಳನ್ನು ತೆಗೆದು ಕೊಂಡಿತು ಮತ್ತು ಸವಾಲುಗಳಿಗೆ ಶಾಶ್ವತ ಪರಿಹಾರಕ್ಕಾಗಿ ನಿರಂತರವಾಗಿ ಶ್ರಮಿಸಿತು ಎಂದರು.

**ಸ್ವದೇಶಿ ಚಳವಳಿ:** ನಾಳೆ ಆಗಸ್ಟ್ 7ರಂದು ದೇಶವು ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸುತ್ತದೆ–ಸ್ವದೇಶಿ ಚಳುವಳಿಗೆ ಸಮರ್ಪಿತವಾದ ದಿನ. ಪ್ರತಿಯೊಬ್ಬ ಭಾರತೀಯನಿಗೂ, 7ನೇ ಆಗಸ್ಟ್ 'ಲೋಕಲ್ ಫಾರ್ ವೋಕಲ್' ಎಂಬ ನಿರ್ಣಯವನ್ನು ನೆನಪಿಸಿಕೊಳ್ಳುವ ದಿನವಾಗಿದೆ.

ಆಗಸ್ಟ್ 9 ಐತಿಹಾಸಿಕ ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾದ ದಿನ. ಮಹಾತ್ಮಾ ಗಾಂಧಿಯವರು ಕ್ವಿಟ್ ಇಂಡಿಯಾ ಚಳವಳಿ ನೀಡಿದರು. ಭಾರತ ಬಿಟ್ಟು ತೊಲಗಿ ಚಳವಳಿಯು ಸ್ವಾತಂತ್ರ್ಯವನ್ನು ಪಡೆಯುವತ್ತ ಭಾರತದ ಮೆಟ್ಟಿಲುಗಳಲ್ಲಿ ಹೊಸ ಶಕ್ತಿಯನ್ನು ತುಂಬಿತು. ಇದರಿಂದ ಪ್ರೇರಿತರಾಗಿ ಇಂದು ಇಡೀ ದೇಶವೇ ಎಲ್ಲ ಅನಿಷ್ಟಗಳಿಗೂ 'ಕ್ವಿಟ್ ಇಂಡಿಯಾ' ಎನ್ನುತ್ತಿದೆ. ಎಲ್ಲೆಡೆ ಒಂದೇ ಧ್ವನಿ ಇದೆ – 'ಭ್ರಷ್ಟಾಚಾರ, ಭಾರತ ಬಿಟ್ಟು ತೊಲಗಿ. ರಾಜವಂಶ, ಭಾರತ ಬಿಟ್ಟು ತೊಲಗಿ. ಸಮಾಧಾನ, ಭಾರತ ಬಿಟ್ಟು ತೊಲಗಿ' ಎಂದು ನರೇಂದ್ರ ಮೋದಿ ಹೇಳಿದರು.

## ರೈಲು ಪ್ರಯಾಣ ದರ ಏರಿಕೆ ಇಲ್ಲ

1,300 ಪ್ರಧಾನ ನಿಲ್ದಾಣಗಳನ್ನು 'ಅಮೃತ್ ಭಾರತ್ ನಿಲ್ದಾಣಗಳು' ಎಂದು ಮರು ಅಭಿವೃದ್ಧಿ ಪಡಿಸುವ ಯೋಜನೆಯನ್ನು ರೈಲ್ವೇಸ್ ಕಲ್ಪಿಸಿದೆ ಎಂದರು. ಅಲ್ಲದೆ ಈ ಯೋಜನೆಗೆ ಯಾವುದೇ ರಾಜ್ಯದ ವಿರುದ್ಧ ತಾರತಮ್ಯ ಮಾಡಿಲ್ಲ. ಮುಂದಿನ ಎರಡು ವರ್ಷಗಳಲ್ಲಿ, ನಾವು ಕೆಲಸದಲ್ಲಿ ಗಣನೀಯ ಪ್ರಗತಿಯನ್ನು ಕಾಣಲು ಸಾಧ್ಯವಾಗುತ್ತದೆ. ನಾವು ಸಮಾನ ಅಭಿವೃದ್ಧಿಯನ್ನು ನಂಬುತ್ತೇವೆ. ನಾವು ಯೋಜನೆಗೆ ಶಂಕುಸ್ಥಾಪನೆ ಮಾಡುತ್ತೇವೆ ಮತ್ತು ಉದ್ಘಾಟನೆ ಮಾಡುತ್ತೇವೆ ಎಂದು ಪ್ರಧಾನಿ ಮೋದಿಜಿ ಯಾವಾಗಲೂ ಹೇಳುತ್ತಿದ್ದಾರೆ, ನಾವು ಯೋಜನೆಯನ್ನು ಪೂರ್ಣಗೊಳಿಸುವ ವೇಗವನ್ನು ವಿವರಿಸುತ್ತೇವೆ ಎಂದು ಅವರು ಹೇಳಿದರು.

## 400 ಕೆಜಿ ತೂಕದ ಬೀಗ ತಯಾರಿ

ಕೈಯಿಂದ ಮಾಡಿದ ಲಾಕ್ ಅನ್ನು ತಯಾರಿಸಲು ತಿಂಗಳುಗಟ್ಟಲೆ ಶ್ರಮಿಸಿದ್ದಾರೆ. ಲಕ್ಷಾಂತರ ಭಕ್ತರಿಂದ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದೇವೆ ಮತ್ತು ಈ ಬೀಗವನ್ನು ಎಲ್ಲಿ ಬಳಸಬೇಕು ಎಂಬುದನ್ನು ನಂತರ ನಿರ್ಧರಿಸಲಾಗುವುದು ಎಂದು ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪದಾಧಿಕಾರಿಗಳು ತಿಳಿಸಿದ್ದಾರೆ. ಶರ್ಮಾ ಅವರು ಕುಟುಂಬವು ಒಂದು ಶತಮಾನಕ್ಕೂ ಹೆಚ್ಚು ಕಾಲ ಕೈಯಿಂದ ಮಾಡಿದ ಬೀಗಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದೆ. ಶರ್ಮಾ ಅವರು ಕಳೆದ 45 ವರ್ಷಗಳಿಂದ ತಾಲಾ ನಗರಿ ಅಥವಾ ಬೀಗಗಳ ನಗರ ಎಂದು ಕರೆಯಲ್ಪಡುವ ಅಲಿಗಢದಲ್ಲಿ ಬೀಗ ಗಳನ್ನು ತಯಾರಿಸುತ್ತಿದ್ದಾರೆ. ಈಗ ರಾಮ ಮಂದಿರವನ್ನು ಗಮನದಲ್ಲಿಟ್ಟುಕೊಂಡು 10 ಅಡಿ ಎತ್ತರ, 4.5 ಅಡಿ ಅಗಲ, 9.5 ಇಂಚು ದಪ್ಪವಿರುವ ಈ ದೈತ್ಯ ಬೀಗವನ್ನು ನಾಲ್ಕು ಅಡಿ ಕೀಲಿಯೊಂದಿಗೆ ಸ್ವಂತ ಹಣದಿಂದ ನಿರ್ಮಿಸಿದ್ದಾರೆ. ಈ ಬೀಗ ತಯಾರಿಸಲು ಸುಮಾರು ಎರಡು ಲಕ್ಷ ರೂಪಾಯಿ ವೆಚ್ಚವಾಗಿದೆ ಎಂದು ಶರ್ಮಾ ಹೇಳಿದ್ದಾರೆ.

## ಇಂದು ಸ್ಪೀಕರ್ ನಿರ್ಧಾರ ಸಾಧ್ಯತೆ

ಮತ್ತು ಉಳಿದಿರುವುದು ಲೋಕಸಭಾ ಸ್ಪೀಕರ್ ಅವರ ಸಹಿ ಮಾತ್ರ. ಇದು ನಾಳೆ ನಡೆಯಲಿದೆ. ಒಂದು ವೇಳೆ ಸ್ಪೀಕರ್ ಸಹಿ ವಿಳಂಬವಾದಲ್ಲಿ ಕಾಂಗ್ರೆಸ್ ನ್ಯಾಯಾಲಯದ ಮೊರೆ ಹೋಗಲಿದೆ ಎಂದು ಮೂಲಗಳು ತಿಳಿಸಿವೆ. ಮಾನನಷ್ಟ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾದ ನಂತರ ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಿದ ವೇಗದಲ್ಲೇ ಸ್ಪೀಕರ್ ಕಾರ್ಯನಿರ್ವಹಿಸದಿದ್ದರೆ ಸಂಯುಕ್ತ ವಿರೋಧ ಪಕ್ಷಗಳು (ವಿಪಕ್ಷಗಳ ಮೈತ್ರಿಕೂಟ)ವು ಸಂಸತ್ತಿನಲ್ಲಿ ಚರ್ಚೆ ಮಾಡುವ ಪಟ್ಟಿಗೆ ಈ ವಿಷಯವನ್ನು ಸೇರಿಸಲಿವೆ ಮತ್ತು ಈ ಸಂಬಂಧ ಕಲಾಪದಲ್ಲಿ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲಿವೆ ಎಂದು ಹೇಳಲಾಗಿದೆ. ಈ ಹಿಂದೆ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಸದಸ್ಯ, ಲಕ್ಷದ್ವೀಪ್ ಸಂಸದ ಪಿಪಿ ಮೊಹಮ್ಮದ್ ಫೈಜಲ್ ಅವರ ಪ್ರಕರಣದಲ್ಲಿ, ಅವರ ಸಂಸದ ಸ್ಥಾನ ಪುನಃಸ್ಥಾಪನೆಗೆ ಅಂದಿನ ಸ್ಪೀಕರ್ ಒಂದು ತಿಂಗಳ ಕಾಲ ಸಮಯ ತೆಗೆದುಕೊಂಡಿದ್ದರು. 10 ವರ್ಷಗಳ ಜೈಲು ಶಿಕ್ಷೆಯನ್ನು ಪಡೆದ ನಂತರ ಜನವರಿಯಲ್ಲಿ ಪಿಪಿ ಮೊಹಮ್ಮದ್ ಫೈಜಲ್ ಅನರ್ಹಗೊಂಡಿದ್ದರು. ಆದರೆ ಶಿಕ್ಷೆಯನ್ನು ಸ್ಥಗಿತಗೊಳಿಸಿದ ಕೇರಳ ಹೈ ಕೋರ್ಟ್ ಆದೇಶ ಹೊರತಾಗಿಯೂ ಅವರು ತಮ್ಮ ಸಂಸದ ಸ್ಥಾನ ಪುನಃಸ್ಥಾಪನೆಯಾಗದಿದ್ದಾಗ ಸುಪ್ರೀಂಕೋರ್ಟ್‌ಗೆ ಹೋಗಬೇಕಾಯಿತು. ಮಾರ್ಚ್‌ನಲ್ಲಿ ಸುಪ್ರೀಂಕೋರ್ಟ್ ವಿಚಾರಣೆಗೆ ಮುಂಚಿತವಾಗಿ ಅವರನ್ನು ಮತ್ತೆ ಸಂಸದರನ್ನಾಗಿ ಪುನಃ ಸ್ಥಾಪಿಸಲಾಯಿತು.

## ಎಕ್ಸ್‌ಪ್ರೆಸ್ ವೇಗೆ ನುಗ್ಗುವ ವಾಹನಗಳು

ಬಲಕ್ಕೆ ತಿರುಗಿ ಎಕ್ಸ್‌ಪ್ರೆಸ್ ವೇನಲ್ಲಿ ಸಾಗುತ್ತಾರೆ. ಮುಂದೆ ಮಂಡ್ಯ ಕೈಗಾರಿಕಾ ಪ್ರದೇಶಕ್ಕೂ ಮೊದಲೇ ಎಡಕ್ಕೆ ತಿರುಗಿಸಿಕೊಂಡು ಸರ್ವೀಸ್ ರಸ್ತೆಯಲ್ಲೇ ಸಾಗಿ ಮೈಸೂರು ತಲುಪುತ್ತಾರೆ. ಈ ಮೂಲಕ ಬರುವಾಗ ಕೂಡ ಟೋಲ್ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಎಕ್ಸ್‌ಪ್ರೆಸ್ ವೇ ಹಾಗೂ ಸರ್ವೀಸ್ ರಸ್ತೆ ಸಂಧಿಸುವ ಮಾರ್ಗಗಳನ್ನು ಮುಚ್ಚಲು ಸಾಧ್ಯವಿಲ್ಲ. ಒಂದು ವೇಳೆ ಮುಚ್ಚಿದರೆ ಮೈಸೂರು ಹಾಗೂ ಬೆಂಗಳೂರಿನ ಜನರು ಮಾತ್ರ ಎಕ್ಸ್‌ಪ್ರೆಸ್ ವೇನಲ್ಲಿ ಸಾಗಬೇಕಾಗುತ್ತದೆ. ಈ ಕಾರಣದಿಂದ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ರಾಮನಗರ ಜನರು ಕೂಡ ಎಕ್ಸ್‌ಪ್ರೆಸ್ ವೇ ಬಳಸಿಕೊಳ್ಳಲಿ ಎಂದು ಮಧ್ಯೆ ಮಧ್ಯೆ ಹಲವು ಕಡೆ ಸಂಧಿ ಮಾರ್ಗಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ಮೈಸೂರು ಮಾತ್ರವಲ್ಲದೆ ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ ಹಾಗೂ ರಾಮನಗರದ ಜನರು ಕೂಡ ಟೋಲ್ ಪಾವತಿಯಿಂದ ತಪ್ಪಿಸಿಕೊಳ್ಳಲು ಇದೇ ಮಾರ್ಗವನ್ನು ಕಂಡುಕೊಂಡಿದ್ದಾರೆ.

## ಗ್ರಾಪಂ ನೌಕರ ಆತ್ಮಹತ್ಯೆ

ನೀಡುತ್ತಿದ್ದರು. ದಿನಾಂಕ 3–8–2023 ರಂದು ಎಂಎಲ್ಎ ಚಂದ್ರಪ್ಪನವರು, ನಿನ್ನನ್ನು ಅಮಾನತು ಮಾಡುಸುತ್ತೇನೆ ಎಂದು ಬೆದರಿಕೆ ಹಾಕಿದ್ದರು. ಇಓ ರವಿ, ಹಿಂಸೆ ಕೊಡುತ್ತಿದ್ದರು. ಅಲ್ಲದೇ ಗ್ರಾಪಂ ಸದಸ್ಯರಾದ ಮೋಹನ್, ಮೂರ್ತಿ, ಉಗ್ರಪ್ಪ, ಲವ, ರಾಜಪ್ಪ ಕಿರುಕುಳ ನೀಡುತ್ತಿದ್ದು, ನನ್ನ ಸಾವಿಗೆ ಮೇಲೆ ತಿಳಿಸಿರುವ ಎಲ್ಲರೂ ಕಾರಣ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆದರೆ ದೂರಿನಲ್ಲಿ ಶಾಸಕ ಎಂ.ಚಂದ್ರಪ್ಪ, ತಾ.ಪಂ ಇಓ ರವಿ ಹೆಸರು ಉಲ್ಲೇಖಿವಿಲ್ಲ. ಕೇವಲ ಗ್ರಾಪಂ ಸದಸ್ಯರಾದ ಮೋಹನ್, ಮೂರ್ತಿ, ಉಗ್ರಪ್ಪ, ಲವ, ರಾಜಪ್ಪ ಎಂಬುವರ ವಿರುದ್ಧ ಕಿರುಕುಳ ದೂರು ನೀಡಿದ್ದಾರೆ.

# ವಿಜ್ಞಾನದ ಪಾಠಗಳು ಮಾತೃಭಾಷೆಯಲ್ಲಿದ್ದರೆ ಒಳಿತು

### ಇಸ್ರೋ ಸಂಸ್ಥೆ ಮಾಜಿ ವಿಜ್ಞಾನಿ ಜಗನ್ನಾಥ್ ಅಭಿಮತ



ಮೈಸೂರು, ಆ.6(ಸಿಎನ್)– ವಿದೇಶಗಳು ಮುಂದುವರಿದಿದ್ದು ವಿಜ್ಞಾನದಿಂದ. ಅದರಲ್ಲೂ ಸ್ಥಳೀಯ ಭಾಷೆಗಳಲ್ಲಿ ವಿಜ್ಞಾನ ಕಲಿಸುವುದರಿಂದ ಮಕ್ಕಳನ್ನು ಸುಲಭವಾಗಿ ತಲುಪಿದರು. ಆ ಕೆಲಸವನ್ನು ವಿದೇಶಿಗರು ಅಚ್ಚುಕಟ್ಟಾಗಿ ನಿಭಾಯಿಸಿ ತಂತ್ರಜ್ಞಾನದ ಶಿಖರವೇರಿದರು. ನಮ್ಮ ದೇಶದಲ್ಲೂ ಕೂಡ ಮಾತೃಭಾಷೆಯಲ್ಲಿ ವಿಜ್ಞಾನ ಬೋಧಿಸುವ ಪ್ರಾಮಾಣಿಕ ಕೆಲಸ ಸರ್ಕಾರಗಳು ಮಾಡಬೇಕು ಎಂದು ಇಸ್ರೋ ಬಾಹ್ಯಾಕಾಶ ಸಂಸ್ಥೆ ಮಾಜಿ ವಿಜ್ಞಾನಿ ಜಗನ್ನಾಥ್ ಅವರು ಸಲಹೆ ನೀಡಿದರು.

ನಗರದ ಮೈವಿವಿಯ ಮಾನಸಗಂಗೋತ್ರಿ ವಿಶ್ವಕವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ, ಯಮುನಾ ಸೂರ್ಯನಾರಾಯಣ ಅವರು ರಚಿಸಿರುವ 'ವಿಶ್ವ ಮತ್ತು ಅದರಾಚೆ' ಕೃತಿ ಬಿಡುಗಡೆ ಸಮಾರಂಭಕ್ಕೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

ವಿಜ್ಞಾನ ಎಂದರೆ ವಿಶಿಷ್ಟವಾದ ಜ್ಞಾನವಾಗಿದ್ದು, ಮುಖ್ಯವಾಗಿ ಬರವಣಿಗೆಗೆ ವಯಸ್ಸಿನ ಅಂತರವಿಲ್ಲ. ಸುದೀರ್ಘ ಅನುಭವದಿಂದ ಮೇಧಾವಿತನ ಬರುತ್ತದೆ. ಈ ನಿಟ್ಟಿನಲ್ಲಿ ಕೌಶಲ್ಯ ಹೆಚ್ಚಿಸಿಕೊಂಡು ಮುಂದೆ ಸಾಗಬೇಕು. ಮುಂದುವರಿದ ದೇಶಗಳು ತಮ್ಮ ಮಾತೃಭಾಷೆಯಲ್ಲಿ ವಿಜ್ಞಾನದ ಪಾಠ ಆಲಿಸಿರುವುದರಿಂದ ಸಾಧನೆ ಮಾಡಿದ್ದಾರೆ. ನಮ್ಮಲ್ಲೂ ಸಹ ಈ ಅಂಶವನ್ನು ಅಳವಡಿಸಿಕೊಂಡು ಗುಲಾಮಗಿರಿತನವನ್ನು ಕೊನೆಗೊಳಿಸಬೇಕು. ಮಕ್ಕಳಿಗೆ ಏನೂ ಕೊಡಬೇಡಿ ಹುರಿದುಂಬಿಸಿ, ಧೈರ್ಯ ತುಂಬಿ ಸಾಕು, ಅದಕ್ಕೆ ಪ್ರತಿಯಾಗಿ ಅವರು ಸಾಧನೆಯ ಬಳುವಳಿ ನೀಡುತ್ತಾರೆ. ಈ ಔಪಚಾರಿಕ ಶಿಕ್ಷಣ ಪದ್ಧತಿ ಒಂದು ಬಾಗಿಲು ಇದ್ದಂತೆ, ಮುಂದೆ ಸಾಗಿ ಜೀವನ ರೂಪಿಸಿಕೊಳ್ಳಬೇಕು ಅಷ್ಟೆ ಎಂದರು.

ಬಳಿಕ ಗ್ರಾವಿಟಿ ಫೌಂಡೇಷನ್ ಸಂಸ್ಥೆ ಸಂಸ್ಥಾಪಕ ಎ.ಎಸ್.ಅಭಿಷೇಕ್ ಮಾತನಾಡಿ, ಕನ್ನಡದಲ್ಲಿ ವಿಜ್ಞಾನ ಸಂವಹನ ಮಾಡುವವರು ಅತೀ ಬುದ್ಧಿವಂತರು. ವಿಜ್ಞಾನ ಕಬ್ಬಿಣದ ಕಡಲೆಯಲ್ಲ, ಪ್ರಕೃತಿ ಮಧ್ಯೆ ಕಲಿಯಬೇಕು. ನಾಲ್ಕು ಗೋಡೆ ಮಧ್ಯೆ ಓದಿದರೆ ಜ್ಞಾನ, ನಾಲ್ಕು ಜನರ ಜೊತೆ ಬೆರೆತರೆ ಸಾಮಾನ್ಯಜ್ಞಾನ. ಜ್ಞಾನ ಹಾಗೂ ಸಾಮಾನ್ಯ ಜ್ಞಾನ ಎರಡೂ ಮಕ್ಕಳಿಗೆ ಅವಶ್ಯಕವಾಗಿವೆ. ಪೋಷಕರು ಮಕ್ಕಳಿಗೆ ಕನ್ನಡ ಪುಸ್ತಕಗಳನ್ನು ಓದುವಂತೆ ಪ್ರೋತ್ಸಾಹಿಸಬೇಕು. ಮಕ್ಕಳಿಗೆ ಆತ್ಮವಿಶ್ವಾಸ ನೀಡಿದರೆ ಸಾಕು. ಥಾಮಸ್ ಅಲ್ವಾ ಎಡಿಸನ್ 99 ಬಾರಿ ಸೋತು 100 ನೇ ಬಾರಿ ಬಲ್ಬ್ ಆವಿಷ್ಕರಿಸಿದರು. ಸೋಲೇ ಗೆಲುವಿನ ಸೋಪಾನ ಎಂದು ಹುರಿದುಂಬಿಸಿದರು.

ಧಾರವಾಡ ವಿಜ್ಞಾನ ಕ್ಷೇತ್ರದ ಶಿಕ್ಷಣಾಧಿಕಾರಿ ಚಂದ್ರಕಾಂತ್ ಮಾತನಾಡಿ, ವಿಜ್ಞಾನದ ಬಹುತೇಕ ಪುಸ್ತಕಗಳು ಆಂಗ್ಲ ಭಾಷೆಯಲ್ಲೇ ಇರುತ್ತದೆ. ಕನ್ನಡ ಭಾಷೆಯಲ್ಲಿ ವಿರಳ. ಇದೀಗ ಯಮುನಾ ಮೇಡಂ ಅವರು ಒಂದು ಸಾಹಸವನ್ನೇ ಮಾಡಿದ್ದಾರೆ. ಅವರು ಬರೆದ ಖಗೋಳ ಶಾಸ್ತ್ರದ ಪುಸ್ತಕ ನಾನೇ ಬರೆದಷ್ಟು ಖುಷಿಯಾಗಿದೆ. ಈ ಪುಸ್ತಕ ಗ್ರಾಮೀಣ ಭಾಗದ ಮಕ್ಕಳಿಗೆ ಮುಟ್ಟಬೇಕು, ಎಲ್ಲಾ ಸರ್ಕಾರಿ ಶಾಲೆ, ಸಾರ್ವಜನಿಕ ಗ್ರಂಥಾಲಯ, ಡಿಜಿಟಲ್ ಗ್ರಂಥಾಲಯಗಳಲ್ಲಿ ಪುಸ್ತಕ ದೊರೆಯುವಂತೆ ಆಗಬೇಕು ಎಂದರು.

ಸೌರಶಕ್ತಿ ಆವಿಷ್ಕಾರ ವಿಜ್ಞಾನಿ ಆರ್.ಜೆ.ನಾಗರಾಜ್ ಮಾತನಾಡಿ, ಯಮುನಾ ಅವರ ಅದ್ಭುತ ಸಾಹಸಗಳ ಪೈಕಿ ಕೃತಿ ರಚನೆ ಮತ್ತೊಂದು ಸಾಧನೆ. ಸಾಮಾನ್ಯ ಗೃಹಿಣಿಯಿಂದ ಒಂದು ಶಕ್ತಿಯಾಗಿ ಹೊರಹೊಮ್ಮಿದ್ದಾರೆ. ಅಭಿರುಚಿ ಇಲ್ಲದ ವಿಷಯಗಳನ್ನು ಕರಗತ ಮಾಡಿಕೊಂಡು, ಒಂದು ಪುಸ್ತಕವನ್ನೇ ಬರೆದಿದ್ದಾರೆ. ಸಾಧಿಸಬೇಕೆಂಬ ಅದೆಷ್ಟೋ ಮಹಿಳೆಯರ ಪಾಲಿಗೆ ಮಾದರಿಯಾಗಿದ್ದಾರೆ ಎಂದು ಹಾಡಿ ಹೊಗಳಿದರು.

ವೇದಿಕೆ ಕಾರ್ಯಕ್ರಮ ಬಳಿಕ ಚಿತ್ರಕಲೆ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಎನ್.ಐ ಕಾಲೇಜು ಪ್ರಾಧ್ಯಾಪಕ ಶ್ಯಾಮ್ ಸುಂದರ್, ಆಯೋಜಕ ಮಹೇಶ್, ತಾರೆ ಜಮೀನ್ ಪರ್ ಸಂಸ್ಥೆ ಸತೀಶ್, ಶುಭಾ ಮತ್ತಿತರರಿದ್ದರು.

## ಸದ್ವಿದ್ಯಾ ಶಿಕ್ಷಣ ಸಂಸ್ಥೆಯಿಂದ ಚೆಸ್ ಪಂದ್ಯಾವಳಿ



ಮೈಸೂರು, ಆ.6(ಜಿಎ)– ಮೈಸೂರಿನ ಸದ್ವಿದ್ಯಾ ಆಂಗ್ಲೋ ಸಂಸ್ಕೃತ ಪಾಠಶಾಲೆಯ ಶತೋತ್ತರ, ಸದ್ವಿದ್ಯಾ ಪ್ರೌಢಶಾಲೆಯ ಸುವರ್ಣ ಮಹೋತ್ಸವ ಹಾಗೂ ಸದ್ವಿದ್ಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವದ ನಿಮಿತ್ತವಾಗಿ ಶತೋತ್ತರ, ಸುವರ್ಣ, ರಜತ ಮಹೋತ್ಸವವನ್ನು ಆಚರಿಸುತ್ತಿದ್ದು, ಈ ಎಲ್ಲಾ ಉತ್ಸವಗಳ ಸಂಭ್ರಮಾಚರಣೆಯ ಭಾಗವಾಗಿ ಭಾನುವಾರ ರಾಜ್ಯ ಮಟ್ಟದ 19 ವರ್ಷದೊಳಗಿನವರ ರಾಪಿಡ್ ಚೆಸ್ ಟೂರ್ನಮೆಂಟ್‌ನ್ನು ಏರ್ಪಡಿಸಲಾಗಿತು.

ವಿಜಯನಗರದಲ್ಲಿರುವ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಪಂದ್ಯಾವಳಿಯನ್ನು ಮೈಸೂರಿನ ರೈಲ್ವೆ ಉದ್ಯೋಗಿ ಗ್ರಾಂಡ್ ಮಾಸ್ಟರ್ ಎಂ.ಎಸ್.ತೇಜಕುಮಾರ್ ಉದ್ಘಾಟಿಸಿದರು. ಪಂದ್ಯಾವಳಿಯಲ್ಲಿ ಮೈಸೂರಿನ ವಿವಿಧ ಶಾಲೆ–ಕಾಲೇಜು ಮತ್ತು ಚೆಸ್ ಅಕಾಡೆಮಿಗಳಿಂದ 416 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ರಾಜ್ಯ ಮಟ್ಟದ 19 ವರ್ಷದೊಳಗಿನವರ ರಾಪಿಡ್ ಚೆಸ್ ಟೂರ್ನಮೆಂಟ್‌ನಲ್ಲಿ ಎಂ.ಶಿವಂತ್ ಪ್ರಥಮ ಸ್ಥಾನ ಪಡೆದುಕೊಂಡರು, ದ್ವಿತೀಯ ಶ್ರೇಯಸ್ ಕೆ. ಪಾಟೀಲ್ (ಎಸ್‌ವಿಇಐ), ತೃತೀಯ ಪ್ರೀತಮ್ ಎಸ್.ರಾವ್(ಎಕ್ಸೆಲ್ ಪಬ್ಲಿಕ್ ಶಾಲೆ), ನಾಲ್ಕನೇ ಸ್ಥಾನ ಕೆ.ಎಂ.ಪ್ರಜ್ವಲ್(ಕೆಸಿಎ), ಐದನೇ ಸ್ಥಾನ ವಿಹಾನ್ ವೇಣು ಗೋಪಾಲ್(ಸೆಂಟ್ ಜೋಸೆಫ್), ಆರನೇ ಸ್ಥಾನ ಈಶ್ವರ್ ವೀರಪ್ಪ ಅಯ್ಯಪ್ಪ (ಅಮೃತ ವಿದ್ಯಾಲಯ) ಪಡೆದುಕೊಂಡರು.

ಏಳನೇ ಸ್ಥಾನವನ್ನು ಆರ್. ಅಶ್ವಥ್ ರಾವ್(ಎಲೈಟ್), ಎಂಟನೇ ಸ್ಥಾನ ಹೆಚ್.ಎಂ.ಆಕಾಶ್(ಸಕಲೇಶಪುರ), ಒಂಬತ್ತನೇ ಸ್ಥಾನ ಪಾಂಡೆ ವೇದಾಂಶಿ (ಕ್ರಿಸ್ಟ್ ಜೂನಿಯರ್ ಕಾಲೇಜು) ಮತ್ತು ಹತ್ತನೇ ಸ್ಥಾನವನ್ನು ಪಿ.ಧನ್ಯಶ್ರೀ(ಕದಂಬ ಚೆಸ್ ಅಕಾಡೆಮಿ) ಪಡೆದುಕೊಂಡರು.

ಕ್ರಿಯೇಟಿವಿಟಿ ಚೆಸ್ ಅಕಾಡೆಮಿಯ ಯು. ಸುಪ್ರಿಯಾ ವಿಶೇಷಚೇತನ ವಿಭಾಗದ ಪ್ರಶಸ್ತಿ ಪಡೆದುಕೊಂಡರೆ, ಬೆಸ್ಟ್ ಸದ್ವಿದ್ಯ ಪ್ರಶಸ್ತಿಯನ್ನು ಸದ್ವಿದ್ಯಾ ಸಂಸ್ಥೆಯ ಪಿ.ತೇಜಸ್ ತಮ್ಮದಾಗಿಸಿಕೊಂಡರು. ಬೆಸ್ಟ್ ಶಾಲೆಯಾಗಿ ಸೆಂಟ್ ಜೋಸೆಫ್ ಸೆಂಟರ್ ಶಾಲೆ ಮತ್ತು ಎನ್‌ಪಿಎಸ್ ಹೊರಹೊಮ್ಮಿತು. ಮಂಡ್ಯ ಚೆಸ್ ಅಕಾಡೆಮಿ ಮತ್ತು ಹಾಸನದ ಕದಂಬ ಚೆಸ್ ಅಕಾಡೆಮಿಗಳು ಬೆಸ್ಟ್ ಅಕಾಡೆಮಿ ಎಂದು ಪ್ರಶಸ್ತಿ ಪಡೆದುಕೊಂಡವು. ಸಂಸ್ಥೆಯ ಸಹಕಾರ್ಯದರ್ಶಿ ಪ್ರೊ.ಕೆ.ಎಸ್. ಹಿರಿಯಣ್ಣ, ಕಾಲೇಜಿನ ಪ್ರಾಂಶುಪಾಲ ವೈ.ಆರ್.ರಮೇಶ್ ಮತ್ತು ಪ್ರೌಢಶಾಲೆ ಮುಖ್ಯೋಪಾಧ್ಯಾಯ ರಾಮಚಂದ್ರ ಭಟ್ ಮತ್ತು ಕಾರ್ಯದರ್ಶಿ ಎಂ.ಎಸ್.ಕೆ.ನರಹರಿ ಬಾಬು ಅವರು ವಿಜೇತರಿಗೆ ನಗದು ಬಹುಮಾನ ವಿತರಿಸಿದರು.

## ದಲಿತ ಸಾಹಿತ್ಯ ಪರಿಷತ್ ಪ್ರಶಸ್ತಿ ಪ್ರದಾನ



ಮೈಸೂರು, ಆ.6(ಜಿಎ)–ವ್ಯಕ್ತಿ ಬೆಳೆಯುತ್ತಿದ್ದರೆ ಅವರಿಗೆ ಪ್ರೋತ್ಸಾಹ ನೀಡಬೇಕು, ಇಲ್ಲವೇ ಸುಮ್ಮನಿರಬೇಕು. ಅದನ್ನು ಬಿಟ್ಟು ಕಾಲೆಳೆಯುವ ಕೆಲಸವನ್ನು ಯಾರೂ ಮಾಡಬಾರದು ಎಂದು ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಉಮೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ದಲಿತ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಘಟಕದ ಬೆಳ್ಳಿ ಹಬ್ಬ ಸಂಭ್ರಮದ ಅಂಗವಾಗಿ ಭಾನುವಾರ ಆಯೋಜಿಸಿದ್ದ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಬಳಗದ ಅಧ್ಯಕ್ಷ ಸಿ.ನರೇಂದ್ರ ನಾಗವಾಲ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಅವರು ಮಾತನಾಡಿದರು.

ಇಂದು ದಲಿತರನ್ನು ಬೆಳೆಯಲು ಬಿಡದೆ ಕಾಲೆಳೆಯುವ ಕೆಲಸಗಳು ಹೆಚ್ಚಾಗಿ ನಡೆಯುತ್ತಿವೆ. ಯಾವುದೇ ವ್ಯಕ್ತಿ ಬೆಳೆಯುತ್ತಿದ್ದರೆ ಅವರಿಗೆ ಪ್ರೋತ್ಸಾಹ ನೀಡಬೇಕು, ಇಲ್ಲವೇ ಸುಮ್ಮನಿರಬೇಕು. ಅದನ್ನು ಬಿಟ್ಟು ಕಾಲೆಳೆಯುವ ಕೆಲಸವನ್ನು ಯಾರೂ ಮಾಡಬಾರದು. ದಲಿತರನ್ನು ತುಳಿಯುವಂತಹ ಕೆಲಸಗಳು ಹೆಚ್ಚಾಗಿವೆ. ಹೀಗಾಗಿ ಸಮುದಾಯದವರು ಶಿಕ್ಷಣದ ಜೊತೆಗೆ ಸಂಘಟಿತರಾಗಿ ಇದರ ವಿರುದ್ಧ ಹೋರಾಡಲು ಸಿದ್ಧರಾಗಬೇಕು. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಎಲ್ಲಾ ಸಮುದಾಯದವರೂ ಗೌರವಿಸಿದಾಗ ಭಾರತ ಎತ್ತರಕ್ಕೆ ಬೆಳೆಯುತ್ತದೆ ಎಂದರು.

ಇದೇ ವೇಳೆ ದಲಿತ ಸಾಹಿತ್ಯ ಪರಿಷತ್ತಿನ ಪ್ರಕಾಶನ ಸಮಿತಿ ಸದಸ್ಯರಾಗಿ ಡಾ.ಬಿ.ಮೂರ್ತಿ, ಪ್ರಕಟಣಾ ಸಮಿತಿ ಸದಸ್ಯರಾಗಿ ಡಾ.ಉಮೇಶ್ ಅವರನ್ನು ಆಯ್ಕೆ ಮಾಡಲಾಯಿತು. ದಲಿತ ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ಸಂಯೋಜಕ ಡಾ.ಚಂದ್ರಗುಪ್ತ, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ.ರಂಗಸ್ವಾಮಿ ಕಾಳಿಹುಂಡಿ, ಕಾರ್ಯದರ್ಶಿ ಡಾ.ಟಿ.ಮಂಜು ಸತ್ತಿಗೆಹುಂಡಿ, ಖಜಾಂಚಿ ಡಾ.ಬಿ.ಶಿವಶಂಕರ ಇನ್ನಿತರರು ಉಪಸ್ಥಿತರಿದ್ದರು.

## ವಿಜ್ಞಾನಿಗಳೊಂದಿಗೆ ವಿದ್ಯಾರ್ಥಿಗಳ ಸಂವಾದ

ಮೈಸೂರು, ಆ.6(ಜಿಎ)–ಮೈಸೂರು ಸೈನ್ಸ್ ಫೌಂಡೇಶನ್(ಎಂ.ಎಸ್.ಎಫ್) 11ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ನಗರದ ವಿಜಯ ವಿಠ್ಠಲ ಪಿಯು ಕಾಲೇಜಿನ ಸಹಯೋಗದೊಂದಿಗೆ ಕಾಲೇಜಿನ ಆವರಣದಲ್ಲಿ ವಿಜ್ಞಾನಿಗಳ ಸಂವಾದ ಏರ್ಪಡಿಸಲಾಗಿತು.



ಸಂವಾದದಲ್ಲಿ ಇಸ್ರೋ ನಿವೃತ್ತ ವಿಜ್ಞಾನಿ ಸಿ.ಡಿ.ಪ್ರಸಾದ್ ಚಂದ್ರಯಾನ 3 ವಿಷಯ ಕುರಿತು ಮಾತನಾಡಿ, ಚಂದ್ರನತ್ತ ಸಾಗಲು ನಾಸಾಗೆ 5 ದಿನಗಳು ಸಾಕಾದರೆ, ಇಸ್ರೋಗೆ 45 ದಿನ ಯಾಕೆ? ಎಂದು ಕೆಲವರು ಪ್ರಶ್ನಿಸುತ್ತಾರೆ. ಹಣ, ಇಂಧನ ಉಳಿತಾಯ ಮತ್ತು ಇವೆಲ್ಲವನ್ನು ಗಣನೆಯಲ್ಲಿಟ್ಟ ನಮ್ಮದೇ ಹೊಸ ತಂತ್ರಜ್ಞಾನವಿದು. ಇಂದು ಜಗತ್ತು ಈ ತಂತ್ರಜ್ಞಾನ ಕಲಿಕೆಗೆ ನಮ್ಮೊಂದಿಗೆ ಕೈ ಜೋಡಿಸಿವೆ ಎಂದರು.

ಚಂದ್ರಯಾನ ಬೆಳೆದು ಬಂದದ್ದು, ನಿಧಾನವಾಗಿ ಸಾಗುವ ಚಂದ್ರಯಾನ 3 ಎದುರಿಸಬೇಕಾದ ಸವಾಲು. ಹಿಂದಿನ ಯೋಜನೆಗಳಿಂದ ಕಲಿತ ಪಾಠಗಳನ್ನು ತಿಳಿಸಿದರು. ಈ ವೇಳೆ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಸಿ.ಎಸ್.ಆರ್.ಟಿ.ಐ ಹಿರಿಯ ವಿಜ್ಞಾನಿ ಡಾ.ಟಿ.ತಿಪ್ಪೇಸ್ವಾಮಿ ಮಾತನಾಡಿ, ವಿಜ್ಞಾನ ಬೋಧಕರು, ಪ್ರಮುಖ ಕೇಂದ್ರಗಳ ವಿಜ್ಞಾನಿಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಎಂಎಸ್‌ಎಫ್ ಮುಖ್ಯ ವೇದಿಕೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪತಂಗ ಸಪ್ತಾಹದ ಅಂಗವಾಗಿ ಎಂಎಸ್‌ಎಫ್ ಆಯೋಜಿಸಿದ್ದ ಪೋಸ್ಟ್ ಕಾರ್ಡ್ ಚಿತ್ರ ರಚನೆಗೆ 1,250 ವಿದ್ಯಾರ್ಥಿಗಳು ಚಿತ್ರ ಕಳುಹಿಸಿದ್ದು, ಉತ್ತಮವಾದ 400 ಪೋಸ್ಟ್ ಕಾರ್ಡ್‌ಗಳ ಪ್ರದರ್ಶನವನ್ನು ಡಾ.ಏಂಜೆಲ್ ರಾಜ್ ಉದ್ಘಾಟಿಸಿ, ಮಾತನಾಡಿದ ಅವರು, ಮೈಸೂರು ವಿಭಾಗದ ಅಂಚೆ ಕಚೇರಿಗಳ ಹಿರಿಯ ಸೂಪರಿಂಟೆಂಡೆಂಟ್ ಡಾ.ಏಂಜೆಲ್ ರಾಜ್ ಮಾತನಾಡಿ, ಚಂದ್ರಯಾನವಾಗಲಿ ಅಥವಾ ಬೆರಳಚ್ಚುಗಳ ಅಧ್ಯಯನವಿರಲಿ, ನಮಗೆ ಕಂಡುಬರುವ ಸಾಮಾನ್ಯ ಅಂಶ ವಿಜ್ಞಾನವಾಗಿದೆ. ಎಂಎಸ್‌ಎಫ್ ವಿದ್ಯಾರ್ಥಿಗಳಿಗಾಗಿ ಅನೇಕ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಇಂತಹ ಕಾರ್ಯಗಳು ಮುಂದೆ ದೇಶಕ್ಕೆ ವಿಜ್ಞಾನದ ನೊಬೆಲ್ ಪ್ರಶಸ್ತಿ ದೊರಕಿಸಲು ಪ್ರೇರೇಪಣೆಯಾಗಲಿದೆ ಎಂದರು.

ಪರಿಸರ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆ ಹಾಗೂ ಪೋಸ್ಟ್ ಕಾರ್ಡ್ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಬೆಂಗಳೂರು ಫೋರೆನ್ಸಿಕ್ ಲ್ಯಾಬ್ ಉಪನಿರ್ದೇಶಕ ಡಾ.ವಿನೋದ್ ಜೆ. ಲಕ್ಕಪ್ಪನ್, ಮಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರೊ. ಆರ್.ಶಂಕರ್, ಎಂಎಸ್‌ಎಫ್ ಅಧ್ಯಕ್ಷ ಸಿ.ಕೃಷ್ಣೇಗೌಡ, ಉಪಾಧ್ಯಕ್ಷ ಡಾ.ಟಿ.ಶಿವಲಿಂಗಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಪಾಕಿಸ್ತಾನ: ಹಜಾರಾ ಎಕ್ಸ್‌ಪ್ರೆಸ್ ರೈಲಿನ ಐದು ಬೋಗಿಗಳು ಹಳಿತಪ್ಪಿ 15 ಮಂದಿ ಸಾವು, ಹಲವರಿಗೆ ಗಾಯ

ಕರಾಚಿ, ಆ.6– ರಾವಲ್ಪಿಂಡಿಗೆ ತೆರಳುತ್ತಿದ್ದ ರೈಲಿನ ಐದು ಬೋಗಿಗಳು ಹಳಿತಪ್ಪಿದ ಪರಿಣಾಮ ಭಾನುವಾರ ಪಾಕಿಸ್ತಾನದಲ್ಲಿ ಕನಿಷ್ಠ 15 ಜನರು ಸಾವಿಗೀಡಾಗಿದ್ದಾರೆ ಮತ್ತು ಇತರರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹಜಾರಾ ಎಕ್ಸ್‌ಪ್ರೆಸ್ ಕರಾಚಿಯಿಂದ ರಾವಲ್ಪಿಂಡಿಗೆ ತೆರಳುತ್ತಿತ್ತು ಮತ್ತು ನವಾಬ್‌ಶಾ ಪ್ರದೇಶದ ಸರ್ಹಾರಿ ರೈಲು ನಿಲ್ದಾಣದ ಬಳಿ ಈ ಅಪಘಾತ ಸಂಭವಿಸಿದೆ.

ಹಾನಿಗೊಳಗಾದ ಬೋಗಿಗಳಿಂದ ಕನಿಷ್ಠ 15 ಶವಗಳನ್ನು ಹೊರತೆಗೆಯಲಾಗಿದ್ದು, ಸುಮಾರು 50 ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಗುತ್ತಿದೆ ಎಂದು ಪಾಕಿಸ್ತಾನ ರೈಲ್ವೆಯ ಉಪ ಅಧೀಕ್ಷಕ ಮಹಮೂದ್ ರೆಹಮಾನ್ ತಿಳಿಸಿದ್ದಾರೆ. ಸರ್ಹಾರಿ ರೈಲು ನಿಲ್ದಾಣದ ಬಳಿ ಅಪಘಾತದ ಸ್ಥಳದಲ್ಲಿ ರೈಲಿನ ಬೋಗಿಗಳು ತೀವ್ರ ಹಾನಿಗೊಳಗಾಗಿರುವುದು ಕಂಡುಬಂದಿದೆ. ಸದ್ಯ, ರಕ್ಷಣಾ ಕಾರ್ಯಾಚರಣೆಯ ಮೇಲೆ ಗಮನ ಹರಿಸಲಾಗಿದ್ದು, ಅಪಘಾತದ ಹಿಂದಿನ ಕಾರಣವನ್ನು ತನಿಖೆ ಮಾಡಲಾಗುತ್ತಿದೆ ಎಂದು ರೆಹಮಾನ್ ಹೇಳಿದರು.

## ಜಮ್ಮು–ಕಾಶ್ಮೀರದ ರಜೌರಿಯಲ್ಲಿ ಉಗ್ರನ ಸದೆಬಡಿದ ಸೇನಾಪಡೆ

ರಜೌರಿ (ಜಮ್ಮು–ಕಾಶ್ಮೀರ), ಆ.6– ಜಮ್ಮು ಮತ್ತು ಕಾಶ್ಮೀರದ ರಜೌರಿಯಲ್ಲಿ ಭಾರತೀಯ ಸೇನಾಪಡೆ ಎನ್ಕೌಂಟರ್ ನಡೆಸಿದ್ದು, ಓರ್ವ ಉಗ್ರನನ್ನು ಹತ್ಯೆ ಮಾಡಿದೆ. ರಜೌರಿ ಜಿಲ್ಲೆಯ ಬರಿಯಾಮಾ ಪ್ರದೇಶದಲ್ಲಿ ಉಗ್ರರು ಅಡಗಿ ಕುಳಿತಿರುವ ಕುರಿತು ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಭಾರತೀಯ ಸೇನಾಪಡೆ ಸ್ಥಳದಲ್ಲಿ ಕಾರ್ಯಾಚರಣೆ ಆರಂಭಿಸಿತ್ತು. ಕಾರ್ಯಾಚರಣೆ ಆರಂಭವಾಗುತ್ತಿದ್ದಂತೆಯೇ ಅಡಗಿ ಕುಳಿತಿದ್ದ ಉಗ್ರರು ಭದ್ರತಾಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ಸ್ಥಳವನ್ನು ಸುತ್ತುವರೆದ ಸೇನಾಪಡೆ ಎನ್‌ಕೌಂಟರ್ ನಡೆಸಿ ಇದೀಗ ಓರ್ವ ಉಗ್ರನನ್ನು ಹತ್ಯೆ ಮಾಡಿದೆ ಎಂದು ವರದಿಗಳು ತಿಳಿಸಿವೆ. ಸ್ಥಳದಲ್ಲಿ ಕಾರ್ಯಾಚರಣೆ ಮುಂದುವರೆದಿದೆ ಎಂದು ತಿಳಿದುಬಂದಿದೆ.

# ಕಾನೂನು ಸುವ್ಯವಸ್ಥೆಗೆ ಡಾ.ಜಿ.ಪರಮೇಶ್ವರ್‌ರಿಂದ ಬಿಗಿ ಕ್ರಮ

### ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್



ಮೈಸೂರು, ಆ.6(ಎಸ್‌ಬಿಡಿ)– ರಾಜ್ಯದಲ್ಲಿ ನೈತಿಕ ಪೊಲೀಸ್‌ಗಿರಿ ನಿಯಂತ್ರಣದ ಜೊತೆಗೆ ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕೈಗೊಂಡ ಬಿಗಿ ಕ್ರಮಗಳನ್ನು ವಿರೋಧ ಪಕ್ಷದವರಿಗೆ ಸಹಿಸಲಾಗುತ್ತಿಲ್ಲ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಹೇಳಿದರು.

ಡಾ.ಜಿ.ಪರಮೇಶ್ವರ್ ಅವರ ಹುಟ್ಟುಹಬ್ಬದ ಅಂಗವಾಗಿ ಡಾ.ಜಿ.ಪರಮೇಶ್ವರ್ ಯುವಸೇನೆ ವತಿಯಿಂದ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದ ಹಿರಿಯ ರಾಜಕಾರಣಿ ಡಾ.ಜಿ.ಪರಮೇಶ್ವರ್ ಅವರು ಹಲವು ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಇದೀಗ ಮೂರನೇ ಬಾರಿಗೆ ಗೃಹಸಚಿವರಾಗಿ ಸಮಾಜದ ಸ್ವಾಸ್ಥ್ಯ ಕಾಪಾಡಲು ಆದ್ಯತೆ ನೀಡಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿನ ಹಲವು ತಪ್ಪು ಕ್ರಮಗಳು ಹಾಗೂ ಲೋಪಗಳನ್ನು ಸರಿಪಡಿಸಿ, ಇಲಾಖೆಯನ್ನು ಮುನ್ನಡೆಸಿದ್ದಾರೆ. ಕಾನೂನು ಸುವ್ಯವಸ್ಥೆ ಕಾಪಾಡಲು ಬಿಗಿ ಕ್ರಮಗಳನ್ನು ಕೈಗೊಂಡಿದ್ದಲ್ಲದೆ ನೈತಿಕ ಪೊಲೀಸ್‌ಗಿರಿಗೆ ಕಡಿವಾಣ ಹಾಕಲು ಬಿಗಿಯಾದ ನಿಲುವು ಅನುಸರಿಸುತ್ತಿರುವುದನ್ನು ಸಹಿಸದ ವಿಪಕ್ಷ ಮುಖಂಡರು, ಸಚಿವರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದ ಹಿರಿಯ ಸಚಿವರಾಗಿ ಅವರು, ಯಾವುದೇ ರೀತಿಯಲ್ಲೂ ಕಾನೂನು ಸುವ್ಯವಸ್ಥೆಗೆ ಭಂಗವಾಗದಂತೆ ಎಚ್ಚರಿಕೆ ವಹಿಸಿರುವುದನ್ನು ವಿಪಕ್ಷದವರು ಗಮನಿಸಬೇಕು ಎಂದರು.

ಬಿಜೆಪಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿ ಮಾಡಿರುವ ಅಕ್ರಮಗಳ ತನಿಖೆಗೆ ಆದೇಶ ನೀಡಿದ್ದರಿಂದ ಅವರು ಭಯಭೀತರಾಗಿದ್ದಾರೆ. ಹಾಗಾಗಿ ಇಲ್ಲಸಲ್ಲದ ವಿಚಾರಗಳನ್ನು ಬಳಸಿಕೊಂಡು ಆರೋಪ ಮಾಡುತ್ತಿದ್ದಾರೆ. ಆದರೆ ಡಾ.ಜಿ.ಪರಮೇಶ್ವರ್ ಅವರ ಆಡಳಿತದ ಬಗ್ಗೆ ಜನತೆಗೆ ತಿಳಿದಿದೆ. ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷಗಳ ಕಾಲ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟಿಸಿ, ಕಾಂಗ್ರೆಸ್ ಅಧಿಕಾರ ಪಡೆಯಲು ಸ್ಮರಣೀಯ ಕೊಡುಗೆ ನೀಡಿದರು. ಗೃಹಸಚಿವರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿರುವ ಈ ರಾಜಕೀಯ ಮುತ್ಸದ್ಧಿಗೆ ಮತ್ತಷ್ಟು ರಾಜಕೀಯ ಶಕ್ತಿ ದೊರಕಿ, ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವಕಾಶವಾಗಬೇಕು ಎಂದು ಆಶಿಸಿದರು.

ಈ ವೇಳೆ ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಿ.ಮಂಜುನಾಥ್, ವಕೀಲ ಕಾಂತರಾಜ್, ಮಣಿಕಂಠ, ಮಹೇಶ್, ಮಹೇಂದ್ರ, ಲಿಂಗರಾಜು, ಪ್ರಕಾಶ್, ಮಂಜು, ಅವಿನಾಶ್, ಮಧು, ಅಶೋಕ್, ಪ್ರಜ್ವಲ್, ಕೋಟೆ ಮಂಜು ಮತ್ತಿತರರು ಉಪಸ್ಥಿತರಿದ್ದರು.

# ಸೇವಾ ಕಾರ್ಯಗಳ ಮೂಲಕ ವಿ.ಶ್ರೀನಿವಾಸ್‌ಪ್ರಸಾದ್ ಹುಟ್ಟುಹಬ್ಬ ಆಚರಣೆ



ಆಸ್ಪತ್ರೆಯ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸಲಾಯಿತು.

ನಂಜನಗೂಡು, ಆ.6– ಸಂಸದ ವಿ.ಶ್ರೀನಿವಾಸ್ ಪ್ರಸಾದ್‌ರವರ 77ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಡಾ.ಮೋಹನ್ ಸ್ನೇಹ ಬಳಗ ಮತ್ತು ಅವರ ಅಭಿಮಾನಿ ಬಳಗದ ವತಿಯಿಂದ ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ, ನಿರ್ಗತಿಕರಿಗೆ ಹೊದಿಕೆ ವಿತರಿಸಿ ಹಾಗೂ ಗಿಡ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಣೆ ಮಾಡಲಾಯಿತು.

ಬಿಜೆಪಿ ರಾಜ್ಯ ಮುಖಂಡ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿ, ನಾಡು ಕಂಡ ಅಪರೂಪದ ರಾಜಕಾರಣಿ ವಿ.ಶ್ರೀನಿವಾಸಪ್ರಸಾದ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ ಶೋಷಿತರ, ದಮನಿತರ ಧ್ವನಿಯಾಗಿ ಕೆಲಸ ಮಾಡಿದವರು. ಅವರ ಸುದೀರ್ಘ ರಾಜಕಾರಣದಲ್ಲಿ ಎಂದೂ ಕೂಡ ರಾಜಕೀಯ ತತ್ವ ಸಿದ್ಧಾಂತಗಳಲ್ಲಿ ರಾಜಿ ಆದವರಲ್ಲ, ಅವರ ರಾಜಕೀಯ ತತ್ವ ಸಿದ್ಧಾಂತಕ್ಕೆ ಧಕ್ಕೆ ಆದಾಗ ಅಧಿಕಾರವನ್ನು ಲೆಕ್ಕಿಸದೆ ರಾಜೀನಾಮೆ ಕೊಟ್ಟು ಹೋರಾಟ ಮಾಡಿದವರು ಎಂದರು.

ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹಾಗೂ ಚಾಮರಾಜನಗರ ಲೋಕಸಭಾ ವ್ಯಾಪ್ತಿಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಬ್ರೆಡ್, ಬಿಸ್ಕೆಟ್ ಹಂಚುವಂತಹ ಹಾಗೂ ಗಿಡ ನೆಡುವ ಸಾಮಾಜಿಕ ಸೇವಾ ಕಾರ್ಯಕ್ರಮಗಳ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಸದಸ್ಯರಾದ ಮಹದೇವ ನಾಯಕ, ಎಚ್.ಎಸ್.ಮೂಗಶೆಟ್ಟಿ, ಪುಟ್ಟರಾಜ ನಾಯಕ, ಮಲ್ಲಿಕಾರ್ಜುನ, ಶಿವರುದ್ರ ಶಂಕರ್, ರಾಜ್ಯ ವಾಲ್ಮೀಕಿ ನಾಯಕರ ಸೇನಾ ಸಮಿತಿ ರಾಜ್ಯಾಧ್ಯಕ್ಷ ಡಿ.ಪ್ರಕಾಶನಾಯಕ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

## ತಿ.ನರಸೀಪುರದಲ್ಲೂ ಶ್ರೀನಿವಾಸಪ್ರಸಾದ್ ಜನ್ಮದಿನ ಆಚರಣೆ



ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ರವರ 77ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ತಿ.ನರಸೀಪುರ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಬ್ರೆಡ್ ವಿತರಿಸಲಾಯಿತು.

ತಿ.ನರಸೀಪುರ, ಆ.6– ಹಾಲಿ ಸಂಸದ, ಕೇಂದ್ರದ ಮಾಜಿ ಸಚಿವ ವಿ.ಶ್ರೀನಿವಾಸ ಪ್ರಸಾದ್ ಅವರ ಹುಟ್ಟುಹಬ್ಬದ ಅಂಗವಾಗಿ ಡಾ.ಮೋಹನ್ ಸ್ನೇಹ ಬಳಗ ಹಾಗೂ ಪ್ರಲಕ್ಷ ಚಾರಿಟಬಲ್ ಟ್ರಸ್ಟ್ ವತಿಯಿಂದ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು-ಬ್ರೆಡ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಶ್ರೀನಿವಾಸ ಪ್ರಸಾದ್ ಅವರ ಅಳಿಯ ಡಾ.ಮೋಹನ್ ಕಳೆದ ಮೂರು ತಿಂಗಳ ಹಿಂದೆ ಎನ್.ಎಸ್. ಮೋಹನ್ ಸ್ನೇಹ ಬಳಗ ಹಾಗೂ ಪ್ರಲಕ್ಷ ಚಾರಿಟಬಲ್ ಟ್ರಸ್ಟ್ ಸಂಸ್ಥೆ ಸ್ಥಾಪಿಸಿ ಜನಸೇವೆ ಮಾಡುತ್ತಾ ಬಂದಿದ್ದೇವೆ. ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವ ಉದ್ದೇಶ ಬಳಗಕ್ಕಿದೆ.ಜಿಲ್ಲೆಯ ಎಲ್ಲಾ 8 ವಿಧಾನಸಭಾ ಕ್ಷೇತ್ರದಲ್ಲೂ ಜನಸೇವೆ ಮಾಡಲು ಸಂಸ್ಥೆ ಸ್ಥಾಪಿಸಿದ್ದೇವೆ ಎಂದರು.

ಬಿಜೆಪಿ ಮುಖಂಡ ಡಾ.ರೇವಣ್ಣ ಮಾತನಾಡಿ ದೇಶಕಂಡ ಹಿರಿಯ ಮುತ್ಸದ್ದಿ, ಬಡವರು, ದೀನದಲಿತರ ಬಗ್ಗೆ ಅಪಾರವಾದ ಕಾಳಜಿ ಹೊಂದಿರುವ ವಿ.ಶ್ರೀನಿವಾಸ ಪ್ರಸಾದ್ ಅವರ 77 ನೇ ಹುಟ್ಟುಹಬ್ಬವನ್ನು ನಿರ್ಗತಿಕರು ಹಾಗೂ ಅನಾಥಾಶ್ರಮದಂತಹ ಕ್ಷೇತ್ರದಲ್ಲಿ ವಿಶೇಷವಾಗಿ ಆಚರಣೆ ಮಾಡುತ್ತಿದ್ದೇವೆ. ಪ್ರಾಮಾಣಿಕರು, ದಕ್ಷ ರಾಜಕಾರಣಿಯಾದ ಪ್ರಸಾದ್‌ರವರ ಮಾರ್ಗದರ್ಶನ ಮುಂದಿನ ಪೀಳಿಗೆಗೆ ಅವಶ್ಯಕತೆ ಇದೆ. ದೇವರು ಅವರಿಗೆ ಆರೋಗ್ಯ ಆಯಸ್ಸು ವೃದ್ದಿಸಲಿ, ಆ ಮೂಲಕ ರಾಜ್ಯ ಮತ್ತು ದೇಶಕ್ಕೆ ಅವರ ರಾಜಕೀಯ ಸೇವೆ ಮತ್ತಷ್ಟು ಹೆಚ್ಚು ಲಭಿಸುವಂತಾಗಲಿ ಎಂದರು.

ಪ್ರಸಾದ್‌ರವರ ಅಳಿಯ ಡಾ. ಮೋಹನ್ ಅವರು ಸಮಾಜಮುಖಿ ಕೆಲಸಕ್ಕೆ ಮುಂದಾಗಿದ್ದು, ನಾವೆಲ್ಲರೂ ಅವರೊಂದಿಗಿದ್ದು, ಅವರ ಬೆಂಗಾವಲಾಗಿ ನಿಂತು ಕೆಲಸ ಮಾಡೋಣ ಎಂದು ತಿಳಿಸಿದರು.

ಈ ವೇಳೆ ಕೀಲು ಮತ್ತು ಮೂಳೆ ತಜ್ಞ ಡಾ.ದಯಾನಂದ ಬಾಬು, ಪವನ್, ಹಿರಿಯ ಮುಖಂಡ ಕರೋಹಟ್ಟಿ ಮಹದೇವಯ್ಯ ಕಾರ್ಯದರ್ಶಿ ಕೊತ್ತೇಗಾಲ ಸಿದ್ದಮಲ್ಲಪ್ಪ (ಕಿಟ್ಟಿ)ಸೋಸಲೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ನೆರೆಗೆತನಹಳ್ಳಿ ಪುಟ್ಟಸ್ವಾಮಿ, ಚೌಹಳ್ಳಿ ಸಿದ್ದರಾಜು, ಮೂಗೂರು ಜಯಣ್ಣ, ಮರಡೀಪುರ ನಾಗರಾಜು, ನಿಲಸೋಗೆ ಬಸವರಾಜು, ಮೂಗೂರು ಸಿದ್ದರಾಜು ಮತ್ತಿತರರಿದ್ದರು.

# ಕಂಪಲಾಪುರ ಗ್ರಾಪಂನಲ್ಲಿ ಕಾಂಗ್ರೆಸ್ ಆಡಳಿತ



ಕಂಪಲಾಪುರ, ಆ.6– ಕಂಪಲಾಪುರ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಾನಕಿ ವೆಂಕಟರಾಮು ಹಾಗೂ ಉಪಾಧ್ಯಕ್ಷರಾಗಿ ಸುಮಾ ಶಿವು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 17 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ಕಾಂಗ್ರೆಸ್ ಬೆಂಬಲಿತ 13 ಮಂದಿ ಆಯ್ಕೆಯಾಗಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದರು. ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ, ಉಪಾಧ್ಯಕ್ಷ ಸ್ಥಾನ ಹಿಂದುಳಿದ ವರ್ಗ (ಅ)ಕ್ಕೆ ಮೀಸಲಾಗಿತ್ತು. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಜಾನಕಿ ಹಾಗೂ ಸುಮ ಇಬ್ಬರನ್ನು ಹೊರತು ಬೇರಾರು ನಾಮಪತ್ರ ಸಲ್ಲಿಸದ ಕಾರಣ ಇವರ ಆಯ್ಕೆಯನ್ನು ಚುನಾವಣಾಧಿಕಾರಿ ಬಸವರಾಜು ಅಧಿಕೃತವಾಗಿ ಘೋಷಿಸಿದರು. ಗ್ರಾಪಂ ಸದಸ್ಯರಾದ ರಾಮಲಿಂಗಂ, ಶ್ರೀಪತಿ, ಚಂದ್ರು, ಸಣ್ಣತಮ್ಮಯ್ಯ, ಮಂಜು, ಸೋಮು, ಮಮತ, ರಾಣಿ, ರವಿ, ಶೀಲಾ ಹಾಜರಿದ್ದರು.

ಚುನಾವಣಾ ಪ್ರಕ್ರಿಯೆಯಲ್ಲಿ ಜೆಡಿಎಸ್ ಬೆಂಬಲದಿಂದ ಆಯ್ಕೆಯಾಗಿದ್ದ ಪ್ರತಿಭಾ, ಕವಿತಾ ಹಾಜರಾಗಿ ಅಚ್ಚರಿ ಮೂಡಿಸಿದರು.

ಇದೇ ಸಂದರ್ಭದಲ್ಲಿ ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಉದ್ಯಮಿ ಅಡಿಕೆ ನಿಂಗರಾಜು, ಪ್ರಕಾಶ್ ಗೌಡ, ತಮ್ಮಯ್ಯ, ಅಪ್ಪೆಮಂಜು, ಮಿಲ್ಕ್ ರವಿ, ಬೈ ತ್ಯಾಗರಾಜ್, ಇಟ್ಟಿಗಳ್ಳಿಮಹದೇವ್, ಶಿವು, ರಾಜೇಗೌಡ, ಚಿಕ್ಕಣ್ಣ, ಶಶಿ, ಜಯರಾಮ ಮತ್ತಿತರರು ಹಾಜರಿದ್ದರು. ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

# ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಶಿವಕುಮಾರ್, ಉಪಾಧ್ಯಕ್ಷರಾಗಿ ಶ್ವೇತ ಆಯ್ಕೆ



ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರಾಗಿ ಆಯ್ಕೆಯಾದ ಶಿವಕುಮಾರ್ ಹಾಗೂ ಶ್ವೇತರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅಭಿನಂದಿಸಿದರು.

ಬನ್ನೂರು, ಆ.6– ಪಟ್ಟಣ ಸಮೀಪದ ಯಾಚೇನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಶಿವಕುಮಾರ್, ಉಪಾಧ್ಯಕ್ಷರಾಗಿ ಶ್ವೇತ ಅವಿರೋಧವಾಗಿ ಆಯ್ಕೆಯಾದರು.

8 ಮಂದಿ ಜೆಡಿಎಸ್ ಬೆಂಬಲಿತ ಸದಸ್ಯರನ್ನೊಳಗೊಂಡ ಯಾಚೇನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ 2ನೇ ಅವಧಿಗೆ ಅಧ್ಯಕ್ಷ ಸ್ಥಾನವು 2ಎ ವರ್ಗಕ್ಕೆ ಮೀಸಲಾಗಿದ್ದು, ಉಪಾಧ್ಯಕ್ಷ ಸ್ಥಾನವು ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶಿವಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶ್ವೇತ ಮಾತ್ರವೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಮುದ್ದಾನಪ್ಪ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಯಾಚೇನಹಳ್ಳಿ ಗ್ರಾಮ ಬಹಳಷ್ಟು ರಾಜ್ಯದ ಜನರನ್ನು ಸೆಳೆದಿರುವ ಗ್ರಾಮವಾಗಿದ್ದು, ಗ್ರಾಮದ ಜನರ ಆಶಯವನ್ನು ಈಡೇರಿಸುವ ನಿಟ್ಟಿನಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು. ಗ್ರಾಮದ ಮಟ್ಟದಿಂದಲೇ ಜೆಡಿಎಸ್ ಪಕ್ಷವನ್ನು ಬಲಾಢ್ಯಗೊಳಿಸಲು ಎಲ್ಲರೂ ಸಹಕರಿಸಬೇಕೆಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಗ್ರಾಪಂ ಸದಸ್ಯ ವೈ.ಎನ್. ರಾಮಸ್ವಾಮಿ, ಶಿವಕುಮಾರ್, ಶೈಲಜಾ, ರೇಖಾ, ಮಹೇಶ್ ಕುಮಾರ್, ವೈ.ಎಸ್. ಶೇಖರ್, ವೈ.ಜಿ. ಮಹೇಂದ್ರ ಜೆಡಿಎಸ್ ಮುಖಂಡ ನಾಗೇಂದ್ರ, ನವೀನ್, ವೈ.ಎಂ. ಭೋಜರಾಜ್, ಕಿಟ್ಟಿ, ಪ್ರಕಾಶ್, ರವಿ ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರು, ಗ್ರಾಮಸ್ಥರು ಈ ವೇಳೆ ಉಪಸ್ಥಿತರಿದ್ದರು.

# ದಿ.ಧ್ರುವನಾರಾಯಣ್ ಜನ್ಮದಿನ ಆಚರಣೆ



ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಆರ್.ಧ್ರುವನಾರಾಯಣ್ ಅವರ 62ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಂಜನಗೂಡು ನಗರದ ಬಾಲಯೇಸು ದೇವಾಲಯದಲ್ಲಿ ನಿರ್ಗತಿಕರಿಗೆ ಹೊದಿಕೆ ಮತ್ತು ಬ್ರೆಡ್, ಹಣ್ಣು ವಿತರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮಾಜಿ ನಗರಸಭೆ ಉಪಾಧ್ಯಕ್ಷ ದೊರೆಸ್ವಾಮಿ, ಚರ್ಚ್‌ನ ಫಾದರ್ ಎಂ.ಅಂತಪ್ಪ, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಮುಖಂಡರಾದ ನಾಗೇಶ್, ಸ್ವಾಮಿ, ರಿಚ್ಚಿ, ವಿಜಯಭಾಸ್ಕರ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

# ಇಂದು ದೇವನೂರು ಶ್ರೀಗಳ ಗುರುವಂದನಾ ಮಹೋತ್ಸವ

ನಂಜನಗೂಡು, ಆ.6– ನಂಜನಗೂಡು ತಾಲೂಕಿನ ದೇವನೂರು ಶ್ರೀ ಪರಮಪೂಜ್ಯ ಶ್ರೀ ಮಹಾಂತ ಸ್ವಾಮಿಗಳ 77ನೇ ಗುರುವಂದನಾ ಮಹೋತ್ಸವದ ಅಂಗವಾಗಿ ದೇವನೂರು ಗ್ರಾಮದಲ್ಲಿ ನಾಳೆ (ಆ.7) ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಗ್ಗೆ 5.30ಕ್ಕೆ ಕತ್ತೃ ಗದ್ದುಗೆಗೆ ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ ಹಾಗೂ 9.30ಕ್ಕೆ ಪರಮಪೂಜ್ಯ ಶ್ರೀಗಳವರನ್ನು 77 ಕಳಶಗಳನ್ನು ಹೊತ್ತ ಸುಮಂಗಲಿಯರು ಕಲಾ ತಂಡಗಳು ಸೇರಿದಂತೆ ಸಕಲ ಬಿರುದಾವಳಿಗಳೊಡನೆ ಮೆರವಣಿಗೆ ಮಾಡಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಶ್ರೀ ಗುರುವಂದನಾ ಸಮಿತಿಯವರಾದ ಎಂ. ಗುರುಸ್ವಾಮಿಗಳು ತಿಳಿಸಿದ್ದಾರೆ. ಸೋಮವಾರ ಶ್ರೀ ಮಠದ ಮಂಗಳಾರತಿ ಆದಮೇಲೆ ಮಧ್ಯಾಹ್ನ 12 ಗಂಟೆಗೆ ಸುಮಾರು 10 ರಿಂದ 12 ಸಾವಿರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಪದವಿ (ಕೃಷಿ ಅರ್ಥಶಾಸ್ತ್ರ) ಯಲ್ಲಿ ಎರಡು ಚಿನ್ನದ ಪದಕ ಪಡೆದ ಹೆಚ್.ಡಿ.ಕೋಟೆ ವಿದ್ಯಾರ್ಥಿನಿ ಹೆಚ್.ಎ. ಬಿಂದು ಅವರಿಗೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಬೆಂಗಳೂರು ಕೃಷಿ ವಿವಿಯ 57ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪದವಿ ಪ್ರದಾನ ಮಾಡಿದರು. ಈ ವೇಳೆ ಕೃಷಿ ಸಚಿವ ಚಲುವರಾಯ ಸ್ವಾಮಿ, ಕುಲಪತಿ ಡಾ.ಎಸ್.ವಿ. ಸುರೇಶ್, ಕುಲಸಚಿವ ಡಾ.ಬಸವೇಗೌಡ ಅವರು ಉಪಸ್ಥಿತರಿದ್ದರು. ಈಕೆ ಹೆಚ್.ಡಿ. ಕೋಟೆಯ ಶಿಕ್ಷಕಿ ತಾರ ಮತ್ತು ಅಪ್ಪಾಜಿ ದಂಪತಿಗಳ ಪುತ್ರಿ.

# ಚಿದರವಳ್ಳಿ ಗ್ರಾಪಂನಲ್ಲಿ ಕಾಂಗ್ರೆಸ್ ಆಡಳಿತ



ತಿ.ನರಸೀಪುರ ಆ.6– ತಾಲೂಕಿನ ಚಿದರವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ರಾಜೇಶ್ವರಿ ಚಂದ್ರಶೇಖರ್ ಹಾಗೂ ಉಪಾಧ್ಯಕ್ಷರಾಗಿ ಜಗದೀಶ್ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಪಂಚಾಯಿತಿ ಕಾಂಗ್ರೆಸ್ ಬೆಂಬಲಿತರ ಪಾಲಾಗಿದೆ,

ಚಿದರಹಳ್ಳಿ ಗ್ರಾಪಂ ಸಭಾಂಗಣದಲ್ಲಿ ನಡೆದ ಎರಡನೇ ಅವಧಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯೆ ರಾಜೇಶ್ವರಿ ಚಂದ್ರಶೇಖರ್, ಉಪಾಧ್ಯಕ್ಷ ಸ್ಥಾನಕ್ಕೆ ಜಗದೀಶ್ ನಾಮಪತ್ರ ಸಲ್ಲಿಸಿದರು. ಇವರ ಆಯ್ಕೆಯನ್ನು ಚುನಾವಣಾ ಅಧಿಕಾರಿ ಹಾಗೂ ಸಿಡಿಪಿಓ ಗೋವಿಂದ ಘೋಷಿಸಿದರು.

ಗ್ರಾಪಂನಲ್ಲಿ ಒಟ್ಟು 18 ಮಂದಿ ಸದಸ್ಯರಿದ್ದು, ಈ ಸಂದರ್ಭದಲ್ಲಿ ನಿಕಟಪೂರ್ವ ಅಧ್ಯಕ್ಷ ಸಿದ್ಧಮಲ್ಲಪ್ಪ, ಸದಸ್ಯರುಗಳಾದ ಎಂ. ಪುಟ್ಟಸ್ವಾಮಿ, ನವಿದುಲ್ಲಾ, ಸಿದ್ದು, ಕೆ.ಮಹೇಶ, ಪ್ರಿಯಾಂಕ, ರಾಜಮ್ಮ, ಜ್ಯೋತಿ.ಎಂ ತೇಜಸ್ವಿನಿ, ತುಳಿಸಿ, ಶಿಲ್ಪ ಶ್ರೀ, ಬಸವರಾಜು, ಮೂರ್ತಿ, ಸಿ.ಆರ್ಮುಗಂ, ಸುಧಾ , ಜಯಲಕ್ಷ್ಮಮ್ಮ, ಪಿಡಿಓ ರವಿಕುಮಾರ್, ಮುಖಂಡರುಗಳಾದ ಗ್ರಾಪಂ ಮಾಜಿ ಅಧ್ಯಕ್ಷ ಚಿಕ್ಕಣ್ಣ, ಆನಂದ್, ನವೀನ್‌ಕುಮಾರ್, ಮಹದೇವಯ್ಯ, ನಂಜುಂಡಯ್ಯ, ರಾಮಚಂದ್ರಯ್ಯ, ನಾಯಕರ ಸಂಘದ ಮಹೇಶ್, ಸಿದ್ದರಾಜು, ವಿಜಯ ರಾಜ ಅರಸ್, ಬೆಳ್ಳಿಯಪ್ಪ, ರುಕ್ಮಿಣಿ ಮಹದೇವ್, ಶಿವರಾಂ, ನಂಜುಂಡೇಗೌಡ, ಮಹಾದೇವ, ಕೆಂಪರಾಜು, ಮಹದೇವಸ್ವಾಮಿ ಸೇರಿದಂತೆ ಇತರರು ಹಾಜರಿದ್ದರು.



ಮೈಸೂರು ತಾಲೂಕು ಯಡಕೋಳ ಗ್ರಾಮ ಪಂಚಾಯಿತಿ (ಸಿದ್ದರಾಮನಹುಂಡಿ)ಯ ಅಧ್ಯಕ್ಷರಾಗಿ ಶ್ರೀನಿವಾಸಪುರದ ಪುಟ್ಟಮ್ಮ ರಾಮು ಮತ್ತು ಉಪಾಧ್ಯಕ್ಷರಾಗಿ ಹೊಸಹಳ್ಳಿಯ ಶಿಲ್ಪಶ್ರೀ ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ಮಾಜಿ ಎಪಿಎಂಸಿ ಸದಸ್ಯ ಬಸವರಾಜು, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಸಿ. ಕೆಂಪಿರಯ್ಯ, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪುಟ್ಟಣ್ಣ, ಹೊಸಹಳ್ಳಿ ನಾಗರಾಜು ಹಾಗೂ ಕಾಂಗ್ರೆಸ್ ಮುಖಂಡರಾದ ಸಿದ್ದರಾಮು, ಮಂಜುನಾಥ, ಗೌತಮ್, ದೇವೇಗೌಡನಹುಂಡಿ ನಾಗರಾಜು, ರಾಮಣ್ಣ, ನಂಜುಂಡೇಗೌಡರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರನ್ನು ಕಾಣಬಹುದು.

| | |
|---|---|
| **ಡಿಆರ್‌ಸಿ ಸಿನಿಮಾಸ್** ದೂ : 4240422/4241800 | |
| ಸ್ಕ್ರೀನ್ 1 | ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ. |
| ಸ್ಕ್ರೀನ್ 3 | ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ. |
| ಸ್ಕ್ರೀನ್ 4 | ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ. |
| **ಐನಾಕ್ಸ್ ಮೂವೀಸ್** ದೂ : 2533444 / 2433456 | |
| ಸ್ಕ್ರೀನ್ 1 | ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ |
| ಸ್ಕ್ರೀನ್ 2 | ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ. |
| ಸ್ಕ್ರೀನ್ 3 | ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ. |
| ಸ್ಕ್ರೀನ್ 4 | ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ. |
| **ಮೈಸೂರು ವಿಷನ್ ಸಿನಿಮಾ** ದೂ : 0821–2973519 | |
| ಸ್ಕ್ರೀನ್ 1 | ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ. |
| ಸ್ಕ್ರೀನ್ 2 | ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 3 | ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ. |

**ಪಿವಿಆರ್ ಸಿನಿಮಾಸ್**
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಷ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಡಿಡಿ ರಿಟರ್ನ್ಸ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬೇಬಿ (ತೆ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಒನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ರಾಖಿ ಔರ್ ರಾಣಿ ಪ್ರೇಂ ಖಹಾನಿ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಶೀಲಾ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಲಾಕ್‌ಡೌನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಶೀಲಾ (ಕ) | 4 ಪ್ರದರ್ಶನಗಳು |
| **ಲಿಡೋ** | |
| ಕೌಸಲ್ಯ ಸುಪ್ರಜಾ ರಾಮ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಸ್ಪೈ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ನಮೋ ಭೂತಾತ್ಮ–2 (ಕ) | 4 ಪ್ರದರ್ಶನಗಳು |

# ಎರಡು ಬಾರಿ ಶಾಸಕರಾಗಿ ಗೆದ್ದು ಕಳಂಕ ನಿವಾರಿಸಿದ ಅನಿಲ್

## ಅಭಿನಂದನಾ ಸಮಾರಂಭದಲ್ಲಿ ಮಾಜಿ ಸಚಿವ ಕೋಟೆ ಶಿವಣ್ಣ ಶ್ಲಾಘನೆ



ಹೆಚ್.ಡಿ.ಕೋಟೆ, ಆ.6– ಹೆಚ್.ಡಿ. ಕೋಟೆ ಕ್ಷೇತ್ರದ ನಲವತ್ತು ವರ್ಷಗಳ ಇತಿಹಾಸದಲ್ಲಿ ಎರಡನೇ ಬಾರಿಗೆ ಶಾಸಕರಾಗಿ ಯಾರೂ ಆಯ್ಕೆ ಆಗಿರಲಿಲ್ಲ. ಆದರೆ ಅನಿಲ್ ಚಿಕ್ಕಮಾದು ಅವರು ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗುವ ಮೂಲಕ ತಾಲೂಕಿನಲ್ಲಿ ಯಾರೂ ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾಗುವುದಿಲ್ಲ ಎಂದು ಇದ್ದ ಕಳಂಕವನ್ನು ಹೋಗಲಾಡಿಸಿದ್ದಾರೆ ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಶ್ಲಾಘಿಸಿದ್ದಾರೆ.

ಬಾಬು ಜಗಜೀವನ್ ರಾಮ್ ವಿಚಾರ ವೇದಿಕೆ ವತಿಯಿಂದ ಎರಡನೇ ಬಾರಿ ಆಯ್ಕೆಯಾದ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು ಅನಿಲ್ ಚಿಕ್ಕಮಾದು ಅವರು ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಜನರ ಮೆಚ್ಚುಗೆ ಪಡೆದು ತಾಲೂಕಿನಲ್ಲಿ ಇದ್ದ ಕಳಂಕವನ್ನು ಹೋಗಲಾಡಿಸಿದ್ದಾರೆ. ಅವರು ಅತೀ ಕಿರಿಯ ವಯಸ್ಸಿನಲ್ಲಿ ಶಾಸಕರಾಗಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಧಿಕಾರ ಸಿಕ್ಕಿ ತಾಲೂಕನ್ನು ಅಭಿವೃದ್ಧಿ ಮಾಡಲಿ ಎಂದು ಹಾರೈಸಿದರು.

ನಾನು ಸಚಿವನಾಗಿದ್ದ ಸಂದರ್ಭದಲ್ಲಿ ತಾಲೂಕಿನ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಅದರಲ್ಲಿ ಮೈಸೂರು–ಮಾನಂದವಾಡಿ ರಸ್ತೆ, ಎಚ್.ಡಿ.ಕೋಟೆ ಪಟ್ಟಣಕ್ಕೆ ಕುಡಿಯುವ ನೀರು, ಅಗ್ನಿಶಾಮಕ ಠಾಣೆ, ಬಸ್ ಘಟಕ, ತೋಟಗಾರಿಕೆ ಇಲಾಖೆಗೆ ಒಂದು ಎಕರೆ ಜಾಗವನ್ನು ಕೊಡಿಸುವ ಕೆಲಸ ಮಾಡಿದ್ದೇನೆ ಎಂದು ಅವರು ತಮ್ಮ ಸಾಧನೆಯನ್ನು ತಿಳಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, 22 ಕೋಟಿ ರೂ. ವೆಚ್ಚದಲ್ಲಿ ಸಮಾಜ ವಾಸ ಮಾಡುತ್ತಿರುವ ಗ್ರಾಮಗಳ ಅಭಿವೃದ್ಧಿಗೆ ಕೆಲಸ ಮಾಡಿದ್ದೇನೆ. ಸಮಾಜದ ಅಭಿವೃದ್ಧಿಗೆ ನನ್ನ ಐದು ವರ್ಷದ ಅವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದ್ದೇನೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಟ್ಟಿರುವ ಸಮುದಾಯ ಭವನಗಳನ್ನು ನಿರ್ವಹಣೆ ಮಾಡಲು ಆಯಾ ಸಮುದಾಯಕ್ಕೆ ನೀಡದೆ ಇಲಾಖೆ ಜವಾಬ್ದಾರಿ ಹೊಸಿಕೊಂಡು ಕೆಲಸ ಮಾಡುತ್ತಿದೆ ಸಮುದಾಯದ ಮೂವರನ್ನು ನಿರ್ವಹಣಾ ಸಮಿತಿಗೆ ಆಯ್ಕೆ ಮಾಡ ಲಾಗಿದೆ ಎಂದರು. ಪುರಸಭಾ ಸದಸ್ಯೆ ಶಾಂತಮ್ಮ, ಸರಗೂರು ಪಪಂ ಸದಸ್ಯೆ ಅನ್ನತಾಯಮ್ಮ, ಡಾ: ಜಗಜೀವನ್ ರಾಂ ವಿಚಾರ ವೇದಿಕೆ ಅಧ್ಯಕ್ಷ ಕೊತ್ತೆಗಾಲ ತಿಮ್ಮಯ್ಯ, ಗೌರವ ಅಧ್ಯಕ್ಷ ಪರಶಿವಮೂರ್ತಿ, ಉಪಾಧ್ಯಕ್ಷರುಗಳಾದ ಉಡ ನಾಗರಾಜ್, ಸುಭಾಷ್ ಚಂದ್ರು, ಗುರುಮಲ್ಲು, ನಿರ್ದೇಶರುಗಳಾದ ಬಸವರಾಜು, ಮಾದೇವಯ್ಯ, ಸಣ್ಣಸ್ವಾಮಿ, ಗೋವಿಂದರಾಜು, ರಾಜಣ್ಣ, ಶಿವರಾಜು, ಸೋಮು, ಶಿವಯ್ಯ ಗಿರಿಪ್ರಸಾದ್, ಶಿವಲಿಂಗಯ್ಯ, ನಾಗರಾಜು, ಮಹದೇವು, ಪುಟ್ಟಸ್ವಾಮಿ, ಸಿದ್ದಪ್ಪ, ಚೆನ್ನಯ್ಯ, ಪ್ರಕಾಶ್, ಶ್ರೀನಿವಾಸ್, ದೇವನಾಥ್, ಕೃಷ್ಣ, ಶಿವರಾಜು, ಪಟೇಲ್ ಸೋಮು, ರೂಪ, ಪ್ರಸಾದ್, ರವೀಶ್, ತಿಮ್ಮರಾಜು, ಸೋಮೇಶ, ಹನುಮಂತ, ರಾಜೇಶ್ವರಿ, ರಾಮು, ಹರೀಶ, ಇನ್ನು ಮುಂತಾದವರು ಹಾಜರಿದ್ದರು.

# ತಂದೆ ಸಾವನ್ನಪ್ಪಿದ ಕೆಲವೇ ದಿನಗಳಲ್ಲಿ ಮಗನೂ ನಿಧನ



ಸರಗೂರು, ಆ.6– ತಂದೆ ಸಾವನ್ನಪ್ಪಿದ ಕೆಲವೇ ದಿನಗಳಲ್ಲಿ ಮಗನೂ ಸಾವನ್ನಪ್ಪಿರುವ ಘಟನೆ ತಾಲೂಕಿನ ತುಂಬಸೋಗೆ ಗ್ರಾಮದಲ್ಲಿ ಸಂಭವಿಸಿದೆ.

ತುಂಬಸೋಗೆ ಗ್ರಾಮದ ಎಸ್.ಟಿ.ತೋಟಪ್ಪ (54) ಎಂಬುವರೇ ನಿಧನರಾದವರಾಗಿದ್ದಾರೆ. ಜುಲೈ 10 ರಂದು ಇವರ ತಂದೆ ಟಿ.ಎಸ್.ಸಿದ್ದಲಿಂಗಪ್ಪನವರು ನಿಧನರಾಗಿದ್ದರು. ಈ ಘಟನೆ ಮಾಸುವ ಮುನ್ನವೇ ಮಗ ಎಸ್.ಟಿ.ತೋಟಪ್ಪ ನಿಧನರಾಗಿದ್ದಾರೆ. ಮೃತರು ಮೈಸೂರಿನ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ತುಂಬಸೋಗೆ ಸ್ವಗ್ರಾಮದ ತೋಟದಲ್ಲಿ ಭಾನುವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ನವಜಾತ ಶಿಶು ಜೀವವನ್ನು ಕೂಲಿಂಗ್ ಥೆರಪಿ ಮೂಲಕ ಉಳಿಸಿದ ಮದರ್‌ಹುಡ್ ಆಸ್ಪತ್ರೆ



ಮೈಸೂರು, ಆ.6– ಮೈಸೂರಿನ ಮದರ್‌ಹುಡ್ ಆಸ್ಪತ್ರೆಯ ಡಾ. ಸುಹೇಮ್ ಅಫ್ಜರ್ ಮತ್ತು ಡಾ. ಚೇತನ್ ಬಿ. ಅವರ ನೇತೃತ್ವದ ಸಲಹಾ ತಜ್ಞರು, ನವಜಾತ ಶಿಶು ತಜ್ಞರು ಮತ್ತು ಮಕ್ಕಳ ತಜ್ಞರ ತಂಡ ಎನ್‌ಐಸಿಯುನಲ್ಲಿದ್ದ ನವಜಾತ ಶಿಶುವಿಗೆ ಯಶಸ್ವಿಯಾಗಿ ಚಿಕಿತ್ಸೆ ಕೈಗೊಳ್ಳುವುದರೊಂದಿಗೆ ನೂತನ ಬದುಕಿನ ಭರವಸೆ ನೀಡಿದ್ದಾರೆ. ಖಾಸಗಿ ಆಸ್ಪತ್ರೆಯಿಂದ ಈ ಶಿಶುವನ್ನು ಮೈಸೂರಿನ ಮದರ್‌ಹುಡ್ ಆಸ್ಪತ್ರೆಗೆ ಕರೆತರಲಾಗಿತ್ತು. ಮೇ 21, 2023ರಂದು ಬೆಳಿಗ್ಗೆ ಸಾಮಾನ್ಯ ಹೆರಿಗೆಯಲ್ಲಿ ಶ್ರೀಮತಿ ಚಂದ್ರ(ಹೆಸರು ಬದಲಾಯಿಸಲಾಗಿದೆ) ಅವರು ಗಂಡು ಶಿಶುವೊಂದಕ್ಕೆ ಜನ್ಮ ನೀಡಿದ್ದರು. ಈ ಶಿಶುವಿಗೆ ರಿಸಸಿಟೇಷನ್(ಮತ್ತೆ ಬದುಕಿಸುವ ಕ್ರಮ ಕೈಗೊಳ್ಳುವುದು) ಚಿಕಿತ್ಸಾ ವಿಧಾನದ ಅಗತ್ಯವಿತ್ತು. ಹೆರಿಗೆ ಸಂದರ್ಭದಲ್ಲಿ ಕರುಳಬಳ್ಳಿ ಶಿಶುವಿನ ಕುತ್ತಿಗೆಗೆ ಸುತ್ತಿಕೊಂಡಿತ್ತು. ಇದರಿಂದ ಶಿಶುವಿಗೆ ತೀವ್ರವಾಗಿ ಉಸಿರು ಕಟ್ಟಿದಂತಾಗಿತ್ತು. ಈ ಕಾರಣ ಶಿಶುವಿಗೆ ರಿಸಸಿಟೇಷನ್ ಕ್ರಮದ ಅಗತ್ಯವಿತ್ತು. ಈ ರೀತಿ ಕುತ್ತಿಗೆಗೆ ಕರುಳಬಳ್ಳಿ ಸುತ್ತಿಕೊಂಡಾಗ ಶಿಶುವಿಗೆ 'ನೇಣು' ಬಿಗಿದಂತಾಗಿರುತ್ತದೆ. ಇದರಿಂದ ಮೆದುಳಿಗೆ ರಕ್ತ ಪೂರೈಸುವ ರಕ್ತನಾಳಗಳ ಮೇಲೆ ಒತ್ತಡ ಉಂಟಾಗುತ್ತದೆ. ಇದರಿಂದ ಮೆದುಳಿನ ಆಮ್ಲಜನಕದ ಪೂರೈಕೆ ನಿಂತುಹೋಗುತ್ತದೆ. ಇಂತಹ ಸಂದರ್ಭದಲ್ಲಿ ತಕ್ಷಣ ವೈದ್ಯಕೀಯ ಕ್ರಮದ ಅಗತ್ಯವಿರುತ್ತದೆ. ಶಿಶುವನ್ನು ಮೈಸೂರಿನ ಮದರ್‌ಹುಡ್ ಆಸ್ಪತ್ರೆಗೆ ಸೇರಿಸಲು ಶಿಫಾರಸ್ಸು ಮಾಡಿದ ವಿಜಯನಗರದ ಆಸ್ಪತ್ರೆಯ ವೈದ್ಯರ ತಂಡ ಶಿಶುವಿಗೆ ಥೆರಪ್ಯೂಟಿಕ್ ಹೈಪೋಥರ್ಮಿಯಾ ಅಥವಾ ಕೂಲಿಂಗ್ ಥೆರಪಿ(ತಂಪುಗೊಳಿಸುವ ಚಿಕಿತ್ಸೆ) ಕೈಗೊಳ್ಳುವುದನ್ನು ಪರಿಗಣಿಸಲು ಮದರ್‌ಹುಡ್ ಆಸ್ಪತ್ರೆಯನ್ನು ಸಂಪರ್ಕಿಸಿತ್ತು. ಮೈಸೂರಿನ ಮದರ್‌ಹುಡ್ ಆಸ್ಪತ್ರೆಯಲ್ಲಿ ಶಿಶುವಿಗೆ 7 ದಿನಗಳ ಕಾಲ ಚಿಕಿತ್ಸೆ ನೀಡಲಾಗಿತ್ತು. ಆರಂಭದ ಮೂರು ದಿನಗಳಲ್ಲಿ ಶಿಶುವಿಗೆ 'ಸರ್ವೋ ಕಂಟ್ರೋಲ್ಡ್ ಕೂಲಿಂಗ್ ಥೆರಪಿ' ನೀಡಲಾಯಿತು. ಮೂರು ದಿನಗಳ ಕಾಲ ತಾಪಮಾನವನ್ನು 33.50 ಡಿಗ್ರಿಗಳಷ್ಟು ಇರಿಸಲಾಗಿತ್ತು. ವೆಂಟೀನ್ ಅಡಿಯಲ್ಲಿ ಸೂಕ್ತ ವಾತಾವರಣದಡಿ ಶಿಶುವಿಗೆ 72 ಗಂಟೆಗಳ ಕಾಲ ಚಿಕಿತ್ಸೆ ನೀಡಲಾಯಿತು. ಶಿಶುವಿಗೆ ಉನ್ನತ ವೆಂಟೀನ್ ಮತ್ತು ಮಲ್ಟಿಪಾರ ಮಾನಿಟರಿಂಗ್ ಒಳಗೊಂಡಂತೆ ಸಮಗ್ರ ನವಜಾತ ಶಿಶು ಆರೈಕೆ ಕೈಗೊಳ್ಳಲಾಯಿತು. 72 ಗಂಟೆಗಳ ನಂತರ ಶಿಶು ಹಂತ ಹಂತವಾಗಿ ಚೇತರಿಸಿಕೊಂಡಿತ್ತಲ್ಲದೆ, 8ನೇ ದಿನ ಅದನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ದೇಶದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ 200ಕ್ಕೂ ಹೆಚ್ಚಿನ ನವಜಾತ ಶಿಶು ತೀವ್ರ ನಿಗಾ ಘಟಕ(ಎನ್‌ಐಸಿಯು) ಹಾಸಿಗೆಗಳ ಜಾಲವನ್ನು ಹೊಂದಿರುವ ಆಸ್ಪತ್ರೆಯಾದ ಮದರ್‌ಹುಡ್ ಹಾಸ್ಪಿಟಲ್ಸ್ ನಿಗದಿತ ಅವಧಿಗೂ ಮುನ್ನ ಜನಿಸಿದ ಅತ್ಯಂತ ಸಂಕೀರ್ಣ ಸ್ಥಿತಿಯಲ್ಲಿರುವ ಮಕ್ಕಳನ್ನು ನಿಭಾಯಿಸುವಲ್ಲಿ ಭಾರತದಲ್ಲಿ ಶಿಫಾರಸ್ಸು ಮಾಡಲಾಗುವ ಅತ್ಯುತ್ತಮ ಕೇಂದ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.


## ಕಾಣೆಯಾಗಿದ್ದಾರೆ



ನನ್ನ ತಾಯಿ ರತ್ನಮ್ಮ ಕೊಂ ಲೇಟ್ ಸಿದ್ದೇಗೌಡ ವಯಸ್ಸು 77 ವರ್ಷ, ಮೇಗಳಾಪುರ ಗ್ರಾಮ, ವರುಣಾ ಹೋ॥, ಮೈಸೂರು ತಾಲ್ಲೂಕು, ಇವರು ದಿನಾಂಕ 05.08.2023ರಂದು, ಮಧ್ಯಾಹ್ನ 12 ಗಂಟೆಯ ನಂತರದಿಂದ ಕಾಣೆಯಾಗಿದ್ದು ಇಲ್ಲಿಯವರೆಗೂ ಮನೆಗೆ ವಾಪಸ್ ಬಂದಿರುವುದಿಲ್ಲ, ಯಾರಾದರು ಕಂಡಲ್ಲಿ ಈ ನಂಬರಿಗೆ ಸಂಪರ್ಕಿಸಿ

ರತ್ನಮ್ಮ

ಮಹೇಶ: 8105293291


# ವಿಶೇಷ ಮಕ್ಕಳ ಶಾಲೆಗಳಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು : ಎಂಎಲ್‌ಸಿ ಮಂಜೇಗೌಡ

ಹಸಿರು ನಮ್ಮ ಉಸಿರು



ಮೈಸೂರು, ಆ.6– ವಿಶೇಷ ಮಕ್ಕಳು ದೇವರಿಗೆ ಸಮಾನರಾಗಿದ್ದು, ಸರ್ಕಾರ ವಿಶೇಷ ಮಕ್ಕಳ ಶಾಲೆಗಳನ್ನು ಗುರುತಿಸಿ ಹೆಚ್ಚು ಅನುದಾನ ನೀಡುವ ಮೂಲಕ ಪ್ರೋತ್ಸಾಹ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಒತ್ತಾಯಿಸಿದರು.

ಮೈಸೂರಿನ ಶ್ರೀರಾಂಪುರದ ಕಂದಾಯ ಬಡಾವಣೆಯಲ್ಲಿರುವ ಶ್ರೀನವ ಚೇತನ ಬಸವೇಶ್ವರ ಟ್ರಸ್ಟ್‌ನ ವಿಶೇಷ ಚೇತನರ ಶಾಲೆಗೆ ಭೇಟಿ ನೀಡಿ, ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಈ ಶಾಲೆಗೆ ಡಿ. ಸಾಲುಂಡಿ, ದೊಡ್ಡಹುಂಡಿ, ಉದ್ದೂರು, ಮುರುಡಗಳ್ಳಿ, ದೂರ, ಧನಗಳ್ಳಿಗಳಿಂದ ವಿಶೇಷ ಮಕ್ಕಳನ್ನು ಕರೆದುಕೊಂಡು ಬಂದು ಮರೀಗೌಡರು ಆರೈಕೆ ಮಾಡುತ್ತಿರುವುದನ್ನು ನೋಡಿದರೆ ಕರುಳು ಕಿತ್ತು ಬರುತ್ತದೆ. ವಿಶೇಷ ಚೇತನ ಮಕ್ಕಳ ನಡವಳಿಕೆ, ಸ್ವಾಭಾವಿಕವಾಗಿ ಇರುವುದಿಲ್ಲ. ಚೆನ್ನಾಗಿರುವ ಮಕ್ಕಳನ್ನೇ ನೋಡಿಕೊಳ್ಳುವುದು ಕಷ್ಟ ಈ ಮಕ್ಕಳು ಹೆತ್ತವರಿಗೆ ಭಾರ ಅನಿಸುತ್ತದೆ. ಆದರೆ. ಮರೀಗೌಡರು ಈ ಕೆಲಸವನ್ನು ಭಾಗ್ಯ ಎಂದುಕೊಂಡು ಸೇವೆ ಮಾಡುತ್ತಿದ್ದಾರೆ. ಇಂತಹ ಮಕ್ಕಳ ಸಂತತಿ ಹೆಚ್ಚಾಗದಿರಲಿ ಎಂದ ಅವರು, ಈ ವಿಶೇಷ ಮಕ್ಕಳ ಶಾಲೆಯ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು. ಸರ್ಕಾರ ದಿಂದ ದೊರೆಯುವ ಸವಲತ್ತುಗಳನ್ನು ಕೊಡಿಸಲು ಪ್ರಯತ್ನಿಸುತ್ತೇನೆ. ನನ್ನ ವಿಧಾನ ಪರಿಷತ್ ಸದಸ್ಯರ ಅನುದಾನದಲ್ಲಿ ಪ್ರತಿವರ್ಷ 1 ಲಕ್ಷರೂ. ಅನ್ನು ಸಂಸ್ಥೆಗೆ ನೀಡುವುದರ ಜೊತೆಗೆ ಈ ಸಂಸ್ಥೆಗೆ ಮೂಡಾದಿಂದ ಸಿ.ಎ. ನಿವೇಶನ ಕೊಡಿಸಿ, ನಿವೇಶನದ ಸಂಪೂರ್ಣ ಹಣವನ್ನು ತಾವೇ ಭರಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಮಾಕಿ ಮರೀಗೌಡ, ದಿನೇಶ್‌ಗೌಡ, ಧನಗಳ್ಳಿ ಬಸವ ರಾಜು, ರಮೇಶ್, ಶಿಕ್ಷಕರಾದ ಸನ್ಮತಿ, ಅಶ್ವಿನಿ, ತೇಜಸ್ವಿನಿ, ಮಂಜುಳ, ಬಸಪ್ಪ ಹಾಜರಿದ್ದರು.


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಗಾಯಿತ್ರಿಪುರಂ, ಐಶ್ವರ್ಯ ಕಾರ್ನರ್ ಹತ್ತಿರ 1ನೇ ಫೇಸ್ 1ನೇ ಹಂತ ಅನುಗ್ರಹ ಮನೆ ನಂ 204 ರಲ್ಲಿ ವಾಸವಾಗಿರುವ ಮಹೇಶ್ ಮತ್ತು ಎನ್ ಗೀತಾರವರ ಮಗನಾದ ಎಂ. ಪುನೀತ್‌ರಾಜ್, ಇವರು ಮೈನರ್ ಆಗಿದ್ದು. ಇವರ ಮೈನರ್ ಗಾರ್ಡಿಯನ್ ಆಗಿ ಎಂ. ಪುನೀತ್‌ರಾಜ್‌ರವರ ಪರ ತಾಯಿ ಎನ್. ಗೀತಾರವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೈಸೂರಿನ 8ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ.23/2023 ರಂತೆ ನಮ್ಮ ಕಕ್ಷಿದಾರರ ತಂದೆಯಾದ 1ನೇ ಪ್ರತಿವಾದಿ ಮಹೇಶ್ ಮತ್ತು 2ನೇ ಪ್ರತಿವಾದಿ ವ್ಯವಸ್ಥಾಪಕರು ಡಿ.ಸಿ.ಬಿ ಬ್ಯಾಂಕ್, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು ಈ ಇಬ್ಬರ ವಿರುದ್ಧ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಯು ವಿಚಾರಣೆಯಲ್ಲಿರುತ್ತದೆ. ಹೀಗಿರುವಾಗ ಸದರಿ ದಾವೆಯ 2ನೇ ಪ್ರತಿವಾದಿಯಾದ ಡಿ.ಸಿ.ಬಿ ಬ್ಯಾಂಕ್ ಕುವೆಂಪು ನಗರ ಮೈಸೂರುರವರು ನ್ಯಾಯಾಲಯದ ಗಮನಕ್ಕೆ ಬರದಂತೆ ಷೆಡ್ಯೂಲ್ ಸ್ವತ್ತನ್ನು ಹರಾಜು ಮಾಡಲು ಪ್ರಯತ್ನ ಮಾಡುತ್ತಿರುತ್ತಾರೆ. ಷೆಡ್ಯೂಲ್ ಸ್ವತ್ತಿನಲ್ಲಿ ನಮ್ಮ ಕಕ್ಷಿದಾರರಾದ ಎಂ.ಪುನೀತ್‌ರಾಜ್ ರವರಿಗೆ ಅರ್ಧ ಭಾಗಾಂಶ ಇರುತ್ತದೆ. ಆದ್ದರಿಂದ ಸದರಿ ಷೆಡ್ಯೂಲ್ ಸ್ವತ್ತನ್ನು ಯಾರು ಕೂಡ ಡಿ.ಸಿ.ಬಿ ಬ್ಯಾಂಕ್ ಕುವೆಂಪುನಗರ ಮೈಸೂರು ಇವರಿಂದ ಹರಾಜು ಮೂಲಕ ಷೆಡ್ಯೂಲ್ ಸ್ವತ್ತನ್ನು ಪಡೆಯಬಾರದೆಂದು ಈ ಮೂಲಕ ತಿಳಿಸಿರುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಮುಂದೆ ಉಂಟಾಗುವ ಕಾನೂನು ಗೊಂದಲಕ್ಕೆ ನಮ್ಮ ಕಕ್ಷಿದಾರರು ಬಾದ್ಯಸ್ಥರಾಗಿರುವುದಿಲ್ಲವೆಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಸಿಟಿ, ಗೋಕುಲಂ, 3ನೇ ಹಂತ ಕೆ.ಹೆಚ್.ಬಿ ಕಾಲೋನಿ, 7ನೇ ಮುಖ್ಯ ರಸ್ತೆ, ಇ.ಡಬ್ಲ್ಯೂ.ಎಸ್ ಮನೆ ನಂ.115 ರ ವಿಸ್ತೀರ್ಣ 3.35 X 9.10 ಮೀಟರ್‌ವುಳ್ಳ ಆರ್.ಸಿ.ಸಿ ಮನೆಗೆ ಚಕ್ಕುಬಂಧಿ;– ಪೂರ್ವಕ್ಕೆ :ಮನೆ ನಂ.116, ಪಶ್ಚಿಮಕ್ಕೆ: ಮನೆ ನಂ.114, ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಸಗಿ ಸ್ವತ್ತು.

ಸಹಿ/– ಕಕ್ಷಿದಾರರ ಪರ ವಕೀಲರು
ಮಂಜೇಗೌಡ ಎಸ್.ಬಿ ವಕೀಲರು ಕೆ.ಎ.ಆರ್–1676/2009
ನಂ.2393/3, 7ನೇ ಕ್ರಾಸ್ ನ್ಯೂಕಾಂತ್‌ರಾಜಅರಸ್ ರಸ್ತೆ,
ಕೆ.ಜಿ ಕೊಪ್ಪಲು, ಮೈಸೂರು.ಮೊ: 9739569120
ದಿನಾಂಕ: 6.08.2023 ಸ್ಥಳ: ಮೈಸೂರು



## ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು



## PUBLIC NOTICE

My Client Mrs. BHAGYA LAKSHMI K.R. W/o Mr.Lakshminarayana L., residing at Door No.583, 3rd Main, E & F Block, Ramakrishnanagar, Mysore, has lost the Original Registered Sale Deed Dt:02.11.2011, which is registered in Book-1, as Document No.MYN-1-15895-2011-12, Stored in CD No.MYND295 on 02.11.2011, in SRO, Mysore North, Mysore, which was executed by Sri M.Madappa infavour of Sri Mahadevappa Nanjappa in respect of the Schedule Property, while carrying the same to Zerox Shop in Kuvempunagar, Mysore on 01.07.2023. Hence, the finders of the said Original Registered Sale Deed Dt: 02.11.2011 is hereby informed to contact the undersigned Advocate within 7 days from the date of this publication. SCHEDULE PROPERTY: All that part and parcel of the Residential Site Property bearing Unique No.152200432061020126, Property No.590/ 590, Site No.07 as Gramapanchayat records situated at Bhugathahalli Village, Varuna Hobli, Mysore Taluk, Mysore District, measuring East to West: 9.144 Meters and North to South: 12.192 Meters, with Total Site Area of 111.48 Square Meters, coming under the limits of the Vajamangala Grama Panchayat, Mysore Taluk. Bounded on :- East By: Site No.06,West By: Site No.08, North By: Road, South By: Private Property

Sd/- PRADEEP KUMAR S.Advocate
En. No.1332/2012, Mobile No.9740315184
No.2917/A, 1st Floor, Opp. TTL College
Kantharaja Urs Road Saraswathipuram,
Date: 06.08.2023 Mysore - 570 009



## ಕಾಂಚಿಪುರಂ ಪ್ಯೂರ್ ಸಿಲ್ಕ್ ಸ್ಯಾರೀಸ್



Opening Today

ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ

ದಿನಾಂಕ: 07.08.2023 ರಿಂದ 08-08-2023 ರವರೆಗೆ
ಸಮಯ: ಬೆಳಗ್ಗೆ 9 ರಿಂದ ರಾತ್ರಿ 9 ರವರೆಗೆ

Flat 50% DISCOUNT SALE

Only 2 Days

Best Prise Best Selection

Contact: +91 7373035732

Madhu Silks, Kanchipuram.

ಸ್ಥಳ: ಹೋಟೆಲ್ ಸದರನ್ ಸ್ಟಾರ್, #13–14 ವಿನೋಬಾ ರಸ್ತೆ, ಮೈಸೂರು – 570005



## ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಮೈಸೂರು– 570008, ಜೆ.ಪಿ.ನಗರ, ಡಿ ಬ್ಲಾಕ್, 13ನೇ ಮೇನ್, 24 ನೇ ಕ್ರಾಸ್, ಮನೆ ನಂ.152 ರಲ್ಲಿ ವಾಸ ಮಾಡು ತ್ತಿರುವ ಶ್ರೀ.ಎಂ.ಚಂದ್ರಶೇಖರ ರಾವ್ ರವರ ಧರ್ಮಪತ್ನಿಯಾದ ಸುಮಾರು 65 ವರ್ಷ ವಯಸ್ಸುಳ್ಳ ಶ್ರೀಮತಿ.ಕುಸುಮ.ಹೆಚ್.ಕೆ, ರವರು ಬೆಂಗಳೂರು– 560098, ರಾಜರಾಜೇಶ್ವರಿನಗರ, ಬಿ.ಇ.ಎಂ.ಎಲ್ ಲೇಔಟ್, 3ನೇ ಹಂತ, 1ನೇ ಕ್ರಾಸ್, "ಶ್ರೀ ಸಾಯಿಮಾನಸ", ನಂ.577, ವಾಸ ಮಾಡುತ್ತಿರುವ ಶ್ರೀ.ಬಿ.ಎಸ್.ಪ್ರಕಾಶ್ ರವರ ಧರ್ಮಪತ್ನಿಯಾದ ಸುಮಾರು 62 ವರ್ಷ ವಯಸ್ಸುಳ್ಳ ಶ್ರೀಮತಿ.ಶೀಲಾ. ಹೆಚ್.ಎಸ್ ರವರ ಸಂಪೂರ್ಣ ಸ್ವಾಧೀನಾನುಭವ ಹಾಗೂ ಮಾಲೀಕತ್ವಕ್ಕೆ ಒಳಪಟ್ಟ ಮೈಸೂರು ನಗರ, ಖಿಲ್ಲೆ ಮೊಹಲ್ಲಾ, ನಾಚನಹಳ್ಳಿ ಬಿ ಬ್ಲಾಕ್ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ.26, ಇದರ ಅಳತೆ ಪೂರ್ವ ಪಶ್ಚಿಮ: 60 ಅಡಿಗಳು ಮತ್ತು ಉತ್ತರ ದಕ್ಷಿಣ: 45 ಅಡಿಗಳು, ಒಟ್ಟು ವಿಸ್ತೀರ್ಣ:2700.00 ಚದರ ಅಡಿಗಳು, ಇದಕ್ಕೆ ಚಕ್ಕುಬಂದಿ:–ಪೂರ್ವಕ್ಕೆ : ನಿವೇಶನ ಸಂಖ್ಯೆ.35, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ.25, ದಕ್ಷಿಣಕ್ಕೆ: ನಿವೇಶನ ಸಂಖ್ಯೆ.27, ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಈ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ, ಯಾವುದೇ ಹಕ್ಕು ಬಾಧ್ಯತೆಗಳು, ಮಾಲೀಕತ್ವ ಅಥವಾ ಯಾವುದೇ ಕ್ಲೈಮ್ ಅನ್ನು ಹೊಂದಿರುವವರು ಮತ್ತು ಈ ವ್ಯವಹಾರಕ್ಕೆ ಆಕ್ಷೇಪಣೆಯನ್ನು ಹೊಂದಿರುವವರು ಇದ್ದರೆ ಹಾಗೂ ಯಾರಿಗಾದರೂ ಯಾವುದೇ ರೀತಿಯ ತಕರಾರುಗಳು ಇದ್ದ ಪಕ್ಷದಲ್ಲಿ, ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 10 ದಿನಗಳ ಒಳಗಾಗಿ ನಮ್ಮನ್ನು ಸೂಕ್ತ ದಾಖಲೆಗಳ ಸಮೇತವಾಗಿ ತಮ್ಮ ತಕರಾರಿನೊಂದಿಗೆ ಸಲ್ಲಿಸತಕ್ಕದ್ದು, 10 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ಮೇಲೆ ಹೇಳದ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಶುದ್ಧ ಕ್ರಯ ಪತ್ರ ನೊಂದಣಿ ಮಾಡಿಕೊಳ್ಳಲಾಗುತ್ತದೆ ಹಾಗೂ ಮುಂದಿನ ದಿನಗಳಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆ ಹಾಗೂ ಕ್ಲೈಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

ಸಹಿ/– ಶ್ರೀ.ಹೇಮಂತ್ ಕುಮಾರ್.ಸಿ, ಬಿಬಿಎಂ, ಎಂ.ಬಿ.ಎ, ಎಲ್.ಎಲ್.ಬಿ. ವಕೀಲರು , ವಿಳಾಸ: ನಂ.6, ರಾಮ ಮಂದಿರ ಸ್ಟ್ರೀಟ್,ಯರಗನಹಳ್ಳಿ, ಶಕ್ತಿನಗರ ಪೋಸ್ಟ್ ಮೈಸೂರು–570029
ದೂರವಾಣಿ ಸಂಖ್ಯೆ:7411956514
ದಿನಾಂಕ.07.08.2023



## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬಿಳಿಕೆರೆ ಹೋಬಳಿ, ಕರಿಮುದ್ದನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಗೋವಿಂದೇಗೌಡ ರವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮ (ಆಧಾರ್ ನಂ. 9666 3925 1637) ರವರು ಈ ಕೆಳಗೆ ಕಾಣಿಸಿರುವ ಷೆಡ್ಯೂಲ್ ಜಮೀನನ್ನು, ಅದರ ಮಾಲೀಕರಾದ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ರಾಮನಹುಂಡಿ ಗ್ರಾಮದಲ್ಲಿ ವಾಸವಾಗಿರುವ ದೊಡ್ಡಹೂವಿನ ಸಿದ್ದೇಗೌಡರವರ ಮಗನಾದ ಶ್ರೀ ಸಿದ್ದೇಗೌಡ (ಆಧಾರ್ ನಂ. 4118 2823 6645) ಮತ್ತು ಇವರ ಕುಟುಂಬ ವರ್ಗದವರಿಂದ ಕ್ರಯಕ್ಕೆ ಕೊಂಡುಕೊಳ್ಳಲು ತೀರ್ಮಾನಿಸಿ ಕ್ರಯದ ಕರಾರು ಪತ್ರ ಮಾಡಿಕೊಳ್ಳಲು ಇಚ್ಛಿಸಿರುತ್ತಾರೆ.

ಷೆಡ್ಯೂಲ್‌ನಲ್ಲಿ ನಮೂದಾಗಿರುವ ಜಮೀನು ಹಾಲೀ ಮಾರಾಟಗಾರರಾದ ಶ್ರೀ ಸಿದ್ದೇಗೌಡ ಮತ್ತು ಇವರ ಕುಟುಂಬ ವರ್ಗದವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತು ಅವರ ಮಾಲೀಕತ್ವ ಮತ್ತು ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಖರೀದಿಸಲು ಮೇಲ್ಕಂಡ ಜಮೀನಿನ ಮಾಲೀಕರಿಂದ ಒಪ್ಪಂದ ಮಾಡಿಕೊಂಡಿದ್ದು, ಸದರಿ ಜಮೀನಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೇ ಯಾರಿಗಾದರೂ ಯಾವುದೇ ರೀತಿಯ ಕಾನೂನು ಬದ್ಧ ಹಕ್ಕು–ಬಾಧ್ಯತೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ತಕರಾರು ಮತ್ತು ಹಕ್ಕು ಬಾಧ್ಯತೆಗೆ ಸಂಬಂಧಿಸಿದಂತೆ ಲಿಖಿತವಾಗಿ ಹಾಗೂ ಖುದ್ದಾಗಿ ಅಥವಾ ವಕೀಲರ ಮೂಲಕ ಸಂಬಂಧಪಟ್ಟ ದಾಖಲಾತಿಗಳೊಡನೆ ಈ ಕೆಳಕಂಡ ವಿಳಾಸಕ್ಕೆ ತಿಳಿಯಪಡಿಸತಕ್ಕದ್ದು, ಒಂದು ವೇಳೆ ಈ ಮೇಲ್ಕಂಡ ಹತ್ತು (10) ದಿನಗಳ ಒಳಗಾಗಿ ಯಾವುದೇ ತಂಟೆ ತಕರಾರುಗಳು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರೊಡನೆ ಕ್ರಯದ ಕರಾರು ಪತ್ರವನ್ನು ಮಾಡಿಕೊಳ್ಳುತ್ತಾರೆ. ಆನಂತರ ಬರುವ ತಕರಾರು ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಿಂದಲೂ ಬಾಧ್ಯಪಡಿಸುವುದಿಲ್ಲ ಎಂದು ತಿಳಿಯಪಡಿಸಲಾಗಿದೆ, ಹಾಗೂ ಸದರಿ ಷೆಡ್ಯೂಲ್ ಜಮೀನಿಗೆ ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇಲ್ಲವೆಂದು ತಿಳಿದು ಹಾಲೀ ಮಾರಾಟಗಾರರೇ ಜಮೀನಿನ ಸಂಪೂರ್ಣ ಮಾಲೀಕರೆಂದು ಪರಿಗಣಿಸಿ ಕೆಳಗೆ ತಿಳಿಸಿದ ಷೆಡ್ಯೂಲ್ ಜಮೀನನ್ನು ಕ್ರಯಕ್ಕೆ ಪಡೆಯಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತು: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಜಯಪುರ ಹೋಬಳಿ ಕೆಮ್ಮಣ್ಣಪುರ ಗ್ರಾಮದ ಸರ್ವೆ ನಂ. 23 ರ ಪೈಕಿ 04–00 (ನಾಲ್ಕು ಎಕರೆ) ಜಮೀನಿಗೆ ಚಕ್ಕುಬಂದಿ.

ಪೂರ್ವಕ್ಕೆ: ಕೊಳೇಗೌಡ ಮತ್ತು ಮರೀಗೌಡರವರ ಜಮೀನು ; ಪಶ್ಚಿಮಕ್ಕೆ: ಕಾಡಯ್ಯ ಉರುಫ್ ಕಾಡೇಗೌಡರವರ ಜಮೀನು ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ರಾಮಕೃಷ್ಣ ಮತ್ತು ದೊಡ್ಡದಾಸೇಗೌಡ ರವರ ಜಮೀನು.

Date: 4-8-2023 Sd/- Umesh N.R., B.A.L., MA, LLB
Advocate & Notary
Off. No. 474, Opp. Ganapathi Temple, Gaddige Main Road, Bogadi, Mysore: 570 026. Mob: 9844635621



**WANTED MARKETING EXECUTIVE**
For a Reputed Corrugated Box Manufacturing Company in Mysore.
PART TIME / FULL TIME.
Experience in sales is preferred.
Call: 8217789294

**JOB VACANCY**
URGENT REQUIREMENT
Job Location : Mysore
Qualification
BE/Diploma Civil Engineer with minimum 3 Years Exp
Call : 96204 64286

**JOB OPPORTUNITY**
URGENTLY REQUIRED
Female PHARMACIST and a Female M.Sc Candidate for a Reputed Hospital in Mysore.
Attractive salaries offered.
FREE ACCOMMODATION PROVIDED. Please contact:
9845049079/ 9620099936

**VIBRANT CNM PU COLLEGE**
VIBRANT MOODUBIDIRE
(A unit of Vibrant Education and Charitable Trust ®)
No.710, Mahadevapura, Near Judge Quarters, Srirampura Village, Mysuru - 570008
Join Integrated Coaching Programme with Residential Campus
NEET, CET, & JEE COACHING ALONG WITH BOARD EXAM
REGISTRATION STARTED FOR I PUC
Attend Scholarship test and Avail up to 100% Concession
Courses offered: PCMB / PCMC
NEET – CET – BOARD
JEE – CET – BOARD
Under the able Guidance of
Mr. Subhash Jha, Director & CEO – PHYSICS Faculty, Alumini of IIT BOMBAY, Ex-faculty-RESONANCE Kota, Rajasthan. Teaching experience of 10 years
Mr. Chandrashekhara Raje Urs, Director (MEDICAL EXCEL) – CHEMISTRY Faculty, Teaching experience of 26years
Dr.S.N. Venkatesh Nayak, Director (VISTARA) – BOTANY Faculty, Renowned author of BIOLOGY Tutor book for various competitive exam (NEET/CET), Teaching experience of 26 years
Mr. Sharath Gore, Director (Operations) – PHYSICS Faculty, Ex-faculty of BASE Educational Services, Bangalore, Teaching experience of 11 years
Mr. S.M. Basha, Director (AKANKSHA) – CHEMISTRY Faculty, Ex-faculty of AAKASH Institute (Delhi, Mumbai), Teaching experience of 26 years
Mr. Yogesh Bedekar, Director (ACADEMICS) – ZOOLOGY Faculty, Teaching experience of 26 years (India & Abroad)
ABOVE 600 MARKS
Swati K Sunadholi – NEET 2022 - 383, NEET 2023 - 651
TR Manvitha – NEET 2022 - 472, NEET 2023 - 629
Dhanush D – NEET 2022 - 314, NEET 2023 - 614
athish Gowda HE – NEET 2022 - 340, NEET 2023 - 606
KR Laxmi – NEET 2022 - 448, NEET 2023 - 606
aishnavi D Rao – NEET 2022 - 417, NEET 2023 - 603
BHARATH GOWDA S R. – NEET 2022 - 432, NEET 2023 - 602
Above 600 - 7 Students Above 550 - 30 Students
Above 500 - 72 Students Above 4500 - 120 Students
TRANSPORTATION AVAILABLE
SEPARATE HOSTEL FOR BOYS & GIRLS
For more information Call now: 90363 73627, 74114 17028
Visit Website: www.virantpucollege.com